epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237
ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ
KARNATAKA MALLA, MUMBAI
ಸಂಪುಟ : 35 ಸಂಚಿಕೆ : 149 ಬುಧವಾರ 01-07-2026 ಬೆಲೆ : ₹ 6 ಪುಟಗಳು - 10
ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ

ಕರ್ನಾಟಕ ಸಂಘ ಅಂಧೇರಿ - ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ - 2026 : ಸಮಾರೋಪ

ಅಂಧೇರಿ ಕರ್ನಾಟಕ ಸಂಘಕ್ಕೆ ಮುಂಬಯಿಯ ಕನ್ನಡ ಸಂಸ್ಕೃತಿ ಸಾರಥ್ಯದ ಹೆಗ್ಗಳಿಕೆ - ಕಳ್ಳಿಗೆ ದಯಾಸಾಗರ್ ಚೌಟ


ರವಿ ನಾಯ್ಕಾಪು, ಸುರೇಶ್ ಕಾಂಚನ್, ಸುರೇಂದ್ರ ಕುಮಾರ್ ಮಾರ್ನಾಡ್, ಟಿ. ಆರ್. ಮಧುಸೂದನ್ ಅವರಿಗೆ ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿ ಪ್ರದಾನಿಸಿದ ಸಂದರ್ಭ.


ಡಾ. ಶಿವಾನಂದ ಕೆಳಗಿನ ಮನೆ, ಸಿ.ಎಂ.ಆರ್. ಶ್ರೀನಾಥ್, ಟಿ. ವಿ. ಬಾಬು, ಪ್ರಭಾ ಎನ್. ಸುವರ್ಣರವರಿಗೆ ಗೌರವಾರ್ಪಣೆ.


ಡಾ. ಆರ್. ಕೆ. ಶೆಟ್ಟಿ ಅವರಿಗೆ ಗೌರವ


ಹೆಚ್.ಬಿ.ಎಲ್ ರಾವ್ ಮರಣೋತ್ತರ ಪ್ರಶಸ್ತಿಯನ್ನು ಪುತ್ರಿ ಪದ್ಮಾವತಿ ಯು. ಭಟ್ ಅಳಿಯ ಉದಯ್ ಭಟ್, ಮೊಮ್ಮಗಳು ಶುಭಾಶ್ರೀ ಭಟ್ ಸ್ವೀಕರಿಸಿದರು.


ಕಲಾವಿದ ಉಮೇಶ್ ಎನ್. ಶೆಟ್ಟಿ ದತ್ತಿನಿಧಿ ಸ್ವೀಕರಿಸಿದಾಗ.


ವಿಶ್ವನಾಥ ದೊಡ್ಡಮನೆ ಅವರಿಗೆ ದತ್ತಿ ನಿಧಿ ಹಾಗೂ ಜಗದೀಶ್ ಪೂಜಾರಿಯವರಿಗೆ ಆರೋಗ್ಯ ನಿಧಿಯನ್ನು ನೀಡಲಾಯಿತು.


ಸಾ. ದಯಾಪರವಾಗಿ ಪತ್ನಿ ನಯನಾ ಸಾಲ್ಯಾನ್ ದತ್ತಿ ನಿಧಿ ಸ್ವೀಕರಿಸಿದರು.


ಕಳ್ಳಿಗೆ ದಯಾಸಾಗರ್ ಚೌಟ ಅವರಿಗೆ ಗೌರವ

(ಚಿತ್ರ, ವರದಿ : ನವೀನ್ ಕೆ. ಇನ್ನ)

ಮುಂಬಯಿ, ಜೂ. 30- ಸಾಮಾಜಿಕ-ಸಾಮುದಾಯಿಕ ಸೇವೆಯ ಜೊತೆಗೆ ಕನ್ನಡ ಸಾಹಿತ್ಯ-ನೃತ್ಯ-ಸಂಗೀತ-ಕಲಾ ಕ್ಷೇತ್ರದ ಅತ್ಯಪೂರ್ವ ಕಾರ್ಯಕ್ರಮಗಳನ್ನು ಸಂಘಟಿಸಿ ಸಾದರಪಡಿಸುವ ಮೂಲಕ ಪುಟ್ಟ ಸಂಸ್ಥೆ ಅಂಧೇರಿ ಕರ್ನಾಟಕ ಸಂಘವು ಪ್ರಸ್ತುತ ಮುಂಬಯಿ ಮಹಾನಗರದಲ್ಲಿ ಕನ್ನಡಿಗನ ಸಾಂಸ್ಕೃತಿಕ ಅಸ್ಮಿತೆಯನ್ನುಳಿಸುವ ಘನ ಕೆಲಸದ ಸಾರಥ್ಯ ವಹಿಸಿದೆ ಎಂದು ಹಿರಿಯ ಪತ್ರಕರ್ತ-ಸಂಸ್ಕೃತಿ ಚಿಂತಕ, ವಾಗ್ಮಿ ಕಳ್ಳಿಗೆ ದಯಾಸಾಗರ್ ಚೌಟ ನುಡಿದರು.

ಅವರು ಜೂ. 28ರ ಆದಿತ್ಯವಾರದಂದು ಕುರ್ಲಾ ಪೂರ್ವದ ಬಂಟರ ಭವನದ ರಾಧಾಬಾಯಿ ಟಿ. ಭಂಡಾರಿ ಸಭಾಗೃಹದಲ್ಲಿ ಕರ್ನಾಟಕ ಸಂಘ ಅಂಧೇರಿ (ರಿ.) ಜಾನಪದ ಸಂರಕ್ಷಣಾ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ-2026 ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಾಮಾಜಿಕ ಕಾಳಜಿ ಮತ್ತು ಪೋಷಣೆಯ ಧ್ಯೇಯಗಳಿಂದ ವೃದ್ಧ ವೇತನ-ವಿಧವಾ ವೇತನ ನೀಡುವ ವಿಧಾಯಕ ಯೋಜನೆಯ ಮೂಲಕ ತನ್ನ ಅಸ್ತಿತ್ವವನ್ನು ಬಹು ವಿಭಿನ್ನವಾಗಿ ಕಾಣಿಸುವುದರೊಂದಿಗೆ ಎರಡು ದಶಕದ ಹಿಂದೆ ಆರಂಭಗೊಂಡ ಈ ಸಂಸ್ಥೆ, ಸಂಗೀತ-ರಂಗಭೂಮಿ-ಕಲಾ ಪ್ರೋತ್ಸಾಹದ ಮೂಲಕ ಮುನ್ನಡೆಯಿತು. 2020ರಲ್ಲಿ ನೂರಕ್ಕೂ ಹೆಚ್ಚು ಒಳನಾಡಿನ ಶ್ರೇಷ್ಠ ಸಾಹಿತಿ-ಕವಿ-ಸಂಗೀತಗಾರರನ್ನು ಕರೆಸಿ ಮೂರು ದಿನಗಳ ಹೊರನಾಡ ಸಂಗೀತ ಸಂಭ್ರಮವೆಂಬ ಅಭೂತಪೂರ್ವ ಕಾರ್ಯಕ್ರಮವನ್ನು ಈ ಸಂಘವು ನೀಡಿದೆ ಎನ್ನಲು ಅಭಿಮಾನವಾಗುತ್ತದೆ. ಮಹಾನಗರದ ಇತರ ಕನ್ನಡ ಸಂಸ್ಥೆಗಳನ್ನು ಜೊತೆಗಿರಿಸಿ ಸಂಸ್ಥೆ ಪ್ರತಿವರ್ಷ ಹೊರನಾಡ ಸಂಸ್ಕೃತಿ ಸಂಭ್ರಮವನ್ನಾಚರಿಸುತ್ತಿದೆ. ಈ ವರ್ಷದ ಕಾರ್ಯಕ್ರಮವೂ ವೈವಿಧ್ಯಮಯವಾಗಿ ಮೂಡಿ ಬಂದಿದೆ. ಸಂಘ ತನ್ನ ವಿಶಿಷ್ಟ ಕಾರ್ಯಕ್ರಮಗಳ ಕಂಪನ್ನು ಒಳನಾಡಿನವರೆಗೂ ಒಯ್ಯುತ್ತಿದೆ. ತನ್ಮೂಲಕ ಹಿರಿಯ ಕನ್ನಡ ಸಂಸ್ಥೆಗಳಿಗೆ ಮಾದರಿಯಾಗಬಲ್ಲಂತೆ ಮುಂಬಯಿಯಲ್ಲಿ ಕನ್ನಡದ ನುಡಿ ಸಂಸ್ಕೃತಿಯ ತೇರಿಗೆ ಹೆಗಲು ಕೊಟ್ಟಿದೆ ಎಂದು ದಯಾಸಾಗರ್ ಚೌಟ ವಿಶ್ಲೇಷಿಸಿ ಶ್ಲಾಘಿಸಿದರು.

ಸಮಾರಂಭದಲ್ಲಿ ಪತ್ರಕರ್ತ ರವಿ ನಾಯ್ಕಾಪು (ನಿರೂಪಣಾ ಕೌಸ್ತುಭ ಪ್ರಶಸ್ತಿ), ಮುಂಬಯಿ ಸಮಾಜ ಸೇವಕ ಕ್ಲಾಸಿಕ್ ಗ್ರೂಪ್ ಹೋಟೆಲ್ಸ್ ಸುರೇಶ್ ಕಾಂಚನ್, ಐಲೇಸಾ ದಿ.ವಾಯ್ಸ್ ಆಫ್ ಓಷನ್ (ರಿ.) ಕಲಾವಿದ ಸುರೇಂದ್ರ ಕುಮಾರ್ ಶೆಟ್ಟಿ ಮಾರ್ನಾಡ್ ಇವರಿಗೆಲ್ಲಾ ಶ್ರೇಷ್ಠ ಹೊರನಾಡ ಕನ್ನಡಿಗ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಅಲ್ಲದೆ ಕುಲಪತಿಗಳು ಆದಿಕವಿ ವಿಶ್ವವಿದ್ಯಾಲಯ ರಾಯಚೂರು ಡಾ. ಶಿವಾನಂದ ಕೆಳಗಿನಮನೆ, ಸಮಾಜ ಸೇವಕರಾದ ಆನೆಕಲ್ಲು ಟಿ. ವಿ. ಬಾಬು ಕೋಲಾರ, ಸಿ. ಎಮ್. ಆರ್. ಶ್ರೀನಾಥ್, ಮುಂಬಯಿ ರೂಪದರ್ಶಿ ಪ್ರತಿಭಾ ಎನ್. ಸುವರ್ಣ ಇವರಿಗೆಲ್ಲಾ ಗೌರವಾರ್ಪಣೆ ಮಾಡಲಾಯಿತು ಹಾಗೂ ದಿ. ಗಣೇಶ್ ಬಲ್ಯಾಯ ಸ್ಮರಣಾರ್ಥ ಶಶಿಕಲಾ ಬಲ್ಯಾಯ ಮತ್ತು ಯತೀಶ್ ಗಣೇಶ್ ಬಲ್ಯಾಯ ಕೊಡ ಮಾಡುವ ದತ್ತಿನಿಧಿ ಪ್ರಶಸ್ತಿಯನ್ನು ಹೊರನಾಡ ಕನ್ನಡ ಸಮಾಜ ಸೇವೆಗಾಗಿ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ (ರಿ.) ಮುಂಬಯಿ ಸಂಸ್ಥಾಪಕ ವಿಶ್ವನಾಥ ದೊಡ್ಮನೆ ಹಾಗೂ ಪೆಲತ್ತೂರು ಗುರು ನಿವಾಸ ದಿ. ಕೊರಗ ಪೂಜಾರಿ ಸ್ಮರಣಾರ್ಥ ಶ್ರದ್ಧಾ ಕ್ಯಾಟರರ್ಸ್ ಮಾಲಕ ಶಂಕರ್ ಪೂಜಾರಿ ಪೆಲತ್ತೂರು ಕೊಡಮಾಡುವ ದತ್ತಿ ನಿಧಿಯನ್ನು ರಂಗ ನಿರ್ದೇಶಕ ದಯಾನಂದ ಸಾಲ್ಯಾನ್ (ಸಾ. ದಯಾ) ಪರವಾಗಿ ಪತ್ನಿ ನಯನಾ ಸಾಲ್ಯಾನ್ ಸ್ವೀಕರಿಸಿದರು. ದಿ. ಆಶಾ ಮಾಧವ ಶೆಟ್ಟಿ ಸ್ಮರಣಾರ್ಥ ಮಾಧವ ಶೆಟ್ಟಿ ಮತ್ತು ಮಕ್ಕಳು ಕೊಡ ಮಾಡುವ ಆರೋಗ್ಯ ನಿಧಿಯನ್ನು ಸುಜಾತಾ ಪೂಜಾರಿ ಪರವಾಗಿ ಜಗದೀಶ್ ಪೂಜಾರಿ ಅವರಿಗೆ ಹಾಗೂ ದಿ. ಬೊಮ್ಮಯ್ಯ ಶೆಟ್ಟಿ ಮತ್ತು ದಿ. ಅಬ್ಬು ಶೆಟ್ಟಿ ಸ್ಮರಣಾರ್ಥ ಕೃಷ್ಣ ಬಿ. ಶೆಟ್ಟಿ ಮತ್ತು ಸುನೀತಾ ಶೆಟ್ಟಿ ಕೊಡ ಮಾಡುವ ದತ್ತಿನಿಧಿಯನ್ನು ಹಿರಿಯ ಕಲಾವಿದ ಉಮೇಶ್ ಎನ್. ಶೆಟ್ಟಿ ಅವರಿಗೆ ನೀಡಲಾಯಿತು. ದಿ. ಎಚ್.ಬಿ.ಎಲ್ ರಾವ್ ಮರಣೋತ್ತರ ಪ್ರಶಸ್ತಿಯನ್ನು ಅವರ ಪುತ್ರಿ ಪದ್ಮಾವತಿ ಯು. ಭಟ್, ಅಳಿಯ ಉದಯ ಭಟ್ ಮೊಮ್ಮಗಳು ಶುಭಾಶ್ರೀ ಭಟ್ ಸ್ವೀಕರಿಸಿದರು. ಅಂತೆಯೇ ಸ್ಥಳೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ, ದತ್ತು ಸ್ವೀಕಾರ ಹಾಗೂ ಬಹುಮಾನ ವಿತರಣೆಯನ್ನು ಮಾಡಲಾಯಿತು. ಪ್ರಶಸ್ತಿ ಹಾಗೂ ಗೌರವಾರ್ಪಣೆ ಮತ್ತು ದತ್ತಿ ನಿಧಿಯನ್ನು ಸ್ವೀಕರಿಸಿದವರ ಪರಿಚಯವನ್ನು ಕರ್ನಾಟಕ ಸಂಘದ ಸಂಸ್ಥಾಪಕ ಕೃಷ್ಣ ಬಿ. ಶೆಟ್ಟಿ ಮತ್ತು ಮಹಿಳಾ ವಿಭಾಗದ ಕಾರ್ಯದರ್ಶಿ ಪ್ರತಿಮಾ ಸುರೇಂದ್ರ ಹೆಗ್ಡೆ, ಭವ್ಯಾ ಶೆಟ್ಟಿ, ಅಶೋಕ್ ಶೆಟ್ಟಿ, ಪ್ರೀತಿ ರೈ, ಉದಯ್ ಕೇರ್ಗಲ್ ಮಾಡಿದರು. ಅಲ್ಲದೆ ಖ್ಯಾತ ಅಂತಾರಾಷ್ಟ್ರೀಯ ಗಾಯಕ ಗೋನಾ ಸ್ವಾಮಿ ಹಾಗೂ ವೈದ್ಯೆ ಡಾ| ಸಮಿಕಾ ಶಂಕರ್ ಪೂಂಜಾ ಅವರನ್ನು ಗೌರವಿಸಲಾಯಿತು. ಊರಿನಿಂದ ಆಗಮಿಸಿದ ಪತ್ರಕರ್ತರದ ಪುರುಷೋತ್ತಮ್ ಪೆರ್ಲ ಮತ್ತು ಗಂಗಾಧರ್ ತೆಕ್ಕೆಮನೆ ಅಲ್ಲದೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶಿವಾನಂದ್ ಕೋಟ್ಯಾನ್ ಕಟಪಾಡಿ ರಚಿತ 'ಗುರು ದರ್ಶನ' ಕೃತಿಯನ್ನು ಕಲ್ಕೂರ ಪ್ರತಿಷ್ಠಾನ ಮಂಗಳೂರು ಅಧ್ಯಕ್ಷ ಪ್ರದೀಪ್ ಕುಮಾರ ಕಲ್ಕೂರ ಬಿಡುಗಡೆಗೊಳಿಸಿ ಮಾತನಾಡಿ, ತುಳುನಾಡ ಜನರು ದೇವತಾರಾಧನೆ, ದೈವಾರಾಧನೆ, ಕಲಾರಾಧನೆಯೊಂದಿಗೆ ಎಲ್ಲರನ್ನೂ ಜೊತೆ ಸೇರಿಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡವರು. ಮುಂಬಯಿಯಂತಹ ಮಹಾನಗರದಲ್ಲಿ ಉದ್ಯಮ, ಉದ್ಯೋಗ ದಂಧೆಗಳ ಜೊತೆ ಸಮಾಜ ಪರ ಚಿಂತನೆಯೊಂದಿಗೆ ಸಂಘ ಸಂಸ್ಥೆಗಳನ್ನು ಕಟ್ಟಿ ಮಾತ್ರ ವ್ಯವಸ್ಥೆಗೆ ಗೌರವ ಕೊಡುವ ನಿಟ್ಟಿನಲ್ಲಿ ನೀವೆಲ್ಲರೂ ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು ಶ್ಲಾಘನೀಯವಾದದ್ದು. ದೀನ-ದಲಿತರ ಸೇವೆಯೊಂದಿಗೆ ಭಗವಂತನನ್ನು ಕಾಣಬಹುದೆಂಬ ಪರಿಕಲ್ಪನೆಯೊಂದಿಗೆ ತುಳುನಾಡ ಜನರು ತಾನು ದುಡಿದು ಸಂಪಾದಿಸಿದ ಒಂದಂಶವನ್ನು ಸಮಾಜ ಪರ ಸೇವೆಗೆ ವಿನಿಯೋಗಿಸುತ್ತಿರುವುದು ಎಲ್ಲರಿಗೂ ಮಾದರಿ. ಮಾನವೀಯತೆಯಿಂದ ಮಾತ್ರ ಸಂಸ್ಕೃತಿಯೊಂದಿಗೆ ಬದುಕನ್ನು ಕಟ್ಟಿಕೊಳ್ಳುವ ಚಿಂತನೆಯನ್ನೊಳಗೊಂಡ ನಾರಾಯಣ ಗುರುಗಳ 'ಗುರು ದರ್ಶನ' ಕೃತಿಯನ್ನು ಬಿಡುಗಡೆಗೊಳಿಸುವ ಭಾಗ್ಯ ನನಗೆ ಒದಗಿ ಬಂದಿರುವುದಕ್ಕೆ ಸಂತೋಷವಾಗಿದೆ ಎಂದರು.

ಬಂಟರ ಸಂಘ ಮುಂಬಯಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ ಮಾತನಾಡಿ, ಕರ್ನಾಟಕ ಸಂಘ ತೆರೆಮರೆಯಲ್ಲಿ ಸಮಾಜಕ್ಕೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ ಸಂಘ. ಯಾವುದೇ ಸದ್ದು-ಗದ್ದಲವಿಲ್ಲದೆ ಸಮಾಜದ ಅಲ್ಲದೆ ಭಾಷೆ, ಸಂಸ್ಕೃತಿ, ಕಲೆಯ ಉನ್ನತಿಗೆ ಸದಾ ಕೆಲಸವನ್ನು ಹಾಗೂ ಕಾರ್ಯಕ್ರಮವನ್ನು ಈ ಸಂಘವು ಮಾಡುತ್ತಾ ಬರುತ್ತಿದೆ ಎನ್ನಲು ತುಂಬಾ ಅಭಿಮಾನವಾಗುತ್ತದೆ. ವೈವಿಧ್ಯಮಯವಾಗಿ ನಡೆದ ಇಂದಿನ ಕಾರ್ಯಕ್ರಮದಲ್ಲಿ ಗೋನಾ ಸ್ವಾಮಿಯವರ ಒಳ್ಳೆಯ ಸಂಗೀತ ಕಾರ್ಯಕ್ರಮ ನಮ್ಮೆಲ್ಲರ ಮನರಂಜಿಸಿದೆ ಎಂದರು.

'ಕರ್ನಾಟಕ ಮಲ್ಲ'ದ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಮಾತನಾಡಿ, ಅಂಧೇರಿಯ ಈ ಕರ್ನಾಟಕ ಸಂಘವು ವರ್ಷಂಪ್ರತಿ ಒಳ್ಳೆಯ ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿದೆ. ಇಂದಿನ ಕನ್ನಡ ಸಂಸ್ಕೃತಿ ಸಂಭ್ರಮವನ್ನು ವೈವಿಧ್ಯಮಯ ಕಾರ್ಯಕ್ರಮದ ಮೂಲಕ ಸಂಭ್ರಮಿಸಲು ನಮಗೆ ಸಾಧ್ಯವಾಗಿದೆ. ಅನೇಕ ಸಾಧಕರನ್ನು, ಕಲಾವಿದರನ್ನು ಗುರುತಿಸುವ ಅಲ್ಲದೆ ದತ್ತಿನಿಧಿ ನೀಡುವ ಅರ್ಥಪೂರ್ಣ ಕಾರ್ಯಕ್ರಮ ಇದಾಗಿದೆ. ಮುಂದೆಯೂ ಈ ಸಂಘದಿಂದ ಸಮಾಜ ಸೇವೆಯೊಂದಿಗೆ ಸಂಸ್ಕೃತಿಯ ಪ್ರಸಾರದ ಕಾರ್ಯಕ್ರಮ ನಡೆಯಲಿ ಎಂದರು.

ಮಾಲಿಂಗಾಪುರ ಸಾಹಿತಿಗಳು ಮತ್ತು ನಿವೃತ್ತ ಪ್ರಾಧ್ಯಾಪಕ ಡಾ. ಅಶೋಕ್ ನರೋಡೆ ಮಾತನಾಡಿ, ರಾಷ್ಟ್ರಭಕ್ತಿ ಹಾಗೂ ನಾಡ ಪ್ರೀತಿಯ ಧ್ಯೇಯದೊಂದಿಗೆ ಕನ್ನಡ ನಾಡಿನ ಸಂಸ್ಕೃತಿಯ ಸೊಬಗನ್ನು ಪರಿಚಯಿಸುವ ರಾಜ್ಯಮಟ್ಟದ ಸಮ್ಮೇಳನದ ರೂಪದಲ್ಲಿ ಇಂದಿನ ಕಾರ್ಯಕ್ರಮ ನಡೆದಿದೆ ಎನ್ನಲು ತುಂಬಾ ಸಂತೋಷವಾಗುತ್ತದೆ. ನಮ್ಮ ನಾಡಿನ ಸಂಸ್ಕೃತಿಯನ್ನು ಸಾರುವ ಒಳ್ಳೆಯ ಕಾರ್ಯಕ್ರಮವನ್ನು ಆಯೋಜಿಸಿದ ಕನ್ನಡ ಸಂಘದ ಕೃಷ್ಣ ಶೆಟ್ಟಿ, ಪಿ. ಧನಂಜಯ ಶೆಟ್ಟಿ ಹಾಗೂ ಜಗಜೀವನ ಪೂಜಾರಿ ಸಹಿತ ಎಲ್ಲಾ ಪದಾಧಿಕಾರಿಗಳು ಅಭಿನಂದನೀಯರು ಎಂದರು.

ವೇದಿಕೆಯಲ್ಲಿ ಬಂಟರ ಸಂಘ ಮುಂಬಯಿ ಮ್ಯಾರೇಜ್ ಸೆಲ್ ಕಾರ್ಯಾಧ್ಯಕ್ಷ ರಮೇಶ್ ರೈ ಕಯ್ಯಾರು, ಸಮಾಜ ಸೇವಕಿ, ಕನ್ನಡ ನಾಟಕ ಬರಹಗಾರ್ತಿ ಹಾಗೂ ಕಲಾವಿದೆ ಮಾಲಾ ಎಂ. ಆಚಾರ್ಯ, ಲಲಿತಾ ಟ್ರೇಡರ್ಸ್ ಮುಂಬಯಿ ಮಾಧವ ಶೆಟ್ಟಿ, ಶ್ರೀ ಭ್ರಮಾರಾಂಬಿಕಾ ದೇವಸ್ಥಾನ ಸಾಕಿನಾಕಾ ಪೂಜಾ ಕಮಿಟಿಯ ಅಧ್ಯಕ್ಷ ಭಾಸ್ಕರ್ ಶೆಟ್ಟಿ ಸಫೇದ್‌ಪೂಲ್, ಕರ್ನಾಟಕ ಸಂಘ ಅಂಧೇರಿ ಗೌರವಾಧ್ಯಕ್ಷ ಪಿ. ಧನಂಜಯ ಶೆಟ್ಟಿ, ಅಧ್ಯಕ್ಷ ಜಗಜೀವನ್ ಪೂಜಾರಿ, ಗೌರವ ಕಾರ್ಯದರ್ಶಿ ಉದಯ್ ಕೇರ್ಗಲ್, ಗೌರವ ಕೋಶಾಧಿಕಾರಿ ಹರ್ಮಿಂದ್ ಸಿಂಗ್ ಸೋಖಿ, ಮಹಿಳಾ ವಿಭಾಗದ ಅಧ್ಯಕ್ಷೆ ಸುರೇಖಾ ಶಿವರಾಮ ಶೆಟ್ಟಿ, ಕಾರ್ಯದರ್ಶಿ ಪ್ರತಿಮಾ ಸುರೇಂದ್ರ ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಘದ ಸಂಸ್ಥಾಪಕ ಕೃಷ್ಣ ಬಿ. ಶೆಟ್ಟಿ ನಿರೂಪಿಸಿದರು. ನಿಕಟಪೂರ್ವ ಅಧ್ಯಕ್ಷ ಭಾಸ್ಕರ್ ಸುವರ್ಣ ಸಸಿಹಿತ್ಲು, ಮಹಿಳಾ ವಿಭಾಗದ ಪುಷ್ಪ ಜಿ. ಗೌಡ ಸಹಕರಿಸಿದರು. ಅಪಾರ ಸಂಖ್ಯೆಯಲ್ಲಿ ಕನ್ನಡ ಅಭಿಮಾನಿಗಳು ವಿವಿಧ ಸಂಘದ ಸಂಸ್ಥೆಗಳ ಪದಾಧಿಕಾರಿಗಳು ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಂಘದ ಉಪಾಧ್ಯಕ್ಷ ಸೀತಾರಾಮ್ ಪೂಜಾರಿ, ಜೊತೆ ಕಾರ್ಯದರ್ಶಿ ಅಶೋಕ್ ಶೆಟ್ಟಿ ತೋಡಾರ್, ಜೊತೆ ಕೋಶಾಧಿಕಾರಿ ಕರುಣಾಕರ್ ಶೆಟ್ಟಿ ಪಾವೂರು, ಮಹಿಳಾ ವಿಭಾಗದ ಉಪಾಧ್ಯಕ್ಷೆ ಯಶೋಧಾ ದಯಾನಂದ ಶೆಟ್ಟಿ ಹಾಗೂ ಸದಸ್ಯರು ಉಪಸ್ಥಿತರಿದ್ದು ಸಹಕರಿಸಿದರು. ಕೊನೆಗೆ ಪ್ರೀತಿ ಭೋಜನ ನಡೆಯಿತು.

ಇನ್ನೊಬ್ಬರ ಕಷ್ಟ - ನೋವುಗಳಿಗೆ ಸ್ಪಂದಿಸಿ ಅದನ್ನು ನಿವಾರಿಸುವ ಮಾನವೀಯ ಕೆಲಸ ನಮ್ಮಿಂದಾದಾಗ ಮಾತ್ರ ನಮ್ಮ ಬದುಕಿಗೆ ಒಂದು ಸಾರ್ಥಕತೆ ಸಿಗುತ್ತದೆ - ಪ್ರವೀಣ್ ಭೋಜ ಶೆಟ್ಟಿ



ಬದುಕು ಎಂದರೆ ನಮ್ಮ ಮನಸ್ಸಿನ ಸುಂದರ ಅನುಭವ. ಈ ಬದುಕು ಎಂಬುದು ಶಾಶ್ವತವಲ್ಲ. ಅದು ಅನಿಶ್ಚಿತ. ಹಾಗಾಗಿ ಬದುಕಿನ ಪ್ರತಿಕ್ಷಣವೂ ಅತ್ಯಂತ ಅಮೂಲ್ಯವಾಗಿದೆ. ನಮ್ಮ ಬದುಕಿನ ಪ್ರತಿ ಕ್ಷಣವನ್ನೂ ಸಂತೋಷದಿಂದ ನಾವು ಅನುಭವಿಸಬೇಕು. ಈ ಬದುಕನ್ನು ನಾವು ಸುಂದರ ಮಾಡಿಕೊಳ್ಳಬೇಕು. ಸಕಾರಾತ್ಮಕ ಚಿಂತನೆ, ಒತ್ತಡ ರಹಿತ ಮನಸ್ಸು ಮತ್ತು ಉತ್ತಮ ಭಾವನೆಗಳು ನಮ್ಮ ಬದುಕನ್ನು ಸುಂದರವಾಗಿಸುತ್ತವೆ. ನಮ್ಮವರ ಸಂಘ-ಸಂಸ್ಥೆಗಳು ಹಮ್ಮಿಕೊಳ್ಳುವ ಇಂತಹ ವೈವಿಧ್ಯಮಯ ಕಾರ್ಯಕ್ರಮದಲ್ಲಿ ಪಾಲ್ಗೊಂಡರೆ ನಮ್ಮ ಮನಸ್ಸು ಒತ್ತಡ ಮುಕ್ತವಾಗಿ ನೆಮ್ಮದಿ, ಸಂತೋಷವನ್ನು ಕಾಣುತ್ತದೆ. ನಮ್ಮ ಮನಸ್ಸು ಸಂತೋಷದಲ್ಲಿರಬೇಕು. ಮನಸ್ಸಿಗಾದ ವೈಯಕ್ತಿಕ ಸಂತೋಷವು ಕೇವಲ ಒಬ್ಬರಿಗೆ ಸೀಮಿತವಾಗಿರದೆ ಇಡೀ ಮನೆಯಲ್ಲಿಯೇ ಆರೋಗ್ಯಕರ ಒಳ್ಳೆಯ ವಾತಾವರಣವನ್ನು ನಿರ್ಮಿಸುತ್ತದೆ. ನಾವು ನಮ್ಮ ಮನೆಯಲ್ಲಿ ಸಂತೋಷದಲ್ಲಿದ್ದರೆ ನಮ್ಮ ರಾಜ್ಯ-ದೇಶದಲ್ಲೂ ನಾವು ಸಂತೋಷವನ್ನು ಕಾಣಲು ಸಾಧ್ಯ. ಇನ್ನೊಬ್ಬರ ಕಷ್ಟ-ನೋವುಗಳಿಗೆ ಸ್ಪಂದಿಸಿ ಅದನ್ನು ನಿವಾರಿಸುವ ಮಾನವೀಯ ಕೆಲಸ ನಮ್ಮಿಂದಾದಾಗ ಮಾತ್ರ ನಮ್ಮ ಬದುಕಿಗೆ ಒಂದು ಸಾರ್ಥಕತೆ ಸಿಗುತ್ತದೆ. ಒಳ್ಳೆಯ ಸಂಘಟಕರ ಸಂಗಮವಾಗಿರುವ ಈ ಕರ್ನಾಟಕ ಸಂಘವು ಭಾಷೆ ಸಂಸ್ಕೃತಿ ಕಲೆಯನ್ನು ಪೋಷಿಸುವ ಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುವ ಹಾಗೂ ಎಲ್ಲರನ್ನೂ ಒಂದುಗೂಡಿಸುವ ಇಂತಹ ಸಾರ್ಥಕ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಅತಿಥಿ ಬಂಟರ ಸಂಘ ಮುಂಬಯಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಹೇಳಿದರು.

ಶ್ರೇಷ್ಠ ಹೊರನಾಡ ಪ್ರಶಸ್ತಿ ಪುರಸ್ಕೃತರ ನುಡಿ...

ನಾನು ಸನ್ಮಾನವನ್ನು ಎಂದೂ ಬಯಸುವುದಿಲ್ಲ. ಪ್ರಶಸ್ತಿ, ಪುರಸ್ಕಾರದ ಉದ್ದೇಶದಿಂದ ನಾನು ಸಮಾಜಕ್ಕೆ ಸೇವೆಯನ್ನು ಸಲ್ಲಿಸುವವನಲ್ಲ. ಮಾನವೀಯ ನೆಲೆಯಲ್ಲಿ ದೇವರು ಅನುಗ್ರಹಿಸಿದ ಸಂಪತ್ತಿನ ಅಲ್ಪಾಂಶವನ್ನು ಸಮಾಜಕ್ಕೆ ವಿನಿಯೋಗಿಸುವುದು ಕರ್ತವ್ಯ ಎಂದು ಭಾವಿಸಿ ಕಿಂಚಿತ್ ದಾನ ಧರ್ಮವನ್ನು ಮಾಡುತ್ತಿದ್ದೇನೆ. ದಾನಿಗಳಿಗೆ ಸನ್ಮಾನದ ಅಗತ್ಯವಿಲ್ಲ. ಸಂಘ-ಸಂಸ್ಥೆಗಳು ಕಲಾವಿದರನ್ನು, ಪ್ರತಿಭಾವಂತರನ್ನು, ಸಾಧಕರನ್ನು ಗುರುತಿಸಿ ಅವರಿಗೆ ಸನ್ಮಾನ, ಗೌರವನ್ನು ಮಾಡಿದರೆ ಅದು ಹೆಚ್ಚು ಉಚಿತವೆನಿಸುತ್ತದೆ ಎಂದು ನನ್ನ ಭಾವನೆ. ಸಮಾಜಕ್ಕೆ ಉತ್ತಮ ಸೇವೆ ಮಾಡುತ್ತಿರುವ ಕರ್ನಾಟಕ ಸಂಘ ಉತ್ತರೋತ್ತರ ಅಭಿವೃದ್ಧಿ ಹೊಂದಲಿ. ಸಂಘ ಸಂಸ್ಥೆಗಳಿಗೆ ನನ್ನ ಸಹಕಾರ ಸದಾ ಇದೆ. **- ಸುರೇಶ್ ಕಾಂಚನ್ (ಕ್ಲಾಸಿಕ್ ಗ್ರೂಪ್ ಆಫ್ ಹೋಟೆಲ್ಸ್)**

ಈ ಪ್ರಶಸ್ತಿಯನ್ನು ಐ ಲೇಸಾ ದಿ ವೈಯ್ಸ್ ಆಫ್ ಓಷನ್ ಈ ಸಂಸ್ಥೆಗೆ ಅರ್ಪಿಸುತ್ತೇನೆ. ನಮ್ಮ ಐ ಲೇಸಾ ಸಂಸ್ಥೆಯಲ್ಲಿ ಯಾವುದೇ ಅಧ್ಯಕ್ಷರು ಇಲ್ಲವೇ ಪದಾಧಿಕಾರಿಗಳು ಇಲ್ಲ. ಒಟ್ಟು 38 ದೇಶಗಳಲ್ಲಿ ನಮ್ಮ ಸಂಸ್ಥೆಯು ನಿಸ್ವಾರ್ಥವಾಗಿ ಕೇವಲ ಭಾಷೆಯ ಉನ್ನತಿಗೋಸ್ಕರ ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ಸಂಘವು ಅಂಧೇರಿ ಮುಂಬಯಿಯ ಕಲಾವಿದರನ್ನು ಗುರುತಿಸಿ ಗೌರವಿಸಿದ್ದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. **- ಸುರೇಂದ್ರ ಕುಮಾರ್ ಮಾರ್ನಾಡ್ (ಕಲಾವಿದ, ಐ ಲೇಸಾ ದಿ ವೈಯ್ಸ್ ಆಫ್ ಓಷನ್ (ರಿ.))**

ನವಿಮುಂಬಯಿ ಕನ್ನಡ ಸಂಘ ವಾಶಿ, ಕನ್ನಡ ಕಲಾ ಕೇಂದ್ರ ಮುಂಬಯಿ, ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಮುಂಬಯಿ ಹಾಗೂ ಲಯನ್ ಇಂಟರ್‌ನ್ಯಾಷನಲ್ ಈ ಸಂಸ್ಥೆಗಳು ನನಗೆ ಸೇವೆಯನ್ನು ಗೈಯುವ ಅವಕಾಶವನ್ನು ಮಾಡಿಕೊಟ್ಟಿದೆ. ಹಾಗಾಗಿ ಈ ಪ್ರಶಸ್ತಿಯು ಇವೆಲ್ಲ ಸಂಸ್ಥೆಗಳಿಗೆ ಸೇರಿದ್ದು ಎಂದು ಹೇಳಲು ಇಚ್ಛೆ ಪಡುತ್ತೇನೆ. ಪ್ರಶಸ್ತಿ ನೀಡಿದ್ದಕ್ಕಾಗಿ ನನ್ನ ಈ ಎಲ್ಲಾ ಸಂಸ್ಥೆಗಳ ಪರವಾಗಿ ಕರ್ನಾಟಕ ಸಂಘಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.
- ಟಿ. ಆರ್. ಮಧುಸೂದನ್ (ಅಧ್ಯಕ್ಷ : ಕನ್ನಡ ಕಲಾ ಕೇಂದ್ರ ಮುಂಬಯಿ)

ಇಂದಿನ ಜಾಗತೀಕರಣ ಮತ್ತು ಆಧುನಿಕತೆಯ ಯುಗದಲ್ಲಿ ನಮ್ಮ ಮಾತೃಭಾಷೆ, ಸಂಸ್ಕೃತಿ ಹಾಗೂ ಕಲೆಗಳನ್ನು ಉಳಿಸಿಕೊಂಡು ಹೋಗುವುದು ಒಂದು ದೊಡ್ಡ ಸವಾಲೇ ಸರಿ. ಇಂತಹ ಸಂದರ್ಭದಲ್ಲಿ, ತನ್ನ ತಾಯ್ನೆಲದಿಂದ ದೂರವಿದ್ದರೂ, ಮಹಾರಾಷ್ಟ್ರದಂತಹ ಪರರಾಜ್ಯದ ನೆಲದಲ್ಲಿ ನಿಂತು ಭಾಷೆ, ಸಂಸ್ಕೃತಿ, ಕಲೆಯನ್ನು ಪೋಷಿಸಿ ಕನ್ನಡದ ಕಾವಲುಗಾರರಂತೆ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರ ಶ್ರಮ ನಿಜಕ್ಕೂ ಶ್ಲಾಘನೀಯ. **- ರವಿ ನಾಯ್ಕಾಪು (ಪತ್ರಕರ್ತ)**

ದೇವಾಡಿಗ ಸಂಘ ಮುಂಬಯಿ: ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಉತ್ತಮ ಆರೋಗ್ಯಕ್ಕೆ ಯೋಗವನ್ನು ಪ್ರತಿದಿನದ ಜೀವನದಲ್ಲಿ ಅಳವಡಿಸಿಕೊಳ್ಳಿ- ರವಿ ಎಸ್. ದೇವಾಡಿಗ







ನವಿಮುಂಬಯಿ, ಜೂ. 30- ದೇವಾಡಿಗ ಸಂಘ ಮುಂಬಯಿಯ ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನ ಜೂನ್ 21ರ ಆದಿತ್ಯವಾರ ಇಲ್ಲಿಯ ನೆರೂಲ್‌ನ ದೇವಾಡಿಗ ಭವನದಲ್ಲಿ ವಿಭಾಗದ ಕಾರ್ಯಾಧ್ಯಕ್ಷೆ ಪ್ರಮೀಳಾ ವಿ. ಶೇರಿಗಾರ್ ನೇತೃತ್ವದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಮಹಿಳಾ ವಿಭಾಗದ ಕಾರ್ಯದರ್ಶಿ ಸುಜಯಾ ವಿ. ದೇವಾಡಿಗ ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರು, ಸದಸ್ಯರು ಹಾಗೂ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಸಂಘದ ಅಧ್ಯಕ್ಷ ರವಿ ಎಸ್. ದೇವಾಡಿಗ ಸಾಂಪ್ರದಾಯಿಕ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಪಾಧ್ಯಕ್ಷ ವಿಶ್ವನಾಥ ದೇವಾಡಿಗ, ಗೌ. ಪ್ರ. ಕಾರ್ಯದರ್ಶಿ ಪದ್ಮನಾಭ ಎ. ದೇವಾಡಿಗ, ಜೊತೆ ಕಾರ್ಯದರ್ಶಿ ನಿತೇಶ್ ದೇವಾಡಿಗ, ಸಂಘದ ಮಾಜಿ ಉಪಾಧ್ಯಕ್ಷೆ ಮಾಲತಿ ಜೆ. ಮೊೖಲಿ, ವಿಭಾಗದ ಕಾರ್ಯಾಧ್ಯಕ್ಷೆ ಪ್ರಮೀಳಾ ವಿ. ಶೇರಿಗಾರ್, ಮಹಿಳಾ ವಿಭಾಗದ ಮಾಜಿ ಕಾರ್ಯಾಧ್ಯಕ್ಷೆ ಜಯಂತಿ ಎಂ. ದೇವಾಡಿಗ, ನವಿಮುಂಬಯಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಪದ್ಮನಾಭ ಸಿ. ಮೊೖಲಿ, ಯೋಗ ಶಿಕ್ಷಕಿ ಜಯಾ ನಾರಾಯಣ ನಕ್ಕೆ ವೇದಿಕೆಯಲ್ಲಿದ್ದು ಸಹಕರಿಸಿದರು. ಸಂಘದ ಶ್ರೀ ರಾಮ ಭಜನಾ ಮಂಡಳಿಯ ಸದಸ್ಯೆಯರಾದ ಆಶಾ ದೇವಾಡಿಗ, ಶಾಂತಿ ದೇವಾಡಿಗ ಮತ್ತು ಆಶಾ ರಾಜೇಶ್ ದೇವಾಡಿಗ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ ರವಿ ಎಸ್. ದೇವಾಡಿಗ ಎಲ್ಲರಿಗೂ ಅಂತಾರಾಷ್ಟ್ರೀಯ ಯೋಗ ದಿನದ ಶುಭಾಶಯ ಕೋರಿದರು ಹಾಗೂ ಉತ್ತಮ ಆರೋಗ್ಯಕ್ಕೆ ಯೋಗವನ್ನು ಪ್ರತಿದಿನದ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಕಾರ್ಯಕ್ರಮದ ಅಂಗವಾಗಿ ಯೋಗ ಶಿಕ್ಷಕಿ ಮತ್ತು ತಜ್ಞೆ ಜಯಾ ನಾರಾಯಣ ನಕ್ಕೆ ಅತ್ಯಂತ ಪರಿಣಾಮಕಾರಿಯಾಗಿ ಯೋಗ ತರಬೇತಿಯನ್ನು ನಡೆಸಿಕೊಟ್ಟರು. ವಿವಿಧ ಯೋಗಾಸನಗಳು, ಪ್ರಾಣಾಯಾಮ, ಉಸಿರಾಟದ ವ್ಯಾಯಾಮಗಳು, ವಿಶ್ರಾಂತಿ ಅಲ್ಲದೆ ಆಹಾರದ ಮಿತಿ ಮತ್ತು ನಿಯಮಾವಳಿಗಳನ್ನು ತಿಳಿಸಿ ಹೇಳಿದರು. ಅಷ್ಟಾಂಗ ಯೋಗ ಕುರಿತು ವಿವರಿಸಿ, ಅವರು ಅತ್ಯಂತ ಆರೋಗ್ಯಕರ, ಸಮತೋಲನಯುತ ಹಾಗೂ ಶಿಸ್ತುಬದ್ಧ ಜೀವನ ನಡೆಸಲು ಅಷ್ಟಾಂಗ ಯೋಗದ ಎಂಟು ಅಂಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಹಾಗೂ ಸಮಾಧಿಗಳ ಬಗ್ಗೆ ವಿವರವಾಗಿ ತಿಳಿಸಿ, ಪ್ರತಿಯೊಂದು ಹಂತದ ತಾತ್ವಿಕ ಹಾಗೂ ಆಧ್ಯಾತ್ಮಿಕ ಮಹತ್ವವನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟರು.

ಯೋಗದ ಮಾರ್ಗದರ್ಶನ ನೀಡಿದ ಯೋಗ ಗುರು ಜಯ ನಕ್ಕೆ ಅವರಿಗೆ ಮಹಿಳಾ ವಿಭಾಗದ ಪದಾಧಿಕಾರಿಗಳು ಶಾಲು ಹೊದಿಸಿ, ಪುಷ್ಪಗುಚ್ಛ ಹಾಗೂ ಸ್ಮರಣಿಕೆ ಕೊಟ್ಟು ಸನ್ಮಾನಿಸಿದರು. ಜೊತೆಯಲ್ಲಿ ಸಂಘದ ಅಧ್ಯಕ್ಷ ರವಿ ಎಸ್. ದೇವಾಡಿಗ ಸಮಿತಿ ಸದಸ್ಯರು ಮಹಿಳಾ ವಿಭಾಗದ ಕಾರ್ಯಕರ್ತರು ಮತ್ತು ಪ್ರಾದೇಶಿಕ ಸಮಿತಿಗಳ ಪದಾಧಿಕಾರಿಗಳನ್ನು ಮಹಿಳಾ ವಿಭಾಗದ ವತಿಯಿಂದ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಪ್ರಥಮ ಮಹಿಳೆ ವನಿತಾ ಆರ್. ದೇವಾಡಿಗ, ಮಹಿಳಾ ವಿಭಾಗದ ಮಾಜಿ ಕಾರ್ಯಾಧ್ಯಕ್ಷೆಯರಾದ ಜಯಂತಿ ಆರ್. ಮೊೖಲಿ ಹಾಗೂ ರಂಜನಿ ಆರ್. ಮೊೖಲಿ, 'ದೇವಾಡಿಗ ಜ್ಯೋತಿ' ಸಂಪಾದಕ ಅಡ್ವಕೇಟ್ ಪ್ರಭಾಕರ ದೇವಾಡಿಗ, ಕಾರ್ಯಕಾರಿ ಸಮಿತಿಯ ಸದಸ್ಯೆ ಉಮಾವತಿ ಗುಜರನ್, ಅಸಲ್ಫಾ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷೆರೂಪಾ ದೇವಾಡಿಗ, ನವಿಮುಂಬಯಿಯ ಸಪ್ನಾ ಮೊೖಲಿ, ಧನವಂತಿ ಪುತ್ತೂರು, ರಮೇಶ್ ದೇವಾಡಿಗ, ಚೆಂಬೂರಿನ ನಿರ್ಮಲಾ ಆರ್. ದೇವಾಡಿಗ, ಸೌಮ್ಯಾ ದೇವಾಡಿಗ, ದಯಾನಂದ ಎಂ. ದೇವಾಡಿಗ, ಸಿಟಿ ವಲಯದ ಮಮತಾ ದೇವಾಡಿಗ, ಸರಸ್ವತಿ ಕಾರ್ಕಳ ಹಾಗೂ ಥಾಣೆ ಪ್ರಾದೇಶಿಕ ಸಮಿತಿಯ ಕೋಶಾಧಿಕಾರಿ ಪಾಂಡುರಂಗ ದೇವಾಡಿಗ, ಉಷಾ ದೇವಾಡಿಗ, ಯುವ ವಿಭಾಗದ ಕಾರ್ಯಾಧ್ಯಕ್ಷೆ ತನ್ವಿ ವಿ. ಶೇರಿಗಾರ್ ಉಪಸ್ಥಿತರಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಲಕ್ಕಿಡಿಪ್ ಏರ್ಪಡಿಸಲಾಗಿತ್ತು. ಈ ಲಕ್ಕಿಡಿಪ್ ಬಹುಮಾನಗಳನ್ನು ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಪ್ರಮೀಳಾ ವಿ. ಶೇರಿಗಾರ್ ಪ್ರಾಯೋಜಿಸಿದ್ದರು. ನವಿಮುಂಬಯಿ ಪ್ರಾದೇಶಿಕ ಸಮಿತಿಯ ವನಿತಾ ಆರ್. ದೇವಾಡಿಗ ಪ್ರಥಮ ಬಹುಮಾನ ದಕ್ಕಿತು. ಚೆಂಬೂರು ಪ್ರಾದೇಶಿಕ ಸಮಿತಿಯ ಜಯಂತಿ ಎಂ. ದೇವಾಡಿಗ ಮತ್ತು ನವಿಮುಂಬಯಿ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ಕರುಣಾಕರ್ ದೇವಾಡಿಗ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು. ಸಂಘದ ಯುವ ವಿಭಾಗದ ಉಪ ಕಾರ್ಯಾಧ್ಯಕ್ಷ ವಿನೀಶ್ ದೇವಾಡಿಗರಿಗೆ ನಾಲ್ಕನೇ ಬಹುಮಾನ ದೊರಕಿತು. ಮಹಿಳಾ ಕಾರ್ಯದರ್ಶಿ ಸುಜಯಾ ವಿ. ದೇವಾಡಿಗ, ಜೊತೆ ಕಾರ್ಯದರ್ಶಿ ಲತಾ ಎ. ಶೇರಿಗಾರ, ನವಿಮುಂಬಯಿ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶಾಂತಾ ಪಿ. ದೇವಾಡಿಗ, ತನ್ವಿ ವಿ. ಶೇರಿಗಾರ್, ವಿನೀಶ್ ದೇವಾಡಿಗ ಮೊದಲಾದವರು ಈ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಈ ಸಂದರ್ಭದಲ್ಲಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಪ್ರಮೀಳಾ ವಿ. ಶೇರಿಗಾರ್ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲಾ ಸದಸ್ಯರು ಹಾಗೂ ಭಾಗವಹಿಸಿದ ಎಲ್ಲ ಸದಸ್ಯರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಹಾಗೂ ಮುಂದಿನ ದಿನಗಳಲ್ಲಿ ಮಹಿಳಾ ವಿಭಾಗ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಎಲ್ಲರಿಗೂ ಕರೆ ನೀಡಿದರು. ಲತಾ ಎ. ಶೇರಿಗಾರ ವಂದನಾರ್ಪಣೆ ಮತ್ತು ಉಪಹಾರ ವಿತರಣೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.



epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ KARNATAKA MALLA, MUMBAI

ಸಂಪುಟ : 35 ಸಂಚಿಕೆ : 149 ಬುಧವಾರ 01-07-2026 ಬೆಲೆ : ₹ 6 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ತೋರಿಕೆಯ ಜೀವನ ನಡೆಸಬೇಡಿ. ಅದು ನಿಮ್ಮ ವ್ಯಕ್ತಿತ್ವವನ್ನು ಕಡಿಮೆ ಮಾಡುತ್ತದೆ. ತೋರಿಕೆ ಇಲ್ಲದೆ ಬದುಕಿ ತೋರಿಸಿ. ಜಗತ್ತೇ ನಿಮ್ಮ ವ್ಯಕ್ತಿತ್ವವನ್ನು ಎತ್ತಿ ಹಿಡಿಯುತ್ತದೆ.

2 ಟಿಇಟಿ ಪ್ರಶ್ನೆ ಪತ್ರಿಕೆ ಸೋರಿಕೆ: ಪರಾರಿಯಾಗಿದ್ದ ಆರೋಪಿಯ ಪತ್ನಿ ಬಿಹಾರದಲ್ಲಿ ಬಂಧನ ; ಭಿವಂಡಿ ಪೊಲೀಸರ ವಶಕ್ಕೆ

ವಿಕಾಸ ಒಪ್ಪಂದ ರದ್ದಾದರೆ ಮುದ್ರಾಂಕ ಶುಲ್ಕ ಮರುಪಾವತಿ ಇಲ್ಲ : ಮಹಾರಾಷ್ಟ್ರ ಮುದ್ರಾಂಕ ಕಾಯ್ದೆ ತಿದ್ದುಪಡಿ ವಿಧೇಯಕ ವಿಧಾನಸಭೆಯಲ್ಲಿ ಮಂಡನೆ 3

ಗಂಡನಿಗೆ ಯಾವಾಗಲೂ ದುಡಿದು ಬಂದ ಮೇಲೆ ಕಷ್ಟ ಅನಿಸೋದಿಲ್ಲ. ಕಷ್ಟ ಯಾವಾಗ ಅನಿಸುತ್ತದೆ ಅಂದ್ರೆ ಮನೆಯವರು ಉಲ್ಟಾ ಸೀದಾ ಮಾತಾನಾಡಿದಾಗ.

ಚೆಂಬೂರು : ಶಾಲಾ ವಾಹನದ ಮೇಲೆ ಮರ ಉರುಳಿ 11 ವರ್ಷದ ವಿದ್ಯಾರ್ಥಿ ಬಲಿ, 5 ಮಕ್ಕಳು ಗಾಯ





ಮುಂಬಯಿ, ಜೂ.30- ಮುಂಬಯಿ ನಗರದ ಹೊರವಲಯದ ಚೆಂಬೂರು ಪ್ರದೇಶದಲ್ಲಿ ಮಂಗಳವಾರ ಅಪರಾಹ್ನ ರಸ್ತೆ ಬಂದಿಯ ಬೃಹತ್ ಗಾತ್ರದ ಅಶ್ವತ್ಥ ಮರವೊಂದು 18 ವಿದ್ಯಾರ್ಥಿಗಳನ್ನು ಕೊಂಡೊಯ್ಯುತ್ತಿದ್ದ ಶಾಲಾ ಬಸ್‌ನ ಮೇಲೆ ಉರುಳಿಬಿದ್ದ ದುರಂತದಲ್ಲಿ 11 ವರ್ಷದ ಬಾಲಕ ಮೃತಪಟ್ಟು ಇತರ ಐವರು ವಿದ್ಯಾರ್ಥಿಗಳು ಗಾಯಗೊಂಡ ದಾರುಣ ಘಟನೆ ನಡೆದಿದೆ. ಗಾಯಗೊಂಡವರಲ್ಲಿ ಇಬ್ಬರು ಬಾಲಕಿಯರು ಸೇರಿದ್ದಾರೆ.

ಚೆಂಬೂರಿನ ರಸ್ತೆ ನಂಬ್ರ 11 ರಲ್ಲಿ ಕಟ್ಟಡವೊಂದರ ಬಳಿಯಲ್ಲಿ ಅಪರಾಹ್ನ ಗಂಟೆ 2.58ರ ವೇಳೆಗೆ ಶಾಲಾ ಬಸ್‌ನ ಮೇಲೆ ಅಶ್ವತ್ಥ ಮರ ಏಕಾಏಕಿಯಾಗಿ ಉರುಳಿಬಿದ್ದು ಈ ದುರ್ಘಟನೆ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಸ್‌ನ ನಿರ್ವಾಹಕ ಮತ್ತು ಸ್ಥಳೀಯರು ಮಕ್ಕಳನ್ನು ಬಸ್‌ನೊಳಗೆ ಸಿಕ್ಕಿಹಾಕಿಕೊಂಡ ವಿದ್ಯಾರ್ಥಿಗಳನ್ನು ರಕ್ಷಿಸಿದ್ದು, ಗಾಯಗೊಂಡ 5 ಮಕ್ಕಳನ್ನು ಹತ್ತಿರದ ಝೆನ್ ಆಸ್ಪತ್ರೆಗೆ ಕೊಂಡೊಯ್ದರು. ಅದರಲ್ಲಿ ಚಿಕಿತ್ಸೆಗೆ ಮೊದಲೇ ಗಂಭೀರವಾಗಿ ಗಾಯಗೊಂಡಿದ್ದ ವಿಹಾನ್ ಶ್ರೀವಾಸ್ತವ್ (11) ಎಂಬ ವಿದ್ಯಾರ್ಥಿ ಮತಪಟ್ಟಿದ್ದಾಗಿ ವೈದ್ಯರು ಪ್ರಕಟಿಸಿದ್ದು, ಗಾಯಗೊಂಡ ಇತರ ಐವರಲ್ಲಿ ಒಬ್ಬ ಬಾಲಕನ ಸ್ಥಿತಿ ಚಿಂತಾಜನಕವಾಗಿದ್ದು, ಇತರ ನಾಲ್ವರು ಸಣ್ಣ ಪುಟ್ಟ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆಂದು ವೈದ್ಯರುಗಳು ತಿಳಿಸಿದ್ದಾರೆ. ಮೃತಪಟ್ಟ ಬಾಲಕ ಮತ್ತು ಗಂಭೀರವಾಗಿ ಗಾಯಗೊಂಡಿರುವ ಬಾಲಕನನ್ನು ಬಸ್‌ನಿಂದ ಹೊರ ತೆಗೆಯಲು ಭಾರೀ ಶ್ರಮ ಪಡಬೇಕಾಗಿತ್ತು ಎಂದು ಸ್ಥಳೀಯರು ಹೇಳಿದ್ದಾರೆ. ಮರ ಬಿದ್ದ ರಭಸಕ್ಕೆ ಬಸ್‌ನ ಒಂದು ಭಾಗ ಅಪ್ಪಚ್ಚಿಯಾಗಿದ್ದು, ಇಬ್ಬರು ವಿದ್ಯಾರ್ಥಿಗಳು ಜಜ್ಜಿ ಹೋದ ಬಸ್‌ನ ಭಾಗದಲ್ಲಿ ಸಿಲುಕಿಕೊಂಡಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ಚೆಂಬೂರು ತಿಲಕ್‌ನಗರದ ಯೂನಿವರ್ಸಲ್ ಹೈಸ್ಕೂಲ್‌ಗೆ ಸೇರಿದ ವಿದ್ಯಾರ್ಥಿಗಳನ್ನು ಕೊಂಡೊಯ್ಯುತ್ತಿದ್ದ ಬಸ್ ಇದಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಮಾಹಿತಿ ಸಿಗುತ್ತಲೇ ಅಗ್ನಿ ಶಾಮಕ ಮತ್ತು ಇತರ ರಕ್ಷಣಾ ಏಜೆನ್ಸಿಗಳ ಸಿಬ್ಬಂದಿಗಳು ಧಾವಿಸಿದ್ದರು. ಆದರೆ, ಅಷ್ಟರಲ್ಲೇ ಸ್ಥಳೀಯರು ಮತ್ತು ಬಸ್‌ನ ನಿರ್ವಾಹಕ ಮಕ್ಕಳನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದರು ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ. 2ನೇ ಪುಟಕ್ಕೆ

ಉದ್ಧವ್ ಠಾಕ್ರೆಗೆ ಮತ್ತೊಂದು ಹೊಡೆತ: ಶಿಂದೆಸೇನೆ ಸೇರಿದ ಸಚಿನ್ ಅಹಿರ್ ; ಉಪಸಭಾಪತಿ ಸ್ಥಾನಕ್ಕೆ ನಾಮಪತ್ರ

ತಳಮಟ್ಟದ ನಾಯಕ ನಮ್ಮ ಜತೆಗೆ ಸೇರಿರುವುದರಿಂದ ಬಲ ಬಂದಿದೆ - ಏಕನಾಥ್ ಶಿಂದೆ




ಮುಂಬಯಿ, ಜೂ.30 - ಆರು ಬಂಡಾಯ ಸಂಸದರ ಬಳಿಕ ಶಿವಸೇನೆ ಮುಖ್ಯಸ್ಥ ಹಾಗೂ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ವಿಧಾನ ಪರಿಷತ್ ಸದಸ್ಯ ಹಾಗೂ ಮುಂಬಯಿಯ ಪ್ರಮುಖ ನಾಯಕ ಸಚಿನ್ ಅಹಿರ್ ಅವರನ್ನು ತನ್ನತ್ತ ಸೆಳೆದುಕೊಳ್ಳುವ ಮೂಲಕ ಒಂದು ವಾರದಲ್ಲಿ ಎರಡನೇ ಬಾರಿಗೆ ತನ್ನ ಎದುರಾಳಿ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರಿಗೆ ಬಲವಾದ ಹೊಡೆತ ನೀಡಿದರು.

ಆದಿತ್ಯ ಠಾಕ್ರೆ ಅವರ ಆಪ್ತ ಸಹಾಯಕನೆಂದು ಗುರುತಿಸಲ್ಪಟ್ಟ ಅಹಿರ್ ಅವರು,ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಬೆಂಬಲದೊಂದಿಗೆ ಮಹಾರಾಷ್ಟ್ರ ವಿಧಾನ ಪರಿಷತ್ತಿನ ಉಪಸಭಾಪತಿ ಚುನಾವಣೆಗೆ ನಾಮಪತ್ರ ಸಲ್ಲಿಸುವ ಮೂಲಕ ಅಚ್ಚರಿ ಮೂಡಿಸಿದರು.

ವಿಧಾನ ಪರಿಷತ್ತಿನ ಉಪ ಸಭಾಪತಿ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಶಿವಸೇನೆ ಪರವಾಗಿ ಸಚಿನ್ ಅಹಿರ್ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಉಪಮುಖ್ಯಮಂತ್ರಿ ಸುನೇತ್ರಾ ಪವಾರ್, ಸಚಿವರಾದ ಚಂದ್ರಕಾಂತ್ ಪಾಟೀಲ್,ಸಂಜಯ್ ಶಿರ್ಸಾಟ್, ಶಾಸಕರಾದ ಕೃಪಾಲ್ ತುಮಾನೆ, ಮನೀಶಾ ಕಾಯಂಡೆ, ದುಷ್ಯಂತ್ ಚತುರ್ವೇದಿ, ಚಂದ್ರಕಾಂತ್ ರಘುವಂಶಿ ಹಾಗೂ ಇತರೆ ಜನಪ್ರತಿನಿಧಿಗಳು ಉಪಸ್ಥಿತರಿದ್ದರು. 2ನೇ ಪುಟಕ್ಕೆ

ನ್ಯಾಯಾಂಗ ವಿಮರ್ಶೆ ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವದ ಮೂಲಾಧಾರ: ಸಿಜೆಐ ಸೂರ್ಯಕಾಂತ್



ಹೊಸದಿಲ್ಲಿ,ಜೂ.30 - ನ್ಯಾಯಾಂಗ ವಿಮರ್ಶೆಯನ್ನು ನ್ಯಾಯಾಂಗ ಶ್ರೇಷ್ಠತೆಯಾಗಿ ನೋಡಬಾರದು,ಬದಲಾಗಿ ಸಾಂವಿಧಾನಿಕ ಸಂಸ್ಥೆಗಳು ತಮ್ಮ ನಿಗದಿತ ಮಿತಿಗಳಲ್ಲಿ ಕಾರ್ಯನಿರ್ವಹಿಸಲು ವಿಫಲವಾದಾಗಲೆಲ್ಲಾ ಕಾನೂನಿನ ನಿಯಮವನ್ನು ಕಾಪಾಡಲು ವಿನ್ಯಾಸಗೊಳಿಸಲಾದ ಸಾಂವಿಧಾನಿಕ ಜವಾಬ್ದಾರಿಯಾಗಿ ನೋಡಬೇಕು ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಹೇಳಿದ್ದಾರೆ.

ಈ ವಿಸ್ತಾರವಾದ ಪರಿಶೀಲನಾ ಅಧಿಕಾರವು ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ ಎಂದು ಹೇಳುವುದು ಉತ್ಪ್ರೇಕ್ಷೆಯಲ್ಲ, ಕಾನೂನುಬದ್ಧತೆ ಹಾಗೂ ಸಾಂವಿಧಾನಿಕತೆಯು ಸರಕಾರಿ ಅಧಿಕಾರವನ್ನು ಚಲಾಯಿಸಲು ಮೂಲಭೂತ ಪೂರ್ವಾಪೇಕ್ಷಿತಗಳಾಗಿವೆ ಎಂದು ದೃಢಪಡಿಸುತ್ತದೆ ಎಂದು ಅವರು ಹೇಳಿದರು.

ಸ್ಟಾಕ್‌ಹೋಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ಸಹಾಯ ಸಂಸ್ಥೆ (ಐಡಿಇಎ) ಯ 'ಕಾನೂನಿನ ನಿಯಮವನ್ನು ರಕ್ಷಿಸುವುದು - ಭಾರತ ಮತ್ತು ಸ್ವೀಡನ್‌ನ ಅನುಭವಗಳು' ಎಂಬ ವಿಷಯದ ಮೇಲೆ ನಡೆದ ಸಮ್ಮೇಳನದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಈ ಹೇಳಿಕೆಗಳನ್ನು ನೀಡಿದರು.

ವೈಯಕ್ತಿಕ ಸ್ವಾತಂತ್ರ್ಯಗಳನ್ನು ರಕ್ಷಿಸುವಲ್ಲಿ ಕಾನೂನಿನ ನಿಯಮ, ನ್ಯಾಯಾಂಗ ಸ್ವಾತಂತ್ರ್ಯ ಮತ್ತು ಸಾಂವಿಧಾನಿಕ ಪ್ರಜಾಪ್ರಭುತ್ವದ ಕೇಂದ್ರೀಯತೆಯನ್ನು ನ್ಯಾಯಮೂರ್ತಿ ಕಾಂತ್ ಒತ್ತಿ ಹೇಳಿದರಲ್ಲದೆ, ನ್ಯಾಯಾಂಗ ಪರಿಶೀಲನೆಯು ಕೇವಲ ಒಂದು ಅಧಿಕಾರವಲ್ಲ, ಬದಲಿಗೆ ನ್ಯಾಯಾಲಯಗಳಿಗೆ ವಹಿಸಲಾದ ಸಾಂವಿಧಾನಿಕ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದರು.

ಕಾನೂನಿನ ನಿಯಮವು ಕಲ್ಯಾಣ ಯೋಜನೆ ಅಥವಾ ಆರ್ಥಿಕ ನೀತಿಯಲ್ಲ. ಅದು ಸ್ವತಃ ಬ್ರೆಡ್ ತಯಾರಿಸುವುದಿಲ್ಲ, ಜೀವನೋಪಾಯವನ್ನು ಸೃಷ್ಟಿಸುವುದಿಲ್ಲ ಅಥವಾ ಬಡತನವನ್ನು ತೆಗೆದುಹಾಕುವುದಿಲ್ಲ. ಅದು ಮಾಡುತ್ತಿರುವುದು ಹೆಚ್ಚು ಮೂಲಭೂತವಾದದ್ದು, ಆದರೂ ತಕ್ಷಣವೇ ಗೋಚರಿಸುವುದಿಲ್ಲ ಇದು ಅಧಿಕಾರದ ವ್ಯಾಯಾಮವನ್ನು ಶಿಸ್ತುಬದ್ಧಗೊಳಿಸುತ್ತದೆ ಎಂದು ಅವರು ತಿಳಿಸಿದರು.

ಸಚಿನ್ ಅಹಿರ್, ಕುಟುಂಬಕ್ಕೆ ಎಲ್ಲವನ್ನೂ ನೀಡಿದ್ದೇವೆ, ಇನ್ನೇನು ಬೇಕಿತ್ತು ; ಆದಿತ್ಯ ಠಾಕ್ರೆ



ಮುಂಬಯಿ,ಜೂ.30 - ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ)ಯ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಸಚಿನ್ ಅಹಿರ್ ಅವರು ನಾಟಕೀಯ ರೀತಿಯಲ್ಲಿ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಸೇರಿದ್ದಾರೆ. ವಿಶೇಷ ಎಂದರೆ ಅವರನ್ನು ಆದಿತ್ಯ ಠಾಕ್ರೆ ಅವರ ಆಪ್ತ ಸಹಾಯಕ ಎಂದು ಪರಿಗಣಿಸಲಾಗಿದೆ. ಆದ್ದರಿಂದ, ಇದು ಠಾಕ್ರೆ ಅವರ ಶಿವಸೇನೆಗೆ ದೊಡ್ಡ ಹೊಡೆತ ಎಂದು ಪರಿಗಣಿಸಲಾಗಿದೆ. ಆದಾಗ್ಯೂ, ಸಚಿನ್ ಅಹಿರ್ ಪಕ್ಷವನ್ನು ತೊರೆದ ಬಳಿಕ ಆದಿತ್ಯ ಠಾಕ್ರೆ ಅವರನ್ನು ತೀವ್ರವಾಗಿ ಟೀಕಿಸಿದ್ದು, ಸಚಿನ್ ಅಹಿರ್ ಮತ್ತು ಅವರ ಕುಟುಂಬಕ್ಕೆ ತಮ್ಮ ಪಕ್ಷವು ಏನು ನೀಡಿದೆ ಎಂಬುದರ ಪೂರ್ಣ ವಿವರವನ್ನು ಒದಗಿಸಿದ್ದಾರೆ.

ಅಹಿರ್ ಸ್ವತಃ ವಿಧಾನ ಪರಿಷತ್ತಿನ ಸದಸ್ಯರು, ಭಾರತೀಯ ಕಾಮ್ಗಾರ್ ಸೇನೆಯ ಅಧ್ಯಕ್ಷ,ಶಿವಸೇನೆ (ಯುಬಿಟಿ)ಯಲ್ಲಿ ಉಪನಾಯಕ,ಅವರ ಮಗಳಿಗೆ ವಾರ್ಡ್‌ಸಮಿತಿ,ಸಹೋದರನಿಗೆ ಬೆಸ್ಟ್ ಸಮಿತಿ ಅಧ್ಯಕ್ಷ ಹುದ್ದೆ ಸಹಿತ ಎಲ್ಲವನ್ನೂ ಪಕ್ಷ ನೀಡಿದೆ ಎಂದು ಅವರು ಹೇಳಿದ್ದಾರೆ.

ಡಾನ್ ಅರುಣ್ ಗಾವ್ಲಿ ಅವರ ಸೋದರಳಿಯನಾಗಿರುವ ಸಚಿನ್ ಅಹಿರ್ 1999 ರಿಂದ 2019 ರವರೆಗೆ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾದರು. 2009ರ ಸಮ್ಮಿಶ್ರ ಸರಕಾರದಲ್ಲಿ ಅವರಿಗೆ ಸಚಿವ ಸ್ಥಾನವೂ ಸಿಕ್ಕಿತು. ಆದಾಗ್ಯೂ, 2019 ರಲ್ಲಿ, ಅವರು ಆ ಪಕ್ಷದಿಂದ ಶಿವಸೇನೆಗೆ ಸೇರಿದರು.

ಆದಿತ್ಯ ಠಾಕ್ರೆ 2019 ರಲ್ಲಿ ವರ್ಲಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ ಬಳಿಕ ಸಚಿನ್ ಅಹಿರ್ ಪಕ್ಷದಲ್ಲಿ ಪ್ರಮುಖ ಸ್ಥಾನವನ್ನು ಪಡೆದರು. ಆ ಸಮಯದಲ್ಲಿ, ಅವರಿಗೆ ಶಿವಸೇನೆಯ ಭಾರತೀಯ ಕಾಮ್ಗಾರ್ ಸೇನೆಯ ಅಧ್ಯಕ್ಷರಾಗಲು ಅವಕಾಶ ನೀಡಲಾಯಿತು. 2022 ರಲ್ಲಿ ಅವರಿಗೆ ವಿಧಾನ ಪರಿಷತ್ತಿನಲ್ಲಿರಲು ಅವಕಾಶ ನೀಡಲಾಯಿತು.

ಸಚಿನ್ ಅಹಿರ್ ಪಕ್ಷವನ್ನು ತೊರೆದ ಮೇಲೆ ಆದಿತ್ಯ ಠಾಕ್ರೆ ಅವರನ್ನು ತೀವ್ರವಾಗಿ ಟೀಕಿಸಿದ್ದು,ನಾವು ಅವರಿಗೆ ಎಲ್ಲವನ್ನೂ ನೀಡಿದ್ದರೂ, ಅವರಿಗೆ ಇನ್ನೇನು ಬೇಕು ಎಂದು ಕೇಳಿದರು?. ಸಚಿನ್ ಅಹಿರ್ ಅವರ ಮಗಳಿಗೆ ವಾರ್ಡ್ ಸಮಿತಿ ಇದೆ. ಅವರಿಗೆ ಮೀಸಲಾತಿ ಮೂಲಕ ಈ ಸಮಿತಿಯಲ್ಲಿ ಸ್ಥಾನ ನೀಡಲಾಗಿದೆ. ಅದೇ ಸಮಯದಲ್ಲಿ, ಸಚಿನ್ ಅಹಿರ್ ಅವರಿಗೆ ಬೆಸ್ಟ್ ಅಧ್ಯಕ್ಷ ಹುದ್ದೆ ನೀಡಲಾಗಿದೆ. ಅವರಿಗೆ ಸ್ವತಃ ಶಾಸಕ ಸ್ಥಾನವಿದೆ. ಸರಿ, ನಾವು ಅವರನ್ನು ಭೇಟಿಯಾಗಲು ಸಾಧ್ಯವಿಲ್ಲ ಎಂದು ಇತರ ಜನರು ದೂರುತ್ತಾರೆ. ಅವರು ಪ್ರತಿದಿನ ನನ್ನನ್ನು ಭೇಟಿಯಾಗುತ್ತಾರೆ. ಹಾಗಾದರೆ ಅವರಿಗಾಗಿ ಇನ್ನೇನು ಮಾಡಬಹುದು ಎಂದು ಠಾಕ್ರೆ ತಿಳಿಸಿದರು.

ಯಾರಾದರೂ ಬಂದರೂ ಹೋದರೂ ಪರವಾಗಿಲ್ಲ, ವರ್ಲಿ-ಶಿವ್ಡಿ ಶಿವಸೇನೆಯ ಭದ್ರಕೋಟೆ ಮತ್ತು ಅದು ಹಾಗೆಯೇ ಇರುತ್ತದೆ ಎಂದು ಆದಿತ್ಯ ಠಾಕ್ರೆ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು.

ಡ್ಯಾನ್ಸ್ ಬಾರ್‌ಗಳನ್ನು ಕಠಿಣವಾಗಿ ನಿಯಂತ್ರಿಸಲು ಮುಂಬಯಿ ಪೊಲೀಸ್ ಕಾಯ್ದೆಗೆ ತಿದ್ದುಪಡಿ : ಸಿಎಂ ಫಡ್ನವೀಸ್



ಮುಂಬಯಿ, ಜೂ. 30- ಡ್ಯಾನ್ಸ್ ಬಾರ್ ನಿರ್ವಾಹಕರುಗಳು ಕಠಿಣ ನಿಯಮಗಳಿಂದ ತಪ್ಪಿಸಿಕೊಳ್ಳಲು ಇರುವ ಲೋಪಗಳನ್ನು ನಿವಾರಿಸಲು ವಿಧಾನ ಮಂಡಲದ ಪ್ರಸಕ್ತ ಮುಂಗಾರು ಅಧಿವೇಶನದಲ್ಲಿ ಮುಂಬಯಿ ಪೊಲೀಸ್ ಕಾಯ್ದೆಗೆ ತಿದ್ದುಪಡಿ ಮಾಡುವುದಾಗಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮಂಗಳವಾರ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಸ್ತಾವಿತ ತಿದ್ದುಪಡಿಯು ಡ್ಯಾನ್ಸ್ ಬಾರ್‌ಗಳು ಡ್ಯಾನ್ಸ್ ಬಾರ್ ಪರವಾನಗಿಗಳನ್ನು ಡ್ಯಾನ್ಸ್ ಬಾರ್‌ಗಳ ಕಠಿಣ ಷರತ್ತುಗಳ ಅಡಿಯಲ್ಲೇ ಪಡೆಯುವಂತೆ ಮಾಡಲಿದೆ ಎಂದು ಅವರು ಸದನಕ್ಕೆ ತಿಳಿಸಿದರು.

ಪ್ರಸಕ್ತ ಇರುವ ಕಾನೂನಿನ ಲೋಪಗಳನ್ನು ಡ್ಯಾನ್ಸ್ ಬಾರ್ ನಿರ್ವಾಹಕರುಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದು, ಡ್ಯಾನ್ಸ್ ಬಾರ್ ಕಾನೂನಿನ ಬದಲು ಬೇರೆ ಕಾನೂನಿನ ಅಡಿಯಲ್ಲಿ ಡ್ಯಾನ್ಸ್ ಬಾರ್ ಪರವಾನಗಿ ಪಡೆಯುತ್ತಿದ್ದಾರೆ. ಅದಕ್ಕಾಗಿ ನಾವು ಮುಂಬಯಿ ಪೊಲೀಸ್ ಕಾಯ್ದೆಗೆ ತಿದ್ದುಪಡಿ ಮಾಡಿ ಡ್ಯಾನ್ಸ್ ಬಾರ್ ಪರವಾನಗಿಯನ್ನು ತಿದ್ದುಪಡಿ ಮಾಡಲಾದ ಮುಂಬಯಿ ಪೊಲೀಸ್ ಕಾಯ್ದೆಯಡಿ ಮಾತ್ರ ನೀಡುವಂತೆ ಮಾಡುತ್ತೇವೆ. ಡ್ಯಾನ್ಸ್ ಬಾರ್ ನಿರ್ವಾಹಕರುಗಳು ಕಾನೂನಿನ ಲೋಪಗಳನ್ನು ಪತ್ತೆ ಹಚ್ಚುತ್ತಾ ಇರುತ್ತಾರೆ. ನಾವು ಅದನ್ನು ಮುಚ್ಚುತ್ತೇವೆ ಎಂದು ಫಡ್ನವೀಸ್ ಹೇಳಿದರು.

ಥಾಣೆ ಜಿಲ್ಲೆಯಲ್ಲಿ ಡ್ಯಾನ್ಸ್ ಬಾರ್‌ಗಳು ಕಾರ್ಯ ನಿರ್ವಹಿಸುತ್ತಿರುವ ಕುರಿತಂತೆ ಕಾಂಗ್ರೆಸಿನ ನಾನಾ ಪಟೋಲೆ ಎತ್ತಿದ ವಿಚಾರಕ್ಕೆ ಮುಖ್ಯಮಂತ್ರಿ ಉತ್ತರ ನೀಡುತ್ತಿದ್ದರು.

ಡ್ಯಾನ್ಸ್ ಬಾರ್ ಕಾನೂನಿನಡಿ ಸರಕಾರ ಹಲವು ಷರತ್ತುಗಳನ್ನು ಹಾಕಿದ್ದು ಅಂತಹ ಡ್ಯಾನ್ಸ್ ಬಾರ್‌ಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಡಿಜೆಗಳ ಭಾರೀ ಶಬ್ದ ಮತ್ತು ಶಬ್ದ ಮಾಲಿನ್ಯ ಬಗ್ಗೆ ಸದಸ್ಯರ ಕಳವಳಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರೂ ಆದ ಫಡ್ನವೀಸ್, ಪ್ರಸಕ್ತ ಡಿಜೆ ಪರವಾನಗಿಗಳನ್ನು ಹಾಲಿ ಶಬ್ದ ಮಾಲಿನ್ಯ ನಿಯಮಗಳ ಅಡಿಯಲ್ಲಿ ನೀಡಲಾಗುತ್ತಿದೆ. ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. 2ನೇ ಪುಟಕ್ಕೆ

ರಾಮ ಮಂದಿರ ದೇಣಿಗೆ ವಿವಾದ: ಪೊಲೀಸರಿಂದ ಖಾಸಗಿ ಭದ್ರತಾ ಸಿಬ್ಬಂದಿಗಳ ಕುರಿತು ತನಿಖೆ

ಅಯೋಧ್ಯೆ, ಜೂ.30 - ಇಲ್ಲಿನ ರಾಮ ಮಂದಿರದಲ್ಲಿ ಸ್ವೀಕರಿಸಿದ ದೇಣಿಗೆಯ ದುರುಪಯೋಗಕ್ಕೆ ಸಂಬಂಧಿಸಿದ ತನಿಖೆ ಈಗ ದೇವಾಲಯಕ್ಕೆ ಸಂಬಂಧಿಸಿದ ಖಾಸಗಿ ಭದ್ರತಾ ಸಿಬ್ಬಂದಿಯ ಪಾತ್ರವನ್ನು ಪರಿಶೀಲಿಸುವವರೆಗೆ ವಿಸ್ತರಿತವಾಗಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಮೂಲಗಳ ಪ್ರಕಾರ, ಸುಮಾರು 400 ಖಾಸಗಿ ಭದ್ರತಾ ಸಿಬ್ಬಂದಿ ತನಿಖೆಯ ವ್ಯಾಪ್ತಿಯಲ್ಲಿದ್ದಾರೆ ಮತ್ತು ಅವರ ಕರ್ತವ್ಯಗಳು, ಕೆಲಸದ ವಿಧಾನಗಳು ಮತ್ತು ಚಟುವಟಿಕೆಗಳ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.

ಖಾಸಗಿ ಭದ್ರತಾ ಸಿಬ್ಬಂದಿಯನ್ನು ದೇವಾಲಯ ಸಂಕೀರ್ಣದ ಮುಖ್ಯ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳು, ದರ್ಶನ ಮಾರ್ಗ ಮತ್ತು ಕಾಣಿಕೆಗಳನ್ನು ಸಾಗಿಸಲು ಬಳಸುವ ಮಾರ್ಗಗಳಲ್ಲಿ ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಣಿಕೆಗಳ ಸಾಗಣೆಯ ಸಮಯದಲ್ಲಿ ನಿಯಮಗಳನ್ನು ಪಾಲಿಸಲಾಗಿದೆಯೇ ಅಥವಾ ಅಗತ್ಯ ತಪಾಸಣೆಗಳಿಲ್ಲದೆ ಜನರಿಗೆ ಅವಕಾಶ ನೀಡಲಾಗಿದೆಯೇ ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸರು ಕರ್ತವ್ಯದ ಪಟ್ಟಿಗಳು, ಸಿಸಿಟಿವಿ ದೃಶ್ಯಾವಳಿಗಳು, ಪ್ರವೇಶ-ನಿರ್ಗಮನ ದಾಖಲೆಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹೇಳಿಕೆಗಳನ್ನು ಕೂಡ ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಕರ್ತವ್ಯದ ಸಮಯದಲ್ಲಿ ಯಾವ ಸ್ಥಳದಲ್ಲಿ ಯಾವ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು ಮತ್ತು ಆ ಅವಧಿಯಲ್ಲಿ ಯಾವ ಚಟುವಟಿಕೆಗಳು ನಡೆದಿವೆ ಎಂಬುದನ್ನು ಕೂಡ ಅವರು ಪರಿಶೀಲಿಸುತ್ತಿದ್ದಾರೆ.

ಯಾವುದೇ ಭದ್ರತಾ ಸಿಬ್ಬಂದಿ ಉದ್ದೇಶ ಪೂರ್ವಕವಾಗಿ ನಿಯಮಗಳನ್ನು ನಿರ್ಲಕ್ಷಿಸಿದ್ದಾರೆ, ಅನುಚಿತವಾಗಿ ವರ್ತಿಸಿದ್ದಾರೆ ಅಥವಾ ಕಳ್ಳತನಕ್ಕೆ ಸಹಾಯ ಮಾಡಿದ್ದಾರೆ ಎಂದು ಕಂಡುಬಂದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು ಎಂದು ಮೂಲಗಳು ತಿಳಿಸಿವೆ.

ಜೂ.13 ರಂದು ದೇಣಿಗೆ ದುರುಪಯೋಗದ ಆರೋಪದ ಬಳಿಕ ರಾಮ ಮಂದಿರ ಟ್ರಸ್ಟ್‌ನ ಕೋರಿಕೆಯ ಮೇರೆಗೆ ಉತ್ತರ ಪ್ರದೇಶ ಸರಕಾರವು ವಿಶೇಷ ತನಿಖಾ ತಂಡ (ಎಸ್‌ಐಟಿ) ವನ್ನು ರಚಿಸಿತು.

ಎಸ್‌ಐಟಿ ವರದಿಯ ಆಧಾರದ ಮೇಲೆ, ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮ್ ಶಂಕರ್‌ಮಿಶ್ರಾ, ಸುಭಾಷ್ ಶ್ರೀವಾಸ್ತವ ಮತ್ತು ರಾಮಶಂಕರ್‌ಅಲಿಯಾಸ್ ಟಿನ್ನು ಯಾದವ್ ಎಂಬ ಎಂಟು ಜನರನ್ನು ಬಂಧಿಸಲಾಯಿತು.

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಅದರ ಸದಸ್ಯ ಅನಿಲ್ ಮಿಶ್ರಾ ಈಗಾಗಲೇ ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

ರಾಮನ ವಿರೋಧಿಗಳು ಈಗ ರಾಮ ನಾಮ ಪಠಿಸುತ್ತಿದ್ದಾರೆ : ಎಸ್ಪಿ, ಕಾಂಗ್ರೆಸಿಗೆ ಯೋಗಿ ಆದಿತ್ಯನಾಥ್ ಟೀಕೆ



ರಾಂಪುರ, ಜೂ. 30- ಅಯೋಧ್ಯೆ ರಾಮ ಮಂದಿರ ದೇಣಿಗೆ ಲೂಟಿ ಕುರಿತಂತೆ ವಿರೋಧ ಪಕ್ಷಗಳ ಟೀಕೆಯಿಂದ ಕೆರಳಿರುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ರಾಮ ಭಕ್ತರ ಮೇಲೆ ದಾಳಿ ಮಾಡಿದವರು ಮತ್ತು ಗುಂಡು ಹಾರಿಸಿದವರಲ್ಲದೆ ದೇವರ ಅಸ್ತಿತ್ವವನ್ನೇ ಪ್ರಶ್ನಿಸಿದವರು ಈಗ ದೇವರ ನಂಬಿಕೆ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಉತ್ತರ ಪ್ರದೇಶದ ರಾಂಪುರದಲ್ಲಿ ಮಂಗಳವಾರ ಸಾರ್ವಜನಿಕ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಅವರು, ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷವು ಕಪಟಿಗಳ ಕೂಟವಾಗಿದ್ದು ಈಗ ಅವರಿಗೆಲ್ಲ ಭಗವಾನ್ ರಾಮ ಹೊಸದಾಗಿ ಕಂಡು ಬಂದಿದ್ದಾನೆ. ರಾಮ ಮಂದಿರ ಚಳುವಳಿಯನ್ನು ವಿರೋಧಿಸಿದ್ದ ಅವರಿಗೆ ಈಗ ರಾಮ ಮುಖ್ಯವಾಗಿ ಕಂಡು ಬಂದಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂದು ಭಗವಾನ್ ರಾಮನ ಬಗ್ಗೆ ಭಕ್ತಿಯನ್ನು ಪ್ರತಿಪಾದನೆ ಮಾಡುತ್ತಿರುವವರು 2017ರ ಮೊದಲು 'ಜೈ ಶ್ರೀರಾಮ' ಎಂದು ಘೋಷಣೆ ಹಾಕುತ್ತಿದ್ದವರ ಮೇಲೆ ಲಾಠೀ ಚಾರ್ಜ್ ನಡೆಸಲು ಆದೇಶಿಸಿದವರಾಗಿದ್ದಾರೆ. ರಾಮ ಭಕ್ತರು ''ರಾಮಲಲ್ಲಾ ನಾವು ಬರುತ್ತಿದ್ದೇವೆ, ಮಂದಿರ ಅಲ್ಲೇ ನಿರ್ಮಿಸುತ್ತೇವೆ'' ಎಂದು ಹೇಳುತ್ತಿದ್ದಾಗ ಅವರಿಗೆ ಗುಂಡಿಕ್ಕಿದ್ದರು. ಈಗ ಅದೇ ಜನರು ರಾಮನ ಭಕ್ತಿ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಯೋಗಿ ಟೀಕಿಸಿದರು.

ರಾಂಪುರದಲ್ಲಿ 690 ಕೋಟಿ ರೂ. ಮೊತ್ತದ 102 ಅಭಿವೃದ್ಧಿ ಯೋಜನೆಗಳಿಗೆ ಶಂಕು ಸ್ಥಾಪನೆ ಮಾಡಿದ ಬಳಿಕ ಯೋಗಿ ಮಾತನಾಡುತ್ತಿದ್ದರು.

ರಾಮ ಮಂದಿರದ ದೇಣಿಗೆ ಲೂಟಿ ಬಗ್ಗೆ ವಿರೋಧ ಪಕ್ಷಗಳು ನಡೆಸುತ್ತಿರುವ ಟೀಕೆಯಿಂದ ಯೋಗಿ ಮಾತ್ರವಲ್ಲದೆ ಬಿಜೆಪಿಯ ಇತರ ನಾಯಕರುಗಳು ಆಕ್ರೋಶಗೊಂಡಿದ್ದಾರೆ.

ಜನರ ನಂಬಿಕೆ ಮತ್ತು ಚುನಾವಣಾ ಬೆಂಬಲದ ಬಲವನ್ನು ಅರಿತುಕೊಂಡೇ ಈಗ ವಿರೋಧ ಪಕ್ಷಗಳಿಗೆ ರಾಮ ಮಂದಿರ ಕುರಿತ ಅವುಗಳ ನಿಲುವನ್ನು ಬದಲಿಸುವಂತೆ ಮಾಡಿದೆ ಎಂದು ಯೋಗಿ ಹೇಳಿದರು.

ಅವರ ಹಿಂದಿನ ತಪ್ಪುಗಳಿಗೆ ಈಗ ಅವರು ಕ್ಷಮೆ ಕೇಳಲೇಬೇಕು. ಸಮಾಜವಾದಿ ಪಕ್ಷವು ತಪ್ಪು ಮಾರ್ಗದಲ್ಲಿತ್ತು. ಕಾಂಗ್ರೆಸ್ ಪಕ್ಷವಂತೂ 2017ರ ಮೊದಲು ಭಗವಾನ್ ರಾಮ ಮತ್ತು ಭಗವಾನ್ ಕೃಷ್ಣನ ಅಸ್ತಿತ್ವವನ್ನೇ ಪ್ರಶ್ನಿಸಿತ್ತು. 2ನೇ ಪುಟಕ್ಕೆ

ರಾಮ ಮಂದಿರದ 'ಲೂಟಿ' ಬಗ್ಗೆ ಪ್ರಧಾನಿ ಮೋದಿ 'ಮೌನ' ಜನರ ಧಾರ್ಮಿಕ ನಂಬಿಕೆ ಮೇಲಿನ ನೇರ ದಾಳಿ : ಕಾಂಗ್ರೆಸ್

ಹೊಸದಿಲ್ಲಿ, ಜೂ. 30- ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರ ''ಮೌನ'' ದೇಶದ ಕೋಟ್ಯಾಂತರ ಜನರ ನಂಬಿಕೆ ಮೇಲಿನ ''ನೇರ ದಾಳಿ'' ಎಂದು ವಿರೋಧ ಪಕ್ಷ ಕಾಂಗ್ರೆಸ್ ಮಂಗಳವಾರ ಆಪಾದಿಸಿದೆ.

ಕಾಂಗ್ರೆಸಿನ ನಿಯೋಗವೊಂದು ಮಂಗಳವಾರ ಅಯೋಧ್ಯೆಗೆ ಭೇಟಿ ನೀಡಿ ಪೂಜೆ ಸಲ್ಲಿಸಿ ಭಗವಾನ್ ರಾಮನ ಆಶೀರ್ವಾದ ಪಡೆಯಲು ಬಯಸಿತ್ತು. ಆದರೆ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಶ್ರೀರಾಮ ಮಂದಿರದಲ್ಲಿ ನಡೆದಿರುವ ದರೋಡೆ ಕುರಿತಂತೆ ಪ್ರಧಾನಮಂತ್ರಿ ಮೋದಿ ಅವರ ಮೌನವು ದೇಶದಾದ್ಯಂತದ ರಾಮ ಭಕ್ತರ ಧಾರ್ಮಿಕ ನಂಬಿಕೆಯ ಮೇಲಿನ ನೇರ ದಾಳಿಯಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟೀಕಿಸಿದ್ದಾರೆ.

ಪ್ರಧಾನಿ ಮೋದಿ ಅವರು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟನ್ನು ಯಾವುದೇ ಪಾರದರ್ಶಕ ಮಾನದಂಡವಿಲ್ಲದೆ ಮತ್ತು ಸಾರ್ವಜನಿಕರ ಸಲಹೆ ಪಡೆಯದೆ ಆರೆಸ್ಸೆಸ್ ಸದಸ್ಯರನ್ನು ಅದಕ್ಕೆ ನೇಮಕಾತಿ ಮಾಡಿದ್ದರು. ಸಂಪೂರ್ಣ ಟ್ರಸ್ಟನ್ನು ಮೋದಿ ಸರಕಾರ ಆರ್‌ಟಿಐ ಕಾಯ್ದೆ ವ್ಯಾಪ್ತಿಯಿಂದಲೂ ಹೊರಗಿಟ್ಟಿತ್ತು. ಮೋದಿಯವರೇ ಈಗ ನಿಮ್ಮ ಮೌನ ಮುರಿಯಿರಿ ಎಂದು ರಮೇಶ್ ಆಗ್ರಹಿಸಿದ್ದಾರೆ.

ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಅವರು ಸೋಮವಾರ ರಾತ್ರಿ ಅಯೋಧ್ಯೆಗೆ ತಲುಪಿದ್ದು, ಅವರನ್ನು ಅವರಿದ್ದ ಹೊಟೇಲಿನಿಂದ ಬಂಧಿಸಿದ್ದ ಪೊಲೀಸರು ವಾಹನದಲ್ಲಿ ಬೇರೆಡೆ ಕರೆದೊಯ್ದಿದ್ದಾರೆ. ಆ ಬಗ್ಗೆ ರಾಯ್ ಅವರು ಎಕ್ಸ್‌ನಲ್ಲಿ ಹೇಳಿಕೆಯೊಂದನ್ನು ನೀಡಿದ್ದು, ತಾನು ಅಯೋಧ್ಯೆಗೆ ತಲುಪಿದ ಬೆನ್ನಲ್ಲೇ ಭಯದಿಂದ ಉತ್ತರ ಪ್ರದೇಶ ಸರಕಾರದ ಆದೇಶದಂತೆ ತನ್ನನ್ನು ಪೊಲೀಸರು ಬಂಧಿಸಿ ಕರೆದೊಯ್ದಿದ್ದಾರೆ ಎಂದು ಹೇಳಿದ್ದಾರೆ.

ಬಿಜೆಪಿ ಸರಕಾರದ ಸರ್ವಾಧಿಕಾರ ಅದರ ಪರಾಕಾಷ್ಠೆಗೆ ತಲುಪಿದೆ. ಜೂನ್ 30ರಂದು ಕಾಂಗ್ರೆಸ್ ನಿಯೋಗವೊಂದು ಅಯೋಧ್ಯೆಗೆ ಭೇಟಿ ನೀಡಿ ಭಗವಾನ್ ಶ್ರೀರಾಮನ ದರ್ಶನ ಪಡೆದು ಪ್ರಾರ್ಥನೆ ಮಾಡಿ ಆಶೀರ್ವಾದ ಪಡೆಯಲು ನಿರ್ಧರಿಸಿತ್ತು. ನಾನು ಅಯೋಧ್ಯೆಗೆ ಬಂದ ಕೆಲವೇ ಗಂಟೆಯಲ್ಲಿ ಬಿಜೆಪಿ ಸರಕಾರ ಭಯಪಟ್ಟು ನನ್ನನ್ನು ಹೊಟೇಲಿನಿಂದಲೇ ಬಂಧಿಸಲು ಪೊಲೀಸರನ್ನು ಕಳುಹಿಸಿದ್ದು ಪೊಲೀಸರು ನನ್ನನ್ನು ಜೀಪೊಂದರಲ್ಲಿ ಕರೆದೊಯ್ಯುತ್ತಿದ್ದಾರೆ ಎಂದು ರಾಯ್ ಹೇಳಿದ್ದಾರೆ.

ಸುಪ್ರೀಂ ಕೋರ್ಟಿನ ನಿಗಾದಲ್ಲಿ ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಕುರಿತು ತನಿಖೆ ನಡೆಯಬೇಕು ಎಂದು ಆಗ್ರಹಿಸಿರುವ ಕಾಂಗ್ರೆಸ್ ಪಕ್ಷ, ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟನ್ನು ವಿಸರ್ಜಿಸುವಂತೆ ಒತ್ತಾಯಿಸಿದೆ. ಇದೇ ವೇಳೆ, ಫೈಜಾಬಾದ್ ಬಾರ್ ಅಸೋಸಿಯೇಶನ್ ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಪ್ರಕರಣದಲ್ಲಿ 2ನೇ ಪುಟಕ್ಕೆ

ಟಿಇಟಿ ಪ್ರಶ್ನೆ ಪತ್ರಿಕೆ ಸೋರಿಕೆ: ಪರಾರಿಯಾಗಿದ್ದ ಆರೋಪಿಯ ಪತ್ನಿ ಬಿಹಾರದಲ್ಲಿ ಬಂಧನ ; ಭಿವಂಡಿ ಪೊಲೀಸರ ವಶಕ್ಕೆ



ಥಾಣೆ, ಜೂ.30 - ಟಿಇಟಿ - 2026ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಥಾಣೆ ಜಿಲ್ಲೆಯ ಭಿವಂಡಿ ಪೊಲೀಸರು, ಪರಾರಿಯಾಗಿದ್ದ ಆರೋಪಿಗಳಲ್ಲಿ ಒಬ್ಬನ ಪತ್ನಿಯನ್ನು ಬಿಹಾರದಿಂದ ಬಂಧಿಸಿದ್ದು, ಇಲ್ಲಿಯವರೆಗೆ ಬಂಧಿಸಲಾದವರ ಸಂಖ್ಯೆ ನಾಲ್ಕಕ್ಕೆ ಏರಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಂಧಿತ ಮಹಿಳೆಯನ್ನು ಟ್ರಾನ್ಸಿಟ್ ರಿಮಾಂಡ್‌ನಲ್ಲಿ ಭಿವಂಡಿಗೆ ಕರೆತಂದು ಅಲ್ಲಿನ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದ ಬಳಿಕ ಜು.6 ರವರೆಗೆ ಪೊಲೀಸ್ ಕಸ್ಟಡಿಗೆ ಕಳುಹಿಸಲಾಯಿತು. ಇನ್ನೂ ಇಬ್ಬರು ಆರೋಪಿಗಳಿಗಾಗಿ ಹುಡುಕಾಟ ನಡೆಯುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮಹಾರಾಷ್ಟ್ರದಾದ್ಯಂತ ನಡೆಯಬೇಕಿದ್ದ ಪರೀಕ್ಷೆಗೆ ಒಂದು ದಿನ ಮೊದಲು, ಶನಿವಾರ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಕಂಡುಬಂದ ಬಳಿಕ ಪೊಲೀಸರು ಭಿವಂಡಿಯಿಂದ ಮೂವರು ವ್ಯಕ್ತಿಗಳನ್ನು ಬಂಧಿಸಿದರು, ಇದರಿಂದಾಗಿ ಪರೀಕ್ಷೆಯನ್ನು ಮುಂದೂಡಬೇಕಾಯಿತು. ಪ್ರಾಥಮಿಕ ತನಿಖೆಯಲ್ಲಿ ಈ ಪ್ರಕರಣದಲ್ಲಿ ಅಂತರ್‌ರಾಜ್ಯದಂಧೆಯ ಭಾಗಿತ್ವವನ್ನು ಸೂಚಿಸಲಾಗಿರುವುದರಿಂದ ಎಸ್‌ಐಟಿ ಪ್ರಕರಣದ ತನಿಖೆ ನಡೆಸುತ್ತಿದೆ.

ಉದ್ಧವ್ ಠಾಕ್ರೆಗೆ ಮತ್ತೊಂದು ಹೊಡೆತ: ಶಿಂದೆಸೇನೆ ಸೇರಿದ ಸಚಿನ್ ಅಹಿರ್

ಮೊದಲ ಪುಟದಿಂದ



ಶಿವಸೇನಾ ಎಂಎಲ್‌ಎಗಳು ಮೊದಲೇ ಸಚಿನ್ ಅಹಿರ್ ಅವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿದ್ದರು, ಮತ್ತು ಆಡಳಿತ ಪಕ್ಷವು ಈಗ ಅವರನ್ನು ಪರಿಷತ್ತಿನ ಉಪಸಭಾಪತಿ ಹುದ್ದೆಗೆ ಬೆಂಬಲಿಸುತ್ತಿದೆ ಎಂದು ಶಿಂದೆ ಸುದ್ದಿಗಾರರಿಗೆ ತಿಳಿಸಿದರು.

ಬಾಳಾಸಾಹೇಬ್ ಭವನದಲ್ಲಿ ಆಯೋಜಿಸಲಾದ ಪತ್ರಿಕಾಗೋಷ್ಠಿಯಲ್ಲಿ ಶಿಂದೆ ಮಾತನಾಡುತ್ತಿದ್ದರು. ಸಂಸದ ಡಾ. ಶ್ರೀಕಾಂತ್ ಶಿಂದೆ, ಸಚಿವ ಪ್ರತಾಪ್ ಸರ್ನಾಯಕ್, ನೀಲಂ ಗೋರ್ಹೆ, ಸಂಸದ ಓಂರಾಜೆ ನಿಂಬಾಳ್ಕರ್ ಹಾಗೂ ನಾಯಕರು, ಉಪ ನಾಯಕರು ಮತ್ತು ಪ್ರಮುಖ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಚಿನ್ ಅಹಿರ್ ಅವರನ್ನು ಪಕ್ಷದ ಕಾರ್ಯಕರ್ತರೊಂದಿಗೆ ನಿಕಟ ಸಂಪರ್ಕ ಹೊಂದಿರುವ ತಳಮಟ್ಟದ ಕಾರ್ಯಕರ್ತ ಎಂದು ಶ್ಲಾಘಿಸಿದ ಶಿಂದೆ ಅವರು, ಮಹಾಯುತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಅವರ ನಿರ್ಧಾರವು ಶಿವಸೇನೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

ಮಾಜಿ ರಾಜ್ಯ ಸಚಿವರಾದ ಅಹಿರ್ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಬೆಂಬಲದೊಂದಿಗೆ ಉಪ ಸಭಾಪತಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ ಮತ್ತು ಒಕ್ಕೂಟದ ಸಂಖ್ಯಾ ಬಲವನ್ನು ನೋಡಿದರೆ ಅವರು ಆರಾಮವಾಗಿ ಆಯ್ಕೆಯಾಗುವ ನಿರೀಕ್ಷೆಯಿದೆ ಎಂದು ಅವರು ತಿಳಿಸಿದರು.

ಪರಿಷತ್ತಿನ ಉಪ ಸಭಾಪತಿ ಹುದ್ದೆಗೆ ಜು.1 ರಂದು ಚುನಾವಣೆ ನಡೆಯಲಿದೆ.

'ಅಹಿರ್ ಎಂಎಲ್‌ಸಿ ಆದಾಗ, ಅವರಿಗೆ ಮತ ಚಲಾಯಿಸಿದವರು ನಮ್ಮ ಶಾಸಕರು. 'ಬಿಲ್ಲು ಮತ್ತು ಬಾಣ' ಚಿಹ್ನೆಯ ಮೇಲೆ ಗೆದ್ದ ಶಿವಸೇನಾ ಶಾಸಕರು ಅವರನ್ನು ರಾಜ್ಯ ವಿಧಾನಸಭೆಯ ಮೇಲ್ಮನೆಗೆ ಆಯ್ಕೆ ಮಾಡಿದರು. ಅವರು ಈಗಲೂ ನಮ್ಮೊಂದಿಗಿದ್ದಾರೆ' ಎಂದು ಶಿಂದೆ ಹೇಳಿದರು.

ವಿಧಾನ ಭವನದ ದಾಖಲೆಗಳ ಪ್ರಕಾರ, ಅಹಿರ್ ಅವರ 6 ವರ್ಷಗಳ ಎಂಎಲ್‌ಸಿ ಅವಧಿಯಲ್ಲಿ ಇನ್ನೂ ಎರಡು ವರ್ಷಗಳು ಬಾಕಿ ಉಳಿದಿವೆ. ಅಹಿರ್ ಅವರನ್ನು ಪಕ್ಷದ ಕಾರ್ಯಕರ್ತರೊಂದಿಗೆ ನಿಕಟ ಸಂಪರ್ಕ ಹೊಂದಿರುವ ತಳಮಟ್ಟದ ಕಾರ್ಯಕರ್ತ ಎಂದು ಬಣ್ಣಿಸಿದ ಶಿಂದೆ, ಅವರ ನಿರ್ಧಾರವು ಮುಂಬಯಿ, ಪುಣೆ ಮತ್ತು ಮಹಾರಾಷ್ಟ್ರದ ಇತರ ಭಾಗಗಳಲ್ಲಿ ಶಿವಸೇನೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

ಶಿವಸೇನೆ ಯಾವಾಗಲೂ ಕಾರ್ಯಕರ್ತರ ಪಕ್ಷವಾಗಿದೆ ಮತ್ತು ಸಚಿನ್ ಅಹಿರ್ ತಂಡದ ಆಟಗಾರ. ನಾನು ಅವರನ್ನು ಸ್ವಾಗತಿಸುತ್ತೇನೆ ಮತ್ತು ನನ್ನ ಶುಭಾಶಯಗಳನ್ನು ತಿಳಿಸುತ್ತೇನೆ ಎಂದು ಅವರು ತಿಳಿಸಿದರು. ಅಹಿರ್ ಅವರ ನಾಮಪತ್ರ ಸಲ್ಲಿಕೆಯ ಸಮಯವನ್ನು ಉಲ್ಲೇಖಿಸಿದ ಶಿಂದೆ, ಜೂ.30 ರಂದು ಅವರು ತಮ್ಮ ನಾಮಪತ್ರ ಸಲ್ಲಿಸಿದ್ದು ಕಾಕತಾಳೀಯ ಏಕೆಂದರೆ.2022ರಲ್ಲಿ ನಾನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದು ಇದೇ ದಿನ ಎಂದು ನೆನಪಿಸಿಕೊಂಡರು. ನಾವು ಯಾವುದನ್ನೂ ಮುರಿಯಲು ಇಲ್ಲಿಗೆ ಬಂದಿಲ್ಲ.ನಾವು ಹೊಸ ಜನರೊಂದಿಗೆ ಸಂಪರ್ಕ ಸಾಧಿಸುತ್ತಿದ್ದೇವೆ ಮತ್ತು ಅವರು ನಮ್ಮೊಂದಿಗೆ ಸೇರುತ್ತಿದ್ದಾರೆ ಎಂದು ಅವರು ಹೇಳಿದರು.

'ಆಪರೇಷನ್ ಟೈಗರ್'ಗಿಂತ 'ಆಪರೇಷನ್ ದೇವೇಂದ್ರ ಫಡ್ನವೀಸ್' ಎಂಬ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಆದಿತ್ಯ ಠಾಕ್ರೆ ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಶಿಂದೆ, 2019ರಲ್ಲಿ ಫಡ್ನವೀಸ್ ಉದ್ಧವ್ ಅವರಿಗೆ '50 ಕರೆಗಳು' ಮಾಡಿದ್ದರು, ಆದರೆ ಯಾವುದಕ್ಕೂ ಉತ್ತರಿಸಲಿಲ್ಲ ಎಂದು ತಿಳಿಸಿದರು.

'ನಾನು ಅದಕ್ಕೆ ಸಾಕ್ಷಿ.ಎಂವಿಎ ಸರಕಾರದ ಅವಧಿಯಲ್ಲಿ, 'ನೀವು ಬದುಕುಳಿಯುತ್ತೀರಿ, ಅಥವಾ ನಾನು ಬದುಕುಳಿಯುತ್ತೇನೆ' ಎಂಬಂತಹ ಭಾಷೆಯನ್ನು ಬಳಸಲಾಯಿತು. ಸುಳ್ಳು ಪ್ರಕರಣಗಳನ್ನು ದಾಖಲಿಸಲಾಯಿತು ಮತ್ತು ಪೊಲೀಸರನ್ನು ಫಡ್ನವೀಸ್ ಅವರ 'ಸಾಗರ್' ಬಂಗಲೆಗೆ ಕಳುಹಿಸಲಾಯಿತು. ಈಗ, ಅವರು (ಉದ್ಧವ್) ಇದ್ದಕ್ಕಿದ್ದಂತೆ ಫಡ್ನವೀಸ್ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಇವು ಮೊಸಳೆ ಕಣ್ಣೀರು, ಮತ್ತು ಫಡ್ನವೀಸ್ ಅದನ್ನು ಚೆನ್ನಾಗಿ ತಿಳಿದಿದ್ದಾರೆ ಎಂದು ಶಿಂದೆ ಹೇಳಿದರು.

ಉದ್ಧವ್ ಅವರನ್ನು ಹೆಸರಿಸದೆ ಟೀಕಿಸಿದ ಉಪಮುಖ್ಯಮಂತ್ರಿ, 'ಇಷ್ಟು ಬೇಗ ಬಣ್ಣ ಬದಲಾಯಿಸುವ ಯಾರನ್ನೂ ನಾನು ನೋಡಿಲ್ಲ' ಎಂದರು.

ಉದ್ಧವ್ ಠಾಕ್ರೆ ನೇತೃತ್ವದ ಪಕ್ಷಕ್ಕೆ ಆತ್ಮಾವಲೋಕನದ ಅಗತ್ಯವಿದೆ ಎಂಬ ಸೇನಾ (ಯುಬಿಟಿ) ಎಂಎಲ್‌ಸಿ ಸುನಿಲ್ ಶಿಂಧೆ ಅವರ ಹೇಳಿಕೆಗೆ ಸಂಬಂಧಿಸಿದಂತೆ ಮಾತನಾಡಿದ ಶಿಂದೆ,ಅವರು (ಉದ್ಧವ್ ಮತ್ತು ಇತರ ನಾಯಕರು) 6 ಲೋಕಸಭಾ ಕ್ಷೇತ್ರಗಳಿಗೆ (ಶಿವಸೇನೆಗೆ ಸೇರಿದ ಬಂಡಾಯ ಸಂಸದರು) ಹೋಗಿ ಜನರನ್ನು ನಿಂದಿಸಿದ್ದಾರೆ, ಆದ್ದರಿಂದ ಅಹಿರ್ ಅವರಿಗೆ ಈಗ ಕನ್ನಡಿಯನ್ನು ತೋರಿಸಿದ್ದಾರೆ. ಸುನಿಲ್ ಶಿಂಧೆ ಸ್ವತಃ ಆತ್ಮಾವಲೋಕನ ಕೇಳುತ್ತಿದ್ದರೆ, ಅವರು ಅದನ್ನು ಮಾಡಬೇಕು ಎಂದು ತಿಳಿಸಿದರು.

ಒಂದು ವಾರದ ಹಿಂದೆ 6 ಸಂಸದರು ಸಿಕ್ಸ್ ಹೊಡೆದರು, ಇಂದು ಅಹಿರ್ ಸಿಕ್ಸ್ ಹೊಡೆದರು. ಇಂದಿನಿಂದ, ಬೌಂಡರಿ ಮತ್ತು ಸಿಕ್ಸ್ ಮುಂದುವರಿಯುತ್ತದೆ ಮತ್ತು ಅವರಿಂದ ಒಂದು ವಿಕೆಟ್ ಬೀಳುತ್ತದೆ ಎಂದು ಶಿಂದೆ ತಿಳಿಸಿದರು.

ಅಹಿರ್ ಅವರ ರಾಜಕೀಯ ಜೀವನವನ್ನು ಶ್ಲಾಘಿಸಿದ ಶಿಂದೆ ಅವರು, ಅಹಿರ್ ಮೂರು ಬಾರಿ ವಿಧಾನಸಭೆಯ ಶಾಸಕರಾಗಿದ್ದರು, ಈಗ ಅವರು ವಿಧಾನ ಪರಿಷತ್ತಿನ ಶಾಸಕರಾಗಿದ್ದಾರೆ. ಅವರು 7 ಇಲಾಖೆಗಳಲ್ಲಿ ರಾಜ್ಯ ಸಚಿವರಾಗಿದ್ದರು. ಅವರು ಗಿರಣಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಕೆಲಸ ಮಾಡಿದರು. ಮುಂಬೈಕರ್‌ಗಳ ಸಮಸ್ಯೆಗಳ ಬಗ್ಗೆ ಅವರಿಗೆ ತಿಳಿದಿದೆ. ಕಾರ್ಮಿಕರಿಗೆ, ಮೀನುಗಾರರ ಮತ್ತು ಶಿವಸೈನಿಕರ ಸಮಸ್ಯೆಗಳಿಗೆ ನ್ಯಾಯ ಒದಗಿಸುವ ತಳಮಟ್ಟದ ನಾಯಕ ಶಿವಸೇನೆಗೆ ಬಂದಿದ್ದಾರೆ ಎಂದು ಶಿಂದೆ ತೃಪ್ತಿ ವ್ಯಕ್ತಪಡಿಸಿದರು.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತವಿದೆ ಎಂದು ಅವರು ಹೇಳಿದರು. ಬುಧವಾರ ಅಹಿರ್ ಉಪಸಭಾಪತಿಯಾಗಿ ಆಯ್ಕೆಯಾಗಲಿದ್ದಾರೆ. ಮುಂಬಯಿನಲ್ಲಿ ಮಾತ್ರವಲ್ಲದೆ ಮಹಾರಾಷ್ಟ್ರದಲ್ಲಿಯೂ ಉಪಸಭಾಪತಿಯಾಗಿ ನ್ಯಾಯ ಒದಗಿಸಲು ಅವರು ಕೆಲಸ ಮಾಡುತ್ತಾರೆ ಎಂದು ಶಿಂದೆ ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಕಾರ್ಯಸೂಚಿ ಕುರ್ಚಿಯಲ್ಲ, ನಮ್ಮನ್ನು ಕುರ್ಚಿಯಲ್ಲಿ ಕೂರಿಸಿದ ಜನರ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಅವರಿಗೆ ನ್ಯಾಯ ಒದಗಿಸುವುದು. ರೈತರು, ಕಾರ್ಮಿಕರು, ಪ್ರೀತಿಯ ಸಹೋದರಿಯರು, ಯುವಕರು ಸೇರಿದಂತೆ ರಾಜ್ಯದ ಪ್ರತಿಯೊಬ್ಬರ ಸಮಸ್ಯೆಗಳಿಗೆ ನ್ಯಾಯ ಒದಗಿಸುವ ಕೆಲಸವನ್ನು ಮಹಾಯುತಿ ಸರಕಾರ ಮಾಡಿದೆ ಎಂದು ಅವರು ಹೇಳಿದರು.

ಜನಪ್ರತಿನಿಧಿಗಳು ಕ್ಷೇತ್ರದ ಜನರಿಗೆ ನ್ಯಾಯ ನೀಡಲು ಬಯಸುತ್ತಾರೆ. ನಾವು ನಾಶಮಾಡಲು ಕೆಲಸ ಮಾಡುವುದಿಲ್ಲ, ಆದರೆ ನಿರ್ಮಿಸಲು ಕೆಲಸ ಮಾಡುತ್ತೇವೆ. ಕೆಲವರು ನಾಶಮಾಡಲು ಬಂದರೆ, ನಾವು ಶಿವಸೇನೆಯನ್ನು ಬೆಳೆಸಲು ಬಂದಿದ್ದೇವೆ. ಬಾಳಾಸಾಹೇಬ್ ಮತ್ತು ಆನಂದ್ ದಿಘೆ ಅವರ ಆಲೋಚನೆಗಳೊಂದಿಗೆ ನಾವು ಮುಂದುವರಿಯುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಪುನರುಚ್ಚರಿಸಿದರು ಈ ಮಧ್ಯೆ ತಮ್ಮ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಶಿಂದೆಗೆ ಧನ್ಯವಾದ ಅರ್ಪಿಸಿದ ಅಹಿರ್, ತಳಮಟ್ಟದ ಹಿನ್ನೆಲೆಯಿಂದ ಬಂದಿದ್ದರೂ ತನಗೆ ಬಹುಮಾನ ನೀಡಲಾಗಿದೆ ಎಂದು ಹೇಳಿದರು.

'ಕೆಲವರು ನನ್ನನ್ನು ಟೀಕಿಸುತ್ತಾರೆ, ಆದರೆ ಬೇರೆ ನಿಲುವು ತೆಗೆದುಕೊಳ್ಳುವವರನ್ನು ಟೀಕಿಸುವುದು ದುರದೃಷ್ಟಕರ. ರಾಜಕೀಯ ಟೀಕೆಗಳಿಗೆ ನಾನು ಪ್ರತ್ಯೇಕ ವೇದಿಕೆಯಲ್ಲಿ ಪ್ರತಿಕ್ರಿಯಿಸುತ್ತೇನೆ' ಎಂದು ಅವರು ತಿಳಿಸಿದರು.

ಆದಿತ್ಯ ಠಾಕ್ರೆ ಅವರ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಯಾರಾದರೂ ಪಕ್ಷ ಸೇರಿದಾಗ ಅವರನ್ನು ಸ್ವಾಗತಿಸಲಾಗುತ್ತದೆ, ಆದರೆ ಯಾರಾದರೂ ಪಕ್ಷ ತೊರೆದಾಗ ಅವರನ್ನು ಸ್ವಾರ್ಥಿ ಎಂದು ಕರೆಯಲಾಗುತ್ತದೆ ಎಂದು ಅಹಿರ್ ಹೇಳಿದರು. ಶಿವಸೇನೆ (ಯುಬಿಟಿ) ವಹಿಸಿಕೊಟ್ಟ ಪ್ರತಿಯೊಂದು ಜವಾಬ್ದಾರಿಯನ್ನು ತಾನು ಯಾವಾಗಲೂ ನಿರ್ವಹಿಸಿದ್ದೇನೆ ಮತ್ತು ನಾನು ಪಕ್ಷವನ್ನು ತೊರೆದಿಲ್ಲ ಎಂದು ಪ್ರತಿಪಾದಿಸಿದರು.

ಉದ್ಧವ್ ಠಾಕ್ರೆಗೆ 'ಧನ್ಯವಾದ ಸಂದೇಶ' ಕಳುಹಿಸಿ ಪಕ್ಷ ತೊರೆದ ಸಚಿನ್ ಅಹಿರ್

ಮುಂಬಯಿ,ಜೂ.30 - ಠಾಕ್ರೆಸೇನೆಗೆ ಒಂದರ ಬಳಿಕ ಒಂದರಂತೆ ಆಘಾತಕಾರಿ ಘಟನೆಗಳು ಸಂಭವಿಸುತ್ತಿವೆ. ಇತ್ತೀಚೆಗೆ, ಪಕ್ಷದ 6 ಸಂಸದರು ಪಕ್ಷವನ್ನು ತೊರೆದು ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಸೇರಿದರು. ಮತ್ತು ಈಗ ಈ ಪಕ್ಷ ವಿಭಜನೆಯು ಹೊಸ ಅಧ್ಯಾಯವೆಂದರೆ, ಠಾಕ್ರೆಸೇನೆಯ ವಿಧಾನ ಪರಿಷತ್ ಸದಸ್ಯ ಸಚಿನ್ ಅಹಿರ್ ಕೂಡ ಠಾಕ್ರೆ ಅವರನ್ನು ತೊರೆದಿದ್ದಾರೆ. ಶಿಂದೆಸೇನೆಗೆ ಸೇರಿದ ಮೇಲೆ ಅಹಿರ್ ಅವರು ವಿಧಾನ ಪರಿಷತ್ತಿನ ಉಪಸಭಾಪತಿ ಸ್ಥಾನಕ್ಕೆ ತಕ್ಷಣವೇ ತಮ್ಮ ನಾಮಪತ್ರ ಸಲ್ಲಿಸಿದರು. ಈ ನಿರ್ಧಾರವನ್ನು ಠಾಕ್ರೆಸೇನೆಗೆ ದೊಡ್ಡ ಹೊಡೆತವೆಂದು ಪರಿಗಣಿಸಲಾಗುತ್ತಿದೆ.

ಪಕ್ಷವನ್ನು ತೊರೆಯುವ ಮೊದಲು ಸಚಿನ್ ಅಹಿರ್ ಅವರು ಉದ್ಧವ್ ಠಾಕ್ರೆ ಅವರಿಗೆ ಸಂದೇಶ ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಸಂದೇಶದಲ್ಲಿ 'ಅನಿವಾರ್ಯ ಕಾರಣಗಳಿಂದ ಪಕ್ಷವನ್ನು ತೊರೆಯುತ್ತಿರುವುದಾಗಿ' ಅಹಿರ್ ವಿವರಿಸಿದ್ದಾರೆ. ಠಾಕ್ರೆ ಅವರು ನೀಡಿದ ನಂಬಿಕೆ ಮತ್ತು ಪ್ರೀತಿಗೆ ಧನ್ಯವಾದ ಅರ್ಪಿಸಿದ ಅವರು, ಅದು ಇನ್ನೂ ಮುಂದುವರಿಯುತ್ತದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.

ಅಲ್ಲದೆ, ಸಚಿನ್ ಅಹಿರ್ ತಮ್ಮ ವಿದಾಯ ಸಂದೇಶದಲ್ಲಿ, 'ಪಕ್ಷದ ಉಜ್ವಲ ಭವಿಷ್ಯಕ್ಕಾಗಿ ನನ್ನ ಶುಭಾಶಯಗಳು ಯಾವಾಗಲೂ ಇರುತ್ತವೆ' ಎಂದು ಉಲ್ಲೇಖಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯರಾಗಿ ಅಹಿರ್ ಅವರ ಅವಧಿ 2028 ರವರೆಗೆ ಇರುತ್ತದೆ. ಇದಾದ ಬಳಿಕ ಅವರು ವರ್ಲಿ ವಿಧಾನಸಭಾ ಕ್ಷೇತ್ರದಿಂದ ಆದಿತ್ಯ ಠಾಕ್ರೆ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆಯೂ ಇದೆ.

ಸಚಿನ್ ಅಹಿರ್ ಶಿಂದೆಸೇನೆಗೆ; ವರ್ಲಿಯಲ್ಲಿ ಆದಿತ್ಯ ಠಾಕ್ರೆ ವಿರುದ್ಧ ಸ್ಪರ್ಧೆ ಸಾಧ್ಯತೆ

ಮುಂಬಯಿ,ಜೂ.30 - ಮಹಾರಾಷ್ಟ್ರ ವಿಧಾನಪರಿಷತ್ ಉಪಸಭಾಪತಿ ಸ್ಥಾನವನ್ನು ಎದುರಾಳಿ ಶಿವಸೇನೆ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಅವರ ಆಪ್ತ ಸಚಿನ್ ಅಹಿರ್‌ಗೆ ನೀಡುವ ಮೂಲಕ ಉಪಮುಖ್ಯಮಂತ್ರಿ ಹಾಗೂ ಶಿವಸೇನೆ ಮುಖ್ಯಸ್ಥ ಏಕನಾಥ್ ಶಿಂದೆ ಅವರು ದೊಡ್ಡ ಆಟ ಆಡಿರುವಂತಿದೆ. ಶಿಂದೆ ಅವರ ಈ ನಡೆಯಿಂದಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮುಂಬಯಿಯ ವರ್ಲಿಯಲ್ಲಿ ಸಚಿನ್ ಅಹಿರ್ ಮತ್ತು ಆದಿತ್ಯ ಠಾಕ್ರೆ ಮುಖಾಮುಖಿಯಾಗುತ್ತಾರಾ? ಎಂಬ ಪ್ರಶ್ನೆ ಸೃಷ್ಟಿಯಾಗಿದೆ.



ಸಚಿನ್ ಅಹಿರ್ ವರ್ಲಿ ಪ್ರದೇಶದವರಾಗಿದ್ದು, ಅವರನ್ನು ಆದಿತ್ಯ ಠಾಕ್ರೆ ಅವರ ಆಪ್ತರು ಎಂದು ಪರಿಗಣಿಸಲಾಗಿದೆ. ಈಗ ಅವರು ಶಿವಸೇನೆಗೆ ಸೇರಿರುವುದರಿಂದ, 2029ರ ವಿಧಾನಸಭಾ ಚುನಾವಣೆಯಲ್ಲಿ ಸಚಿನ್ ಅಹಿರ್ ವರ್ಸಸ್ ಆದಿತ್ಯ ಸ್ಪರ್ಧೆ ನಡೆಯುವ ಸಾಧ್ಯತೆಯಿದೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಕೆಲವು ಸಮಯದಿಂದ ಪ್ರಮುಖ ಹಿನ್ನಡೆಗಳನ್ನು ಎದುರಿಸುತ್ತಿದೆ. ಕೆಲವು ದಿನಗಳ ಹಿಂದೆ 6 ಸಂಸದರು ಉದ್ಧವ್ ಠಾಕ್ರೆ ಅವರನ್ನು ತೊರೆದು ಏಕನಾಥ್ ಶಿಂದೆ ಅವರ ಶಿವಸೇನೆಯನ್ನು ಸೇರಿದರು. ಅದಾದ ಬಳಿಕ ಎಂಎಲ್‌ಸಿ ಸಚಿನ್ ಅಹಿರ್ ಕೂಡ ಠಾಕ್ರೆ ಅವರನ್ನು ತೊರೆದು ಏಕನಾಥ್ ಶಿಂದೆ ಅವರ ಪಕ್ಷವನ್ನು ಸೇರಿದ್ದಾರೆ. ಸಚಿನ್ ಅಹಿರ್ ಈ ಮೊದಲು ವರ್ಲಿ ಕ್ಷೇತ್ರದಿಂದ ಎಂಎಲ್‌ಎ ಆಗಿದ್ದು, ಆದಿತ್ಯ ಠಾಕ್ರೆಗಾಗಿ ಕ್ಷೇತ್ರವನ್ನು ತ್ಯಾಗ ಮಾಡಿದ್ದರು. ಈಗ ಅವರು ಶಿವಸೇನೆಗೆ ಸೇರ್ಪಡೆಗೊಂಡಿರುವುದರಿಂದ, 2029ರ ವಿಧಾನಸಭಾ ಚುನಾವಣೆಯಲ್ಲಿ ಸಚಿನ್ ಅಹಿರ್ ಮತ್ತು ಆದಿತ್ಯ ಠಾಕ್ರೆ ನಡುವಿನ ಪಂದ್ಯ ನಡೆಯುವ ಸಾಧ್ಯತೆಯಿದೆ. ಸಚಿನ್ ಅಹಿರ್ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಸಮಯದಲ್ಲಿ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರನ್ನು ಸಚಿನ್ ಅಹಿರ್ ಅವರಿಗೆ ವರ್ಲಿಯಲ್ಲಿ ವಿಧಾನಸಭಾ ಟಿಕೆಟ್ ನೀಡಲಾಗುತ್ತದೆಯೇ ಎಂದು ಕೇಳಲಾಯಿತು. ಇದರ ಕುರಿತು ಮಾತನಾಡಿದ ಶಿಂದೆ, ವರ್ಲಿ ವಿಧಾನಸಭಾ ಕ್ಷೇತ್ರ ಈಗ ಬೇರೆಯವರ ಅಧೀನದಲ್ಲಿದೆ. ಈಗ ಅಹಿರ್ ಎಂಎಲ್‌ಸಿ ಆಗಿದ್ದಾರೆ. ನಾವು ಯಾರನ್ನೂ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುವುದಿಲ್ಲ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ. ಸಮಯ ಬಂದಾಗ ನಾವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದರು. ಏಕನಾಥ್ ಶಿಂದೆ ನೀಡಿದ ಜವಾಬ್ದಾರಿಯನ್ನು ಪೂರೈಸುವುದಾಗಿ ಸಚಿನ್ ಅಹಿರ್ ಹೇಳಿದ್ದಾರೆ. ಆದ್ದರಿಂದ, ಮುಂಬರುವ ಸಮಯದಲ್ಲಿ ಸಚಿನ್ ಅಹಿರ್ ಮತ್ತು ಆದಿತ್ಯ ಠಾಕ್ರೆ ನಡುವೆ ಪಂದ್ಯ ನಡೆಯುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಸಚಿನ್ ಅಹಿರ್ ಮೂಲತಃ ಕಾರ್ಮಿಕ ವಲಯದಿಂದ ಬಂದವರು. ಅರುಣ್ ಗಾವ್ಲಿ ಅವರ ಸಹೋದರ ಕೂಡ ಅವರ ಗುರುತುಗಳಲ್ಲಿ ಒಬ್ಬರು. ಅವರು ಕಾರ್ಮಿಕ ವಲಯದಲ್ಲಿ ಕೆಲಸ ಮಾಡುವಾಗ ರಾಜಕೀಯ ಪ್ರವೇಶಿಸಿದರು. ಅವರು ಶರದ್ ಪವಾರ್ ಅವರ ಪಕ್ಷದಿಂದ ಶಾಸಕ ಮತ್ತು ಸಚಿವರಾದರು. ಅವರು ಎನ್‌ಸಿಪಿಯ ಮುಂಬಯಿ ನಗರ ಅಧ್ಯಕ್ಷ ಹುದ್ದೆಯನ್ನು ಕೂಡ ಹೊಂದಿದ್ದರು.

ಸಚಿನ್ ಅಹಿರ್ 2000 ರಲ್ಲಿ ಸಂಗೀತಾ ಅವರನ್ನು ವಿವಾಹವಾದಾಗ ರಾಜಕೀಯ ಮತ್ತು ಕಾರ್ಮಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಸಚಿನ್ ಅಹಿರ್ ಅವರ ಪತ್ನಿ ಸಂಗೀತಾ ಅಹಿರ್ ಚಲನಚಿತ್ರೋದ್ಯಮದಲ್ಲಿ ಸಕ್ರಿಯರಾಗಿದ್ದರು. ಅವರು ಇನ್ನೂ ಚಲನಚಿತ್ರೋದ್ಯಮದಲ್ಲಿ ಸಕ್ರಿಯರಾಗಿದ್ದಾರೆ. ಸಚಿನ್ ಅಹಿರ್ ಮತ್ತು ಸಂಗೀತಾ ಅಹಿರ್ ಸಂಕಲ್ಪ ಪ್ರತಿಷ್ಠಾನವನ್ನು ಸ್ಥಾಪಿಸಿದರು. ಈ ಮೂಲಕ, ದಂಪತಿಗಳು ಸಾಮಾಜಿಕ ಕೆಲಸವನ್ನೂ ಮಾಡುತ್ತಾರೆ. ದಹಿ ಹಂಡಿ ಹಬ್ಬದ ಕಾರಣ ದಿಂದಾಗಿ ಜನರು ಸಂಕಲ್ಪ ಪ್ರತಿಷ್ಠಾನಿಯನ್ನು ನೆನಪಿಸಿಕೊಳ್ಳುತ್ತಾರೆ. ವರ್ಲಿಯ ಜಂಬೋರಿ ಮೈದಾನದಲ್ಲಿ ದಹಿ ಹಂಡಿ ಹಬ್ಬವನ್ನು ಬಹಳ ವೈಭವದಿಂದ ಆಚರಿಸಲಾಗುತ್ತಿತ್ತು. ಪ್ರತಿ ವರ್ಷ, ಸಲ್ಮಾನ್ ಖಾನ್ ಈ ದಹಿ ಹಂಡಿ ಉತ್ಸವದಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಿದ್ದರು.

ಅಯೋಧ್ಯೆ ರಾಮಮಂದಿರದ ದೇಣಿಗೆ ದುರುಪಯೋಗ: ಪ್ರಧಾನಿ ಮೋದಿ ಮೌನಕ್ಕೆ ರಾಜ್‌ಠಾಕ್ರೆ ವಾಗ್ದಾಳಿ

ಮುಂಬಯಿ,ಜೂ.30- ಅಯೋಧ್ಯೆಯ ರಾಮಮಂದಿರದ ಹುಂಡಿಗೆ ಭಕ್ತರು ಸಮರ್ಪಿಸುತ್ತಿರುವ ಕೋಟ್ಯಂತರ ರೂಪಾಯಿ ದೇಣಿಗೆ ಹಾಗೂ ಚಿನ್ನಾಭರಣಗಳ ಲೆಕ್ಕಾಚಾರದಲ್ಲಿ ಭಾರೀ ಅವ್ಯವಹಾರ ನಡೆದಿದ್ದು, ಹಣ ದುರುಪಯೋಗವಾಗಿರುವ ಸಾಧ್ಯತೆಗಳು ಸ್ಪಷ್ಟವಾಗಿವೆ ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆ (ಮನಸೇ) ಮುಖ್ಯಸ್ಥ ರಾಜ್‌ಠಾಕ್ರೆ ಗಂಭೀರ ಆರೋಪ ಮಾಡಿದ್ದಾರೆ.



ಈ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳವು (ಎಸ್‌ಐಟಿ) ತನ್ನ ಪ್ರಾಥಮಿಕ ವರದಿಯಲ್ಲಿ ಹಗರಣವನ್ನು ದೃಢಪಡಿಸಿದ್ದು, ಕೆಲವು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಆದರೂ ಈ ಸೂಕ್ಷ್ಮ ವಿಷಯದ ಕುರಿತು ದೇಶದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಸಚಿವರು ಮೌನಕ್ಕೆ ಶರಣಾಗಿರುವುದು ತೀವ್ರ ಆಶ್ಚರ್ಯ ಮೂಡಿಸಿದೆ ಎಂದು ಅವರು ಕಿಡಿಕಾರಿದ್ದಾರೆ.

ಶ್ರೀರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನಾಯಕರಿಗೆ ಭಕ್ತರ ನಿಧಿಯ ಲೂಟಿಯ ಬಗ್ಗೆ ಯಾವುದೇ ಕಾಳಜಿ ಇಲ್ಲದಂತಾಗಿದೆ. ಅಯೋಧ್ಯೆ ಲೋಕಸಭಾ ಕ್ಷೇತ್ರದಲ್ಲಿ 2024ರಲ್ಲಿ ಬಿಜೆಪಿ ಸೋತಿದ್ದಕ್ಕಾಗಿಯೇ ರಾಮನನ್ನು ಮತ್ತೆ ವನವಾಸಕ್ಕೆ ತಳ್ಳಲಾಗುತ್ತಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ರಾಮಮಂದಿರ ಚಳವಳಿಯು ಕೇವಲ ಒಂದು ಪಕ್ಷಕ್ಕೆ ಸೀಮಿತವಾಗಿರಲಿಲ್ಲ, ಇದರಲ್ಲಿ ಶಿವಸೈನಿಕರು ಸೇರಿದಂತೆ ದೇಶದ ಕೋಟ್ಯಂತರ ಹಿಂದೂಗಳ ಬೆವರು, ಶ್ರದ್ಧೆ ಮತ್ತು ಕರಸೇವಕರ ಬಲಿದಾನವಿದೆ. ಪ್ರಾಣಪ್ರತಿಷ್ಠಾಪನೆಯ ಸಂದರ್ಭದಲ್ಲಿ ಗರ್ಭಗುಡಿಯಲ್ಲಿ ಪ್ರಧಾನಿಯೊಬ್ಬರೇ ಪೂಜೆ ಸಲ್ಲಿಸಿ ಶ್ರೇಯಸ್ಸು ಪಡೆದಿದ್ದರು. ಹಾಗಾದರೆ ಈಗ ಮಂದಿರದ ಹುಂಡಿ ಲೂಟಿಯಾಗುತ್ತಿರುವಾಗ ಭಕ್ತರಿಗೆ ಉತ್ತರಿಸುವ ಮತ್ತು ಆಶ್ವಾಸನೆ ನೀಡುವ ಜವಾಬ್ದಾರಿ ಅವರದ್ದಲ್ಲವೇ ಎಂದು ಠಾಕ್ರೆ ಖಾರವಾಗಿ ಪ್ರಶ್ನಿಸಿದ್ದಾರೆ.

ಈ ಹಗರಣದ ಹಿಂದೆ ಉತ್ತರಪ್ರದೇಶದ ರಾಜಕೀಯ ಮೇಲಾಟಗಳು ಅಡಗಿದ್ದು, ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಮೂಲೆಗುಂಪು ಮಾಡಲು ಸ್ವಪಕ್ಷದ ವಿರೋಧಿಗಳೇ ಈ ವಿಷಯವನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ. ದೇಶದ ಗೃಹ ಸಚಿವರು ವಿರೋಧ ಪಕ್ಷಗಳನ್ನು ಒಡೆಯುವ ಮತ್ತು ಪ್ರಧಾನಿ ಕುರ್ಚಿಯ ಕನಸು ಕಾಣುವಲ್ಲಿ ನಿರತರಾಗಿದ್ದು, ರಾಮನ ಗೃಹದಲ್ಲಿ ಏನಾಗುತ್ತಿದೆ ಎಂಬ ಕನಿಷ್ಠ ಕಾಳಜಿಯೂ ಅವರಿಗಿಲ್ಲ ಎಂದು ಠಾಕ್ರೆ ಲೇವಡಿ ಮಾಡಿದ್ದಾರೆ. ಭಕ್ತರ ನಂಬಿಕೆಗೆ ದ್ರೋಹ ಬಗೆದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಹಾಗೂ ಪ್ರಧಾನಿ ಕೇವಲ ಸ್ವಚ್ಛ ಉದ್ದೇಶ ಹೊಂದಿದ್ದರೆ ಸಾಲದು, ತಕ್ಷಣವೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಲೋಕಲ್ ರೈಲಿನಲ್ಲಿ ಕೊಲೆ; ಅಪರಾಧಕ್ಕೆ ಬಳಸಿದ ಚಾಕು ಹೋಟೆಲ್ ಸಿಬ್ಬಂದಿ ಮೂಲಕ ಪತ್ತೆ

ಮುಂಬಯಿ,ಜೂ.30 - ಲೋಕಲ್ ರೈಲಿನಲ್ಲಿ ಕೊಲೆಗೆ ಬಳಸಲಾದ ಆಯುಧವನ್ನು ತನ್ನ ಸಿಬ್ಬಂದಿ ಗೊತ್ತಿಲ್ಲದೆ ಕಂಡುಕೊಂಡಿದ್ದಾಗಿ ಹೋಟೆಲ್ ಮ್ಯಾನೇಜರ್‌ವೊಬ್ಬರು ತನಿಖಾಧಿಕಾರಿಗಳಿಗೆ ಮಾಹಿತಿ ನೀಡಿದ ಬಳಿಕ ವಿರಾರ್ ಯುವಕ ಮಾಯಾಂಕ್ ಲೋಹರ್‌ನ ಇರಿತದ ಘಟನೆಯ ವೈರಲ್ ಆದ ವೀಡಿಯೊ ಸಹಾಯದಿಂದ ಸರಕಾರಿ ರೈಲ್ವೆ ಪೊಲೀಸರು ಅಪರಾಧದಲ್ಲಿ ಬಳಸಲಾಗಿದೆ ಎನ್ನಲಾದ ಚಾಕುವನ್ನು ವಶಪಡಿಸಿಕೊಳ್ಳಲು ಯಶಸ್ವಿಯಾದರು.

ಸಂಬಂಧಿತ ಬೆಳವಣಿಗೆಯೊಂದರಲ್ಲಿ, ಮಂಗಳವಾರ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಆರೋಪಿ ರೋಷನ್ ಸುವರ್ಣನ ಪೊಲೀಸ್ ಕಸ್ಟಡಿಯನ್ನು ಜು.6 ರವರೆಗೆ ವಿಸ್ತರಿಸಿದ್ದು, ಪೊಲೀಸರು ಹೆಚ್ಚಿನ ತನಿಖೆಗಾಗಿ ಆತನನ್ನು ಇನ್ನೂ 7 ದಿನಗಳವರೆಗೆ ಕಸ್ಟಡಿಗಾಗಿ ಕೋರಿದರು.

ಕಳೆದವಾರ ಅಂಧೇರಿ ಮತ್ತು ಬೊರಿವಿಲಿ ನಿಲ್ದಾಣಗಳ ನಡುವೆ ಲೋಕಲ್ ರೈಲಿನ ಪ್ರಥಮ ದರ್ಜೆ ಬೋಗಿಯಲ್ಲಿ ಬಾಗಿಲು ಮುಚ್ಚುವ ಬಗ್ಗೆ ನಡೆದ ವಾಗ್ವಾದದ ವೇಳೆ 22 ವರ್ಷದ ಸಹ-ಪ್ರಯಾಣಿಕ ಮಾಯಾಂಕ್ ಲೋಹರ್‌ನನ್ನು ಇರಿದು ಕೊಲೆ ಮಾಡಿದ ಆರೋಪದ ಮೇಲೆ ಸುವರ್ಣನನ್ನು ಬಂಧಿಸಲಾಯಿತು.

ಪೊಲೀಸರ ಪ್ರಕಾರ, ಹಿಂದಿನ ಕಸ್ಟಡಿ ವಿಚಾರಣೆಯ ಸಮಯದಲ್ಲಿ ಸುವರ್ಣ ಕಳೆದ ನಾಲ್ಕೈದು ತಿಂಗಳಿನಿಂದ ತನ್ನ ಚೀಲದಲ್ಲಿ ಚಾಕುವನ್ನು ಇಟ್ಟುಕೊಂಡಿದ್ದಾಗಿ ಒಪ್ಪಿಕೊಂಡಿದ್ದಾನೆ. ಸುಮಾರು 7 ತಿಂಗಳ ಹಿಂದೆ ಸ್ನೇಹಿತ ಕೆಲಸ ಮಾಡುತ್ತಿದ್ದ ಅಮೆಜಾನ್ ಗೋದಾಮಿನಿಂದ ಹರಿತವಾದ, ಮೆರೂನ್ ಹಿಡಿಕೆಯ ಚಾಕುವನ್ನು ತೆಗೆದುಕೊಂಡಿದ್ದಾಗಿ ಆತ ಹೇಳಿಕೊಂಡಿದ್ದಾನೆ. ಬೊರಿವಲಿ ರೈಲು ನಿಲ್ದಾಣದಲ್ಲಿ ಇಳಿದ ಬಳಿಕ ಚಾಕುವನ್ನು ಎಸೆದಿದ್ದಾಗಿ ಸುವರ್ಣ ತನಿಖಾಧಿಕಾರಿಗಳಿಗೆ ತಿಳಿಸಿದ್ದ.ಆದಾಗ್ಯೂ, ಆರೋಪಿ ಸೂಚಿಸಿದ ಮಾರ್ಗವನ್ನು ಹುಡುಕಿದರೂ, ಅಧಿಕಾರಿಗಳಿಗೆ ಆರಂಭದಲ್ಲಿ ಆಯುಧವನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ.

ಘಟನೆಯ ವೀಡಿಯೊ ವೈರಲ್ ಆದ ಬಳಿಕ ತನಿಖೆಯು ಮಹತ್ವದ ತಿರುವು ಪಡೆದುಕೊಂಡಿತು. ಬೊರಿವಲಿಯ ರೆಸ್ಟೋರೆಂಟ್ ವ್ಯವಸ್ಥಾಪಕರೊಬ್ಬರು ವಿಡಿಯೋ ಕ್ಲಿಪ್ ನೋಡಿದ ಬಳಿಕ ಪೊಲೀಸರನ್ನು ಸಂಪರ್ಕಿಸಿ, ತಮ್ಮ ಸಿಬ್ಬಂದಿಯೊಬ್ಬರು ಶಾಪಿಂಗ್‌ಗೆ ಹೋಗುವಾಗ ಬೊರಿವಲಿ ನಿಲ್ದಾಣದ 2 ಮತ್ತು 3 ನೇ ಪ್ಲಾಟ್‌ಫಾರ್ಮ್ ಬಳಿಯ ಗಲ್ಲಿಯಲ್ಲಿ ಚಾಕುವನ್ನು ಕಂಡುಕೊಂಡಿದ್ದಾಗಿ ತಿಳಿಸಿದರು.

ಅಪರಾಧಕ್ಕೂ ಇದಕ್ಕೂ ಇರುವ ಸಂಬಂಧದ ಬಗ್ಗೆ ತಿಳಿಯದೆ ತನ್ನ ಸಿಬ್ಬಂದಿ ಸದಸ್ಯ ಆ ಚಾಕುವನ್ನು ರೆಸ್ಟೋರೆಂಟ್‌ನ ಸಿಬ್ಬಂದಿ ಕೋಣೆಗೆ ತೆಗೆದುಕೊಂಡು ಹೋಗಿ ರಟ್ಟಿನ ಪೆಟ್ಟಿಗೆಯಲ್ಲಿ ಇರಿಸಿದ್ದ. ಬಳಿಕ ಪೊಲೀಸರು ಆ ಚಾಕುವನ್ನು ವಶಪಡಿಸಿಕೊಂಡರು ಮತ್ತು ಅದು ಇರಿತಕ್ಕೆ ಬಳಸಲಾಗಿದೆ ಎನ್ನಲಾದ ಚಾಕು ಆಗಿರುವುದಾಗಿ ಅವರು ಹೇಳಿದರು.

ಆರೋಪಿಯು ಹಲವಾರು ತಿಂಗಳುಗಳಿಂದ ಚಾಕುವನ್ನು ಏಕೆ ಹೊಂದಿದ್ದಾನೆ ಮತ್ತು ಹಿಂದಿನ ಯಾವುದೇ ಅಪರಾಧಗಳಲ್ಲಿ ಅದನ್ನು ಬಳಸಿದ್ದಾನೆಯೇ ಎಂಬುದನ್ನು ನಿರ್ಧರಿಸಲು ಹೆಚ್ಚಿನ ಕಸ್ಟಡಿ ವಿಚಾರಣೆ ಅಗತ್ಯವಿದೆ ಎಂದು ನ್ಯಾಯಾಲಯಕ್ಕೆ ತಿಳಿಸಲಾಯಿತು. ಅಪರಾಧದ ಹಿಂದಿನ ಉದ್ದೇಶವನ್ನು ತನಿಖೆ ಮಾಡಬೇಕಾಗಿದೆ ಎಂದು ಪೊಲೀಸರು ವಿವರಿಸಿದರು. ಕಸ್ಟಡಿ ವಿಸ್ತರಣೆಯ ಬೇಡಿಕೆಯನ್ನು ವಿರೋಧಿಸಿದ ಸುವರ್ಣ ಪರ ವಕೀಲ ಜಯವಂತ್ ಪಾಟೀಲ್, ಪೊಲೀಸರು ಹಿಂದಿನ ರಿಮಾಂಡ್ ಕೋರುವಾಗ ಅದೇ ಕಾರಣಗಳನ್ನು ಉಲ್ಲೇಖಿಸಿದ್ದಾರೆ ಮತ್ತು ಅಪರಾಧದ ಹಿಂದಿನ ಉದ್ದೇಶವನ್ನು ಖಚಿತಪಡಿಸಿಕೊಳ್ಳಲು ಈಗಾಗಲೇ ಸಾಕಷ್ಟು ಸಮಯವನ್ನು ನೀಡಲಾಗಿದೆ ಎಂದು ವಾದಿಸಿದರು. ಎರಡೂ ಕಡೆಯವರ ವಾದವನ್ನು ಆಲಿಸಿದ ಬಳಿಕ ನ್ಯಾಯಾಲಯವು ಸುವರ್ಣನ ಪೊಲೀಸ್ ಕಸ್ಟಡಿಯನ್ನು ಜು.6 ರವರೆಗೆ ವಿಸ್ತರಿಸಿತು.

ಮುಂಬಯಿ ಪೊಲೀಸ್ ಕಾಯ್ದೆಗೆ ತಿದ್ದುಪಡಿ : ಸಿಎಂ ಫಡ್ನವೀಸ್

ಮೊದಲ ಪುಟದಿಂದ

ಮತ್ತೆ ಮತ್ತೆ ನಿಯಮಗಳನ್ನು ಉಲ್ಲಂಘನೆ ಮಾಡುವ ಡ್ಯಾನ್ಸ್ ಬಾರ್‌ಗಳ ಪರವಾನಗಿಗಳನ್ನು ಖಾಯಂ ಆಗಿ ರದ್ದು ಮಾಡುವ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಪ್ರಸ್ತಾವ ಕುರಿತಂತೆ ಸರಕಾರ ಕಾನೂನು ಮತ್ತು ನ್ಯಾಯಾಂಗ ಇಲಾಖೆ ಜತೆ ಸಲಹೆ ಪಡೆಯುತ್ತಿದೆ ಎಂದೂ ಮುಖ್ಯಮಂತ್ರಿ ಹೇಳಿದರು. ಶಾಸನ ಸಭೆಯ ಸದಸ್ಯರು ವ್ಯಕ್ತಪಡಿಸಿರುವ ಆತಂಕ ಬಗ್ಗೆ ಸರಕಾರ ಅರ್ಥ ಮಾಡಿಕೊಂಡಿದೆ. ಆದರೆ ಸಾಂವಿಧಾನಿಕ ಸ್ವಾತಂತ್ರ್ಯಗಳ ಮಿತಿಯಲ್ಲೇ ಕಾನೂನುಗಳ ರಚನೆ ಆಗಬೇಕು ಎಂದು ಫಡ್ನವೀಸ್ ನುಡಿದರು.

ಸಾರ್ವಜನಿಕ ಭಾವನೆ ಮತ್ತು ಕಾನೂನಿನ ನಡುವೆ ವ್ಯತ್ಯಾಸ ಇದೆ. ಸಾಂವಿಧಾನಿಕ ಸ್ವಾತಂತ್ರ್ಯಗಳ ದುರುಪಯೋಗ ಆಗದಂತೆ ನಾವು ನೋಡಿಕೊಳ್ಳಬೇಕಾಗಿದೆ. ಆದರೆ ಇಲ್ಲಿ ಕಾನೂನಿನ ಸೂಕ್ಷ್ಮ ಗೆರೆಯೊಂದು ಇದೆ ಎಂದು ಅವರು ಅಭಿಪ್ರಾಯಪಟ್ಟರು.

ಅಂತಹ ಪ್ರಕರಣಗಳಲ್ಲಿ ತಪ್ಪು ಮಾಡುತ್ತಿದ್ದಾರೆ ಎಂದು ಕಂಡು ಬಂದ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಆದರೆ ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರ ವಿವರ ನೀಡಿಲ್ಲ. ಥಾಣೆ ಜಿಲ್ಲೆಯ ಭಿವಂಡಿಯ ಹಲವು ಭಾಗಗಳಲ್ಲಿ ಡ್ಯಾನ್ಸ್ ಬಾರ್‌ಗಳ ಸಂಖ್ಯೆ ಹೆಚ್ಚಾಗಿದೆ ಎಂದು ಚರ್ಚೆ ವೇಳೆ ಹಲವು ಎಂಎಲ್‌ಎಗಳು ಹೇಳಿದರು. ಅಂತಹ ಸ್ಥಳಗಳು ಅಪರಾಧಗಳ ಅಡ್ಡೆಗಳಾಗುತ್ತಿವೆ ಎಂದು ಆಪಾದಿಸಿದ ಹಲವರು, ಸರಕಾರವು ಅಂತಹ ಸ್ಥಳಗಳ ವಿರುದ್ಧ ಕಠಿಣ ನಿಯಮಕ್ಕೆ ಒತ್ತಾಯಿಸಿದರು.

ಜನರ ಧಾರ್ಮಿಕ ನಂಬಿಕೆ ಮೇಲಿನ ನೇರ ದಾಳಿ : ಕಾಂಗ್ರೆಸ್

ಮೊದಲ ಪುಟದಿಂದ

ಬಂಧಿಸಲ್ಪಟ್ಟಿರುವ ಎಂಟು ಆರೋಪಿಗಳ ಪರವಾಗಿ ತನ್ನ ಸದಸ್ಯರಲ್ಲಿ ಯಾರೂ ವಾದಿಸುವುದಿಲ್ಲ ಎಂದು ಪ್ರಕಟಿಸಿದ್ದು ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಕೋರ್ಟಿಗೆ ಮನವಿ ಸಲ್ಲಿಸುವುದಾಗಿ ಹೇಳಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಿರುವುದು ತನ್ನ ಮಹತ್ತರ ಸಾಧನೆಯೆಂದು ಹೇಳಿಕೊಂಡು ಬಂದಿರುವ ಬಿಜೆಪಿ ವಿರುದ್ಧ ಪಕ್ಷಗಳು ರಾಮ ಮಂದಿರದ ದೇಣಿಗೆ ಲೂಟಿ ಪ್ರಕರಣವನ್ನು ಬಿಜೆಪಿ ವಿರುದ್ಧ ವಾಗ್ದಾಳಿಗೆ ಅಸ್ತ್ರವಾಗಿ ಮಾಡಿಕೊಂಡಿವೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ''ನಿಜವಾದ ಸನಾತನಿಗಳು'' ಬಿಜೆಪಿಗೆ ಮತ ಹಾಕಬಾರದು ಅಥವಾ ಬಿಜೆಪಿ ಟಿಕೆಟ್‌ನಲ್ಲಿ ಚುನಾವಣೆಗೆ ನಿಲ್ಲಲು ಇಷ್ಟಪಡಬಾರದು ಎಂದು ಆಗ್ರಹಿಸಿದ್ದು, ಬಿಜೆಪಿ ಭಗವಾನ್ ರಾಮನಿಗೆ ಮೋಸ ಮಾಡಿದೆ ಎಂದು ಆಪಾದಿಸಿದ್ದಾರೆ.

ಮತ್ತೊಂದೆಡೆ ಆಡಳಿತ ಬಿಜೆಪಿ, ರಾಮ ಮಂದಿರದ ದೇಣಿಗೆ ಲೂಟಿಕೋರರ ಪರವಾಗಿ ವಕೀಲರುಗಳು ವಾದಿಸಲು ನಿರಾಕರಿಸಿರುವುದು ''ಹಿಂದೂ ಸಮಾಜದ ಬಲಿಷ್ಠ ಸಂದೇಶ'' ಎಂದು ಹೇಳಿದ್ದು, ಅಯೋಧ್ಯೆ ಲೂಟಿ ಮಾಡಿದ ಆರೋಪಿಗಳ ವಿರುದ್ಧ ಕಾನೂನಿನ ಪೂರ್ಣಶಕ್ತಿ ನಿಂತಿದೆ ಮಾತ್ರವಲ್ಲ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಹೇಳಿದೆ.

ಎಸ್ಪಿ, ಕಾಂಗ್ರೆಸಿಗೆ ಯೋಗಿ ಆದಿತ್ಯನಾಥ್ ಟೀಕೆ

ಮೊದಲ ಪುಟದಿಂದ

ಆದರೆ ಈಗ ಅದು ಭಗವಾನ್ ರಾಮ ಎಲ್ಲರಿಗೂ ಸೇರಿದವ ಎಂದು ಹೇಳುತ್ತಿದೆ. ಈಗ ಅವರೆಲ್ಲರೂ ಅಯೋಧ್ಯೆಗೆ ಭೇಟಿ ನೀಡಲು ತವಕಿಸುತ್ತಿದ್ದಾರೆ ಎಂದು ಯೋಗಿ ಆಪಾದಿಸಿದರು.

ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಅವರ ನೇತೃತ್ವದಲ್ಲಿ ಮಂಗಳವಾರ ಕಾಂಗ್ರೆಸ್ ನಿಯೋಗವೊಂದು ಅಯೋಧ್ಯೆಗೆ ಭೇಟಿ ನೀಡಲು ಸಿದ್ಧತೆ ನಡೆಸಿತ್ತು. ಆದರೆ ರಾಯ್ ಅವರನ್ನು ಪೊಲೀಸರು ಅವರಿದ್ದ ಹೊಟೇಲಿನಿಂದ ಬಂಧಿಸಿ ಅಯೋಧ್ಯೆಯಿಂದ ಹೊರಗೆ ಕರೆದೊಯ್ದಿದ್ದಾರೆ. ರಾಯ್ ಅವರನ್ನು ಬಂಧಿಸಲಾಗಿದೆಯೇ ಎಂದು ಪೊಲೀಸರು ಯಾವುದೇ ಸ್ಪಷ್ಟನೆ ನೀಡಿಲ್ಲ.

ರಾಂಪುರದಲ್ಲಿ ಯೋಗಿ ಅವರು ರಾಮಾಯಣದ ಬಗ್ಗೆ ಉಲ್ಲೇಖ ಮಾಡುತ್ತಾ, ಎಲ್ಲ ಸಂಕಷ್ಟಗಳಿಂದಲೂ ಭಗವಾನ್ ಹನುಮಂತ ಭಗವಾನ್ ರಾಮನ ಭಕ್ತಿಯೇ ಶಕ್ತಿ ತುಂಬಿತ್ತು. ಅದೇ ರೀತಿಯಲ್ಲಿ ರಾಮ ಮಂದಿರದ ಪ್ರಸಕ್ತ ಸಮಸ್ಯೆ ಕೂಡಾ ನಿವಾರಣೆಯಾಗಲಿದೆ ಎಂದು ನುಡಿದರು.

ಯಾವುದೇ ರೀತಿಯಲ್ಲೂ ಆತಂಕ ಬೇಡ. ಅಯೋಧ್ಯೆಯ ಅಭಿವೃದ್ಧಿ ಕಂಡು ವಿರೋಧ ಪಕ್ಷಗಳಿಗೆ ಸುಂದರ ನಗರದ ಬಗ್ಗೆ ಮತ್ಸರ ಉಂಟಾಗಿದೆ. ಅಭಿವೃದ್ಧಿಯನ್ನು ಹತ್ತಿಕ್ಕಲು ಅವರಿಗೆ ಸಾಧ್ಯವಾಗಿಲ್ಲ. ಇದರಿಂದಾಗಿಯೇ ಈಗ ರಾಮನ ಹೆಸರನ್ನು ಎತ್ತಿಕೊಂಡು ನಮ್ಮನ್ನು ಟೀಕಿಸುತ್ತಿದ್ದಾರೆ ಎಂದು ಯೋಗಿ ಹೇಳಿದರು.

ರಾಜಸ್ಥಾನ : ಪ್ರತ್ಯೇಕ ಘಟನೆಯಲ್ಲಿ ಎರಡು ಕುಟುಂಬದ 7 ಜನರ ಸಾವು

ಜೈಪುರ, ಜೂ.30- ರಾಜಸ್ಥಾನದಲ್ಲಿ ಎರಡು ಪ್ರತ್ಯೇಕ ಘಟನೆಗಳಲ್ಲಿ ಎರಡು ಕುಟುಂಬಗಳ 7 ಜನರ ಸಾವು ಸಂಭವಿಸಿದ್ದು, ಒಂದು ಘಟನೆಯಲ್ಲಿ ಪತ್ನಿ ಮತ್ತು ಮಕ್ಕಳಿಬ್ಬರನ್ನು ಹತ್ಯೆಗೈದ ಪತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡರೆ, ಮತ್ತೊಂದು ಘಟನೆಯಲ್ಲಿ ಮಹಿಳೆಯೊಬ್ಬರು ಆಕೆಯ ಅಪ್ರಾಪ್ತ ಹೆಣ್ಮು ಮಕ್ಕಳ ಜತೆ ತೋಟದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ರಾಜಸ್ಥಾನದ ಫಲೋಡಿ ಜಿಲ್ಲೆಯ ದೇಚು ಪ್ರದೇಶದ ಮನೆಯೊಂದರಲ್ಲಿ ದಂಪತಿ ಮತ್ತು ಅವರ ಇಬ್ಬರು ಮಕ್ಕಳು ಸಾವನ್ನಪ್ಪಿದ್ದು, ತನಿಖೆಯಲ್ಲಿ ಇದು ಹತ್ಯೆ ಮತ್ತು ಆತ್ಮಹತ್ಯೆ ಎಂದು ಬಯಲಿಗೆ ಬಂದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗಂಡ ನೇಣು ಹಾಕಿಕೊಂಡಿದ್ದರೆ, ಆತನ ಪತ್ನಿ ಮತ್ತು ಇಬ್ಬರು ಮಕ್ಕಳ ಮೃತದೇಹಗಳು ಮಂಚದಲ್ಲಿ ಬಿದ್ದಿರುವುದು ಪತ್ತೆಯಾಗಿದೆ. ಮೇಲ್ನೋಟಕ್ಕೆ ಗಂಡ, ಪತ್ನಿ ಮತ್ತು ಮಕ್ಕಳನ್ನು ಕತ್ತುಹಿಸುಕಿ ಕೊಲೆಗೈದು ಬಳಿಕ ಗಂಡ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ದೃಢಪಟ್ಟಿರುವುದಾಗಿ ಎಸ್ಪಿ ಸತ್ನಾಮ್ ಸಿಂಗ್ ತಿಳಿಸಿದ್ದಾರೆ.

ಮೃತದೇಹಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದ ತಂಡ ಪರೀಕ್ಷೆ ನಡೆಸಿದ್ದು, ಪುರಾವೆಗಳನ್ನು ಸಂಗ್ರಹಿಸಿದೆ ಎಂದು ಅವರು ಹೇಳಿದ್ದಾರೆ.

ಮೃತರನ್ನು ಗೇನಾರಾಂ (35), ಆತನ ಪತ್ನಿ ಪುಷ್ಪಾ (35), ಮಗಳು ಖುಷ್ಬು (13) ಮತ್ತು ಮಗ ಕಿಶನ್ (10) ಎಂದು ಗುರುತಿಸಲಾಗಿದೆ. ಹತ್ಯೆ ಮತ್ತು ಆತ್ಮಹತ್ಯೆಗೆ ಕಾರಣ ತನಿಖೆಯಿಂದ ತಿಳಿಯಬೇಕಿದೆ ಎಂದು ಎಸ್ಪಿ ತಿಳಿಸಿದ್ದಾರೆ.

ರಾಜಸ್ಥಾನದಲ್ಲಿ ನಡೆದಿರುವ ಮತ್ತೊಂದು ಘಟನೆ ರಾಜಧಾನಿ ಜೈಪುರ ನಗರದ ಬಳಿಯ ಗೋವಿಂದಗಢ ಪ್ರದೇಶದಲ್ಲಿ ಮಹಿಳೆಯೊಬ್ಬರು ಆಕೆಯ ಅಪ್ರಾಪ್ತ ಹೆಣ್ಣು ಮಕ್ಕಳ ಜತೆ ತೋಟದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಆರು ವರ್ಷಗಳ ಹಿಂದೆ ವಿವಾಹವಾಗಿದ್ದ ಪೂಜಾ (25), ಇಂದು ಮುಂಜಾನೆ 4 ಗಂಟೆ ವೇಳೆಗೆ ತನ್ನ ಅಪ್ರಾಪ್ತ ಹೆಣ್ಣು ಮಕ್ಕಳ ಜತೆ ತೋಟದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಆರು ವರ್ಷಗಳ ಹಿಂದೆ ವಿವಾಹವಾಗಿದ್ದ ಪೂಜಾ (25) ಇಂದು ಮುಂಜಾನೆ 4 ಗಂಟೆ ವೇಳೆಗೆ ತನ್ನ ಅಪ್ರಾಪ್ತ ಹೆಣ್ಣು ಮಕ್ಕಳಾದ ಹರ್ಷಿತಾ ಮತ್ತು ಚಿತ್ರಾಂಶಿ ಜತೆಯಲ್ಲಿ ಮನೆಯಿಂದ ಹೊರ ಹೋಗಿದ್ದು ಮನೆಯಿಂದ 2 ಕಿ.ಮೀ.ದೂರದ ತೋಟದ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿ ಬಲಿ, 5 ಮಕ್ಕಳು ಗಾಯ

ಮೊದಲ ಪುಟದಿಂದ

ಚೆಂಬೂರಿನಲ್ಲಿ ಶಾಲಾ ಬಸ್‌ವೊಂದರ ಮೇಲೆ ಬೃಹತ್ ಗಾತ್ರದ ಮರವೊಂದು ಉರುಳಿಬಿದ್ದು ಒಬ್ಬ ವಿದ್ಯಾರ್ಥಿ ಮೃತಪಟ್ಟಿದ್ದು, ಇತರ 11 ವಿದ್ಯಾರ್ಥಿಗಳು ಗಾಯಗೊಂಡಿರುವುದಾಗಿ ಶಾಲಾ ಬಸ್ ಮಾಲಿಕರುಗಳ ಸಂಘ (ಎಸ್‌ಬಿಓಎ) ಹೇಳಿದೆ.

ಇದೊಂದು ಪ್ರಕೃತಿಯ ವಿಕೋಪದ ದುರಂತ ಎಂದು ಬದಿಗೆ ಇಡುವುದಕ್ಕೆ ಸಾಧ್ಯವಿಲ್ಲ. ಇದೊಂದು ಗಂಭೀರ ಘಟನೆಯಾಗಿದೆ. ಸಾರ್ವಜನಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಯು ಸಂಪೂರ್ಣ ನಿರ್ಲಕ್ಷ್ಯ ವಹಿಸಿರುವುದೇ ಈ ದಾರುಣ ಘಟನೆಗೆ ಕಾರಣ. ಇದಕ್ಕೆ ಸಂಬಂಧಿಸಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಎಸ್‌ಬಿಓಎ ಅಧ್ಯಕ್ಷ ಅನಿಲ್ ಗರ್ಗ್ ಹೇಳಿದ್ದಾರೆ.

ಇಂದು ಶಾಲಾ ಬಸ್‌ನ ಮೇಲೆ ಉರುಳಿಬಿದ್ದ ಅಶ್ವತ್ಥ ಮರ ಅಪಾಯಕಾರಿಯಾಗಿದ್ದು, ಅದರ ಗೆಲ್ಲುಗಳನ್ನು ಕತ್ತರಿಸುವಂತೆ ಮಹಾಪಾಲಿಕೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಅದನ್ನು ನಿರ್ಲಕ್ಷಿಸಲಾಗಿದ್ದೇ ಈ ದಾರುಣ ಘಟನೆಗೆ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಶಾಲಾ ಬಸ್‌ನ ಮೇಲೆ ಮರಬಿದ್ದ ದುರ್ಘಟನೆ ಬಗ್ಗೆ ತನಿಖೆಗೆ ಆದೇಶಿಸಿರುವುದಾಗಿ ಇದೇ ವೇಳೆ ಮಹಾನಗರ ಪಾಲಿಕೆ ಮೇಯರ್ ರಿತು ತಾವ್ಡೆ ಹೇಳಿದ್ದಾರೆ.

ಮುಂಬಯಿ ಮಹಾನಗರ ಮತ್ತು ಉಪನಗರಗಳಲ್ಲಿ ಸೋಮವಾರ ರಾತ್ರಿ ಉತ್ತಮ ಮಳೆಯಾಗಿದ್ದು, ಮಂಗಳವಾರವೂ ಹಲವು ಕಡೆಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಬೇರೆಡೆ ಸಾಧಾರಣ ಮಳೆಯಾಗಿದೆ. ಇಡೀ ದಿನ ಮೋಡ ಕವಿದ ವಾತಾವರಣವಿದ್ದು ಇನ್ನು 2 ದಿನಗಳ ಕಾಲ ಮುಂಬಯಿ, ರಾಯಗಢ, ಥಾಣೆ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ. ಬುಧವಾರ ಮುಂಬಯಿಯಲ್ಲಿ ಕೆಲವು ಬಾರಿ ಹೈಟೈಡ್ ಉಂಟಾಗಬಹುದು ಎಂದು ಐಎಂಡಿ ಹೇಳಿದ್ದು, ಬೆಳಿಗ್ಗಿನ ಹೊತ್ತು ಸಮುದ್ರದ ಬದಿಗೆ ಹೋಗದಂತೆ ಜನರಿಗೆ ಎಚ್ಚರಿಕೆ ನೀಡಿದೆ.

'ಮಧೂರು ಕ್ಷೇತ್ರ ಮಹಾತ್ಮೆ' ಸಹಿತ ಅನೇಕ ಪ್ರಸಂಗ ಕಾವ್ಯ ಬರೆದ ಕಾಸರಗೋಡು ಮಧೂರು ವೆಂಕಟಕೃಷ್ಣ ನಿಧನ



ಮಧೂರು, ಜೂ.30- ಗಡಿನಾಡು ಕಾಸರಗೋಡಿನ ಹಿರಿಯ ಪ್ರಸಂಗಕರ್ತ, ಯಕ್ಷಗಾನ ಅರ್ಥಧಾರಿ, ನಿವೃತ್ತ ಸೇಲ್ ಟ್ಯಾಕ್ಸ್ ಅಧಿಕಾರಿ ಮಧೂರು

ವೆಂಕಟಕೃಷ್ಣ (87) ಅವರು ಜೂ.29 ರಂದು ಸೋಮವಾರ ನಿಧನರಾಗಿದ್ದಾರೆ.

ಮೃತರು ಪತ್ನಿ ಸುಮಿತ್ರಾ ಹಾಗೂ ಇಬ್ಬರು ಪುತ್ರರು ಹಾಗೂ ಓರ್ವ ಮಗಳು ಹಾಗೂ ಅಪಾರ ಆಪ್ತ ವಲಯವನ್ನು ಅಗಲಿದ್ದಾರೆ.

ಕಾಸರಗೋಡಿನ ಮಾರಾಟ ತೆರಿಗೆ ಇಲಾಖೆ ಅಧಿಕಾರಿಯಾಗಿ ನಿವೃತ್ತರಾದ ಅವರು ಉಳಿಯ ಧನ್ವಂತರಿ ಯಕ್ಷಗಾನ ಸಂಘದ ನೆರಳಲ್ಲಿ ಅರ್ಥಧಾರಿ, ವೇಷಧಾರಿ, ಕಲಾವಿದರಾಗಿ ಮೆರೆದವರು. ತೆಂಕಣ ಯಕ್ಷಗಾನದ ದಂತಕಥೆ ಕೂಡ್ಲು ನಾರಾಯಣ ಬಲ್ಯಾಯರ ಶಿಷ್ಯನಾಗಿ ಯಕ್ಷಗಾನ ಶಿಕ್ಷಣ ಪಡೆದ ಅವರು ಪ್ರಸಂಗಕರ್ತನಾಗಿ ಮೆರೆದವರು. ಅವರ ಸಾಧನೆ ಮನ್ನಿಸಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಅವರಿಗೆ ರಾಜ್ಯ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಜನಪ್ರಿಯ 'ಮಧೂರು ಕ್ಷೇತ್ರಮಹಾತ್ಮೆ' ಸಹಿತ ವೃಶಾಲಿನಿ ಪರಿಣಯ, ಧನ್ವಂತರಿ ಮಹಾತ್ಮೆ, ಹಲವಾರು ಕ್ಷೇತ್ರ ಮಹಾತ್ಮೆ, ನದಿಯಾಗಿ ಹರಿದ ನಂದಿನಿ, ದುಂಬಿಯಾಗಿ ನೆಗೆದ ಭ್ರಾಮರಿ ಹೀಗೆ ಅನೇಕ ಪ್ರಸಂಗಗಳನ್ನು ರಚಿಸಿದ ಇವರ ಕೃತಿಗಳು ಮೇಳದ ಆಟ, ತಾಳಮದ್ದಳೆ ಕೂಟಗಳಲ್ಲಿ ಜನಪ್ರಿಯವಾಗಿವೆ. ಇವರ ಕಾವ್ಯ ರಚನೆಗಳು ವಿವಿಧ ಭಾಗವತರ ಕಂಠದಲ್ಲಿ ಹಾಡಲ್ಪಟ್ಟು ಜಾಲತಾಣದ ಮೂಲಕ ಸಹಸ್ರಾರು ಕೇಳುಗರನ್ನು ತಲುಪಿದೆ. ಯಕ್ಷಗಾನದಲ್ಲಿ ಮೊದಲು ವಂದಿಸುವ ಮಧೂರು ಕ್ಷೇತ್ರದ ಮುಂಬಾಗಿಲಿನ ಬಳಿ ವಾಸಿಸುವ ಅವರು ಬರೆದ 'ಮಧೂರು ಕ್ಷೇತ್ರ ಮಹಾತ್ಮೆ' ಇತ್ತೀಚಿನ ಮಧೂರು ಬ್ರಹ್ಮಕಲಶದ ವೇಳೆ ಪ್ರದರ್ಶನ ಕಂಡಿತ್ತು. ಆ ವೇದಿಕೆಯಲ್ಲಿ ಅವರನ್ನು ಸನ್ಮಾನಿಸಲಿಗಿತ್ತು. ಶಿವಳ್ಳಿ ಧ್ವನಿ ಪತ್ರಿಕೆಯ. ಮಾಜಿ ಸಂಪಾದಕರೂ ಆಗಿದ್ದ ಅವರ ನಿಧನಕ್ಕೆ ಕಾಸರಗೋಡಿನ ಶಿವಳ್ಳಿ ಮಹಾಸಭಾ ಗಾಢ ಸಂತಾಪ ಪ್ರಕಟಿಸಿದೆ. ತೆಂಕಣ ಯಕ್ಷಗಾನದ ಅನುಭವಿಯಾಗಿದ್ದ ಅವರು ಅರ್ಥಗಾರಿಕೆ ಮೂಲಕ ಗತ ಕಾಲದ ಪ್ರಸಿದ್ಧರ ಹಾಡುಗಾರಿಕೆ ಆಲಿಸಿ, ಅರ್ಥವಿಸಿ ಬೆಳೆದವರು. ಅವರ ಪ್ರಸಂಗಗಳು ತೆಂಕಿನ ಎಲ್ಲಾ ಮೇಳಗಳಲ್ಲೂ ಜನಪ್ರಿಯವಾಗಿದೆ.

ದಾದರ್ ನಾಯ್ಗಾಂವ್ ಲೀಲಾ ಜೆ. ಶೆಟ್ಟಿ ನಿಧನ



ಮುಂಬಯಿ, ಜೂ. 30- ದಾದರ್ ಪೂರ್ವದ ನಾಯ್ಗಾಂವ್ ಲ್ಯಾಂಡ್ ಮಾರ್ಕ್ ಬಿಲ್ಡಿಂಗ್, ಬಿ/302 ರ ನಿವಾಸಿ ಲೀಲಾ ಜಗನ್ನಾಥ್ ಶೆಟ್ಟಿ (85) ಅವರು ಜೂನ್ 29ರಂದು ನಿಧನರಾಗಿದ್ದಾರೆ.

ಮೂಲತಃ ಮುಲ್ಕಿ ಮಾನಂಪಾಡಿಗುತ್ತು ವಿನವರಾದ ಅವರು ಮಿತ್ತೇಕ್ಕಾರು ವಿನೋದ ಭವನ ದಿವಂಗತ ಜಗನ್ನಾಥ ಶೆಟ್ಟಿ ಅವರ ಪತ್ನಿ.

ಮೃತರು ಓರ್ವ ಪುತ್ರ ಸಿವಿರಿ ಮೈತ್ರಿ ಬಾರ್ ಆ್ಯಂಡ್ ರೆಸ್ಟೋರೆಂಟ್‌ನ ಪ್ರತಾಪ್ ಜೆ ಶೆಟ್ಟಿ ಮತ್ತು ಓರ್ವ ಪುತ್ರಿ ವಿನೋದ ಗಣೇಶ ಶೆಟ್ಟಿ, ಅಳಿಯ, ಸೊಸೆ, ಮೊಮ್ಮಕ್ಕಳು, ಕುಟುಂಬಿಕರು ಹಿತೈಷಿಗಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕಾಂದಿವಲಿ : ದಿನೇಶ್ ಎಸ್. ಸುವರ್ಣ ನಿಧನ



ಮುಂಬಯಿ, ಜೂ.30- ಕಾಂದಿವಲಿ ಪೂರ್ವದ ಠಾಕೂರ್ ಕಾಂಪ್ಲೆಕ್ಸ್ ನಿವಾಸಿ, ಹೋಟೆಲ್ ಉದ್ಯಮಿ ದಿನೇಶ್ ಎಸ್. ಸುವರ್ಣ (65) ಅವರು ಜೂ. 27 ರಂದು ನಿಧನರಾಗಿದ್ದಾರೆ.

ದಿನೇಶ್ ಎಸ್. ಸುವರ್ಣರು ಮೂಲತಃ ಮಂಗಳೂರಿನ ಕುಳೂರಿನವರು.

ಮೃತರು ಪತ್ನಿ ,ಒಬ್ಬ ಪುತ್ರಿ , ಒಬ್ಬಳು ಪುತ್ರಿ ಹಾಗೂ ಭಾರತ್ ಬ್ಯಾಂಕಿನ ನಿರ್ದೇಶಕ ಸಂತೋಷ್ ಕೆ . ಪೂಜಾರಿ ಸಹಿತ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಭಾಯಂದರ್ : ಫುಟ್ಬಾಲ್ ಕ್ರೀಡಾಪಟು ಬೋಳೂರು ಪ್ರೇಮ್‌ನಾಥ್ ಐತಪ್ಪ ಪುತ್ರನ್ ನಿಧನ



ಭಾಯಂದರ್, ಜೂ.30-ಹೆಸರಾಂತ ಫುಟ್ಬಾಲ್ ಕ್ರೀಡಾಪಟು ಪ್ರೇಮ್‌ನಾಥ್ ಐತಪ್ಪ ಪುತ್ರನ್ (72 ವರ್ಷ) ಬೋಳೂರು ಇವರು ಜೂ.30 ರಂದು

ಭಾಯಂದರ್ ಪೂರ್ವದ ಆಜಾದ್ ನಗರ ಧರಮ್‌ಕಾಟ ಜಾನಕಿ ಅವೆನ್ಯೂ ಇಲ್ಲಿನ ಸ್ವಗೃಹದಲ್ಲಿ ನಿಧನರಾದರು. ಇವರ ತಾಯಿ ಬೋಳೂರಿನವರು ಮತ್ತು ತಂದೆ ಉಳ್ಳಾಲದವರಾಗಿದ್ದರು.

ಖ್ಯಾತ ಫುಟ್ಬಾಲ್ ಆಟಗಾರರಾದ ಇವರು ಮಹಾರಾಷ್ಟ್ರ ಜೂನಿಯರ್‌ಮತ್ತು ಮುಂಬೈ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು. ವೃತ್ತಿಯಲ್ಲಿ ಎಜಿ ಕಚೇರಿಯಲ್ಲಿದ್ದರು. ಇರಾಕ್ ಮತ್ತು ಮಸ್ಕತ್‌ಗೂ ಕ್ರೀಡಾ ಪ್ರಯುಕ್ತ ಪ್ರವಾಸ ಗೈದಿದ್ದರು. ಕರ್ನಾಟಕ ಸ್ಪೋರ್ಟಿಂಗ್ ಅಸೋಸಿಯೇಷನ್ ಚರ್ಚ್‌ಗೇಟ್ ಮುಂಬೈನಲ್ಲಿ ಹಲವು ವರ್ಷಗಳಿಂದ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಪ್ರೇಮ್‌ನಾಥ್ ಐತಪ್ಪ ಪುತ್ರನ್ ಇವರು ಇಬ್ಬರು ಸಹೋದರಿಯರು, ಓರ್ವ ಸಹೋದರ ಸಹಿತ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಉತ್ತರ ಕನ್ನಡದ ಅರಣ್ಯ ಪ್ರದೇಶಗಳಲ್ಲಿ ನಾಡಬಾಂಬ್, ಪೆಟ್ರೋಲ್ ಬಾಂಬ್ ಹಾಗೂ ಕಳ್ಳಬಂದೂಕು ತಯಾರಿಸುವ ಅಕ್ರಮ ಜಾಲ ಪತ್ತೆಹಚ್ಚಿದ ಎಸ್‌ಐಟಿ!

ಕಾರವಾರ, ಜೂ. 30 - ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ನಾಡಬಾಂಬ್, ಪೆಟ್ರೋಲ್ ಬಾಂಬ್ ಹಾಗೂ ಕಳ್ಳಬಂದೂಕು ತಯಾರಿಸುವ ಅಕ್ರಮ ಜಾಲವನ್ನು ಎಸ್‌ಐಟಿ ತಂಡವು ಪತ್ತೆಹಚ್ಚಿದ್ದು, ಇಡೀ ಪೊಲೀಸ್ ಇಲಾಖೆಯನ್ನು ಬೆಚ್ಚಿಬೀಳಿಸಿದೆ.

ಇತ್ತೀಚೆಗೆ ತುಮಕೂರು ಬಳಿ ನಡೆದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ವೇಳೆ ಈ ಜಾಲದ ಸುಳಿವು ದೊರೆತಿದ್ದು, ಮಲೆನಾಡು ಹಾಗೂ ಕರಾವಳಿಯ ದಟ್ಟ ಅರಣ್ಯಗಳಲ್ಲಿ ಅಡಗಿದ್ದ ಅಕ್ರಮ ತಯಾರಿಕಾ ಕೇಂದ್ರಗಳನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.

ಬಾಂಬ್ ಸ್ಫೋಟದ ತನಿಖೆ ತೀವ್ರಗೊಳಿಸಿರುವ ಪೊಲೀಸರು ಈಗಾಗಲೇ 60ಕ್ಕೂ ಹೆಚ್ಚು ಜನರನ್ನು ವಿಚಾರಣೆಗೊಳಪಡಿಸಿದ್ದು, ಪ್ರಮುಖ ಆರೋಪಿ ನಾಗೇಂದ್ರ ಗೌಡನಿಗೆ ಸಹಕರಿಸಿದ ಮೂವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಇವರಲ್ಲಿ ಇಬ್ಬರು ಅಂಕೋಲಾ ತಾಲೂಕಿನ ಸರಳಬೈಲ್ ಗ್ರಾಮದವರಾಗಿದ್ದು, ಒಬ್ಬ ನಾಗೇಂದ್ರ ಗೌಡನ ಸಂಬಂಧಿ ಹಾಗೂ ಇನ್ನೊಬ್ಬ ಆತನ ಆಪ್ತ ಸ್ನೇಹಿತ ಎಂದು ಗುರುತಿಸಲಾಗಿದೆ. ಮೂರನೇ ವ್ಯಕ್ತಿ ಹೊನ್ನಾವರ ತಾಲೂಕಿನ ಚಂದಾವರ ಮೂಲದವನೆಂದು ಪತ್ತೆಯಾಗಿದೆ. ಸದ್ಯ ಇವರನ್ನು ರಹಸ್ಯ ಸ್ಥಳದಲ್ಲಿ ವಿಚಾರಣೆ ನಡೆಸಲಾಗುತ್ತಿದೆ.

ಬಾಂಬ್ ಪೂರೈಕೆಯ ಮೂಲ ಹಾಗೂ ಇದರ ಹಿಂದಿರುವ ಕಿಂಗ್‌ಪಿನ್‌ಗಳನ್ನು ಪತ್ತೆಹಚ್ಚಲು ಮೂರು ಪ್ರತ್ಯೇಕ ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ತುಮಕೂರು, ಅಂಕೋಲಾ ಹಾಗೂ ಗೋಕರ್ಣ ಸಿಪಿಐ ತಂಡಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದು, ಕಾಡಿನ ಪ್ರದೇಶಗಳು ಹಾಗೂ ಸಂಶಯಾಸ್ಪದ ಸ್ಥಳಗಳ ಮೇಲೆ ನಿಗಾ ಇಟ್ಟಿವೆ.



ಪ್ರಾಥಮಿಕ ತನಿಖೆಯಲ್ಲಿ ಆರೋಪಿ ನಾಗೇಂದ್ರ ಗೌಡ ಬಾಂಬ್ ಖರೀದಿ ವೇಳೆ ಅತ್ಯಂತ ಚಾಣಾಕ್ಷತನ ಪ್ರದರ್ಶಿಸಿದ್ದಾನೆ ಎಂಬುದು ಬೆಳಕಿಗೆ ಬಂದಿದೆ. ಆತ ಮೊಬೈಲ್ ಮೂಲಕ ಯಾವುದೇ ಸಂಪರ್ಕ ಸಾಧಿಸದೇ, ನೇರವಾಗಿ ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದ ಕಾರಣದಿಂದ ಡಿಜಿಟಲ್ ಸಾಕ್ಷಿ ಪೊಲೀಸರಿಗೆ ಸಿಗದಂತಾಗಿದೆ.

ಯಲ್ಲಾಪುರ ಹಾಗೂ ಹಳಿಯಾಳ ಭಾಗದ ದಟ್ಟ ಅರಣ್ಯಗಳಲ್ಲಿ ನಾಡಬಾಂಬ್‌ಗಳನ್ನು ಅಕ್ರಮವಾಗಿ ತಯಾರಿಸಲಾಗುತ್ತಿದ್ದು, ಕೇವಲ 100 ರಿಂದ 300 ರೂಪಾಯಿಗಳ ಅಗ್ಗದ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ರಾಸಾಯನಿಕ ನೈಟ್ರೇಟ್ ಬಳಕೆಯ ಪ್ರಮಾಣದ ಮೇಲೆ ಬಾಂಬ್‌ಗಳ ತೀವ್ರತೆ ನಿರ್ಧಾರವಾಗುತ್ತದೆ. ಈ ಬಾಂಬ್ ಹಾಗೂ ಗನ್‌ಗಳನ್ನು ಮುಖ್ಯವಾಗಿ ಪ್ರಾಣಿಗಳ ಬೇಟೆಗೆ ಬಳಸಲಾಗುತ್ತಿದೆ.

ಕಾಡುಹಂದಿ ಬೇಟೆಗೆ ಮಾಂಸದ ಬಾಂಬ್ ಬಳಸಲಾಗುತ್ತಿದ್ದು, ಕೋಳಿಯ ಮಾಂಸದೊಳಗೆ ನಾಡಬಾಂಬ್ ಇಟ್ಟು ಕಾಡಿನ ಅಂಚಿನಲ್ಲಿ ಇಡಲಾಗುತ್ತದೆ. ಆಹಾರ ಅರಸಿ ಬರುವ ಕಾಡುಹಂದಿ ಇದನ್ನು ಅಗಿಯುತ್ತಿದ್ದಂತೆ ಬಾಂಬ್ ಸ್ಫೋಟಗೊಂಡು ಹಂದಿ ಸ್ಥಳದಲ್ಲೇ ಸಾವನ್ನಪ್ಪುತ್ತದೆ. ಹೀಗೆ ಬೇಟೆಯಾಡಿದ ಹಂದಿಯನ್ನು ಕಳ್ಳಮಾರುಕಟ್ಟೆಯಲ್ಲಿ 7 ರಿಂದ 8 ಸಾವಿರ ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ.

ಜಲಚರಗಳ ಬೇಟೆಗೆ ಪೆಟ್ರೋಲ್ ಬಾಂಬ್ ಬಳಸಲಾಗುತ್ತಿದ್ದು, ಪ್ಲಾಸ್ಟಿಕ್‌ನಲ್ಲಿ ಸುತ್ತಿ ನೀರಿನಾಳಕ್ಕೆ ಬಿಟ್ಟು ಸ್ಫೋಟಗೊಳಿಸಿದಾಗ ನೂರಾರು ಮೀನುಗಳು ಸತ್ತು ಮೇಲೇಳುತ್ತವೆ ಅಥವಾ ಪ್ರಜ್ಞೆ ತಪ್ಪಿ ಬಲೆಗೆ ಬೀಳುತ್ತವೆ.

ಉಡಾ, ಕಾಡುಕೋಣ, ಕಡವೆ ಬೇಟೆಗೆ ನಾಡಬಂದೂಕು ಬಳಸಲಾಗುತ್ತಿದ್ದು, ಇತ್ತೀಚೆಗೆ ಪೊಲೀಸರ ದಾಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇವುಗಳನ್ನು ತೋಟ ಹಾಗೂ ಗದ್ದೆಗಳ ಮಣ್ಣಿನಲ್ಲಿ ಬಚ್ಚಿಡಲಾಗುತ್ತಿದೆ.

ಗಣತಿ ನಮೂನೆ ಭರ್ತಿ ಮಾಡುವ ಮೂಲಕ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿದ ಸಿಎಂ ಡಿಕೆಶಿ

ಬೆಂಗಳೂರು, ಜೂ. 30 - ತಮ್ಮ ಎನ್ಯುಮರೇಶನ್ ಫಾರಂ (ಗಣತಿ ನಮೂನೆ) ಭರ್ತಿ ಮಾಡುವ ಮೂಲಕ ಸಿಎಂ ಡಿ.ಕೆ ಶಿವಕುಮಾರ್ ಅವರು ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಚಾಲನೆ ನೀಡಿದರು.



ಸದಾಶಿವ ನಗರ ನಿವಾಸದಲ್ಲಿ ಮಂಗಳವಾರ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಶಿವಕುಮಾರ್ ಅವರು ಗಣತಿ ನಮೂನೆ ತುಂಬಿದರು.

ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (SIR) ಆರಂಭವಾಗಿದ್ದು, ನನ್ನ ಮನೆಯಿಂದಲೇ ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ನನ್ನ ಎನ್ಯುಮರೇಷನ್ ಅರ್ಜಿಯನ್ನು ಭರ್ತಿ ಮಾಡಿ ಸಹಿ ಮಾಡಿ ಸಲ್ಲಿಕೆ ಮಾಡಿರುವೆ. ನೀವು ನಿಮ್ಮ ಹೆಸರಿನ ಜೊತೆಗೆ ಈ ಹಿಂದೆ ಮತದಾರ ಪಟ್ಟಿ ಸಮಯದಲ್ಲಿ ನೀಡಲಾಗಿದ್ದ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ. ಇಲ್ಲವಾದರೆ ಹೊಸ ಮೊಬೈಲ್ ಸಂಖ್ಯೆಯನ್ನು ಅಧಿಕಾರಿಗಳ ಮೂಲಕ ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಯಾವ ಸಂಖ್ಯೆ ನೀಡಿರುತ್ತಿರೋ ಅದೇ ಸಂಖ್ಯೆಗೆ ಒಟಿಪಿ ಬರಲಿದೆ ಎಂದು ಮಾಹಿತಿ ನೀಡಿದರು.

ಕುಟುಂಬದವರ ಪರವಾಗಿ ಒಬ್ಬರು ಸಹಿ ಮಾಡಿದರೂ ಅರ್ಜಿ ಸ್ವೀಕಾರ

ನೀವು ನಿಮ್ಮ ಹೆಸರಿನಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿದೆ. ಬಿಎಲ್‌ಎ, ಬಿಎಲ್‌ಓ ಹಾಗೂ ಮೇಲ್ವಿಚಾರಕರು ಈಗಾಗಲೇ ವಾಟ್ಸಪ್ ಗ್ರೂಪ್ ಮಾಡಿಕೊಂಡಿದ್ದಾರೆ. ಕುಟುಂಬದ ಸದಸ್ಯರ ಪೈಕಿ ಒಬ್ಬರು ಸಹಿ ಮಾಡಿದರೂ ಸಾಕು. ಕುಟುಂಬದವರ ಪರವಾಗಿ ಒಬ್ಬರೇ ಎಲ್ಲರ ಅರ್ಜಿ ತುಂಬಬಹುದು. ಅದನ್ನು ಸ್ವೀಕಾರ ಮಾಡಿಕೊಳ್ಳಲಾಗುವುದು. ನಿಮ್ಮ ಫೋಟೋ ಬದಲಾಯಿಸಿಕೊಳ್ಳಬೇಕಾದರೆ ಅರ್ಜಿಯಲ್ಲಿ ಹೊಸ ಫೋಟೋ ನೀಡಬಹುದು. ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕು. ಕರ್ನಾಟಕ ಸರ್ಕಾರ ರಾಜ್ಯದ ಜನರಿಗೆ ಅಗತ್ಯ ಪ್ರಮಾಣಪತ್ರ ನೀಡಲು ಮುಂದಾಗಿದೆ. ಎಲ್ಲರೂ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು. ಉಳಿಸಿಕೊಳ್ಳದಿದ್ದರೆ ಸರ್ಕಾರ ಸೌಲಭ್ಯ, ಕಾರ್ಯಕ್ರಮಗಳನ್ನು ಪಡೆಯುವುದು ಕಷ್ಟವಾಗಲಿದೆ ಎಂದು ಮಾಹಿತಿ ನೀಡಿದರು.

ಕೆಲವು ಅನಕ್ಷರಸ್ಥರಿಗೆ ಆ್ಯಪ್ ಬಳಸುವುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಕೇಳಿದಾಗ, ಆ್ಯಪ್ ಬಳಸುವ ವಿಚಾರದಲ್ಲಿ ನನಗೂ ಮಾಹಿತಿ ಇಲ್ಲ. ನಾನು ಬೇರೆಯವರ ಸಹಾಯ ಪಡೆದೆ. ಈ ಕಾರಣಕ್ಕೆ ಬಿಎಲ್‌ಓಗಳ ಮೂಲಕ ಅರ್ಜಿ ಪಡೆದು ಆಫ್‌ಲೈನ್ ಮೂಲಕವೇ ಅರ್ಜಿ ತುಂಬಬಹುದು ಎಂದು ತಿಳಿಸಿದರು.

ಕರ್ನಾಟಕದ ವಿಚಾರದಲ್ಲಿ ಈ ಪ್ರಕ್ರಿಯೆ ಬಹಳ ಪ್ರಮುಖವಾಗಿದೆ ಎಂದು ಕೇಳಿದಾಗ, ಬೇರೆ ರಾಜ್ಯಗಳಲ್ಲಿ ಸರ್ಕಾರದ ಸೌಲಭ್ಯಗಳನ್ನು ಕೇವಲ ಮತದಾರರಿಗೆ ಮಾತ್ರ ನೀಡುತ್ತಿದ್ದು, ಮತದಾನ ಹಕ್ಕು ಇಲ್ಲದವರಿಗೆ ಸೌಲಭ್ಯ ಹಿಂಪಡೆಯಲಾಗುತ್ತಿದೆ. ಅದೇ ವ್ಯವಸ್ಥೆ ರಾಜ್ಯದಲ್ಲೂ ಬರಬಹುದು ಎಂದು ತಿಳಿಸಿದರು.

ಇಲ್ಲಿನ ಮತದಾರರಿಗೆ ನಾವು ಗ್ಯಾರಂಟಿ ನೀಡಬಹುದು. ಬೇರೆ ರಾಜ್ಯದ ಮತದಾರರಿಗೆ ನಾವು ಯಾಕೆ ಗ್ಯಾರಂಟಿ ನೀಡಬೇಕು? ನಮ್ಮ ರಾಜ್ಯದವರಿಗೆ ಮಾತ್ರ ಗ್ಯಾರಂಟಿ ನೀಡಬೇಕು ಎಂಬುದು ನಮ್ಮ ಆಲೋಚನೆ ಎಂದು ತಿಳಿಸಿದರು.

ಅಡ್ಡ ಮತದಾನ : ದೇವಾಲಯದಲ್ಲಿ ಆಣೆ ಪ್ರಮಾಣ ಮಾಡಿದ ಶಾಸಕ ಎಚ್.ಕೆ. ಸುರೇಶ್

ಹಾಸನ, ಜೂ. 30 -ವಿಧಾನ ಪರಿಷತ್ ಚುನಾವಣೆಯಲ್ಲಿ ಶಾಸಕರಿಂದ ಅಡ್ಡಮತದಾನ ನಡೆದಿದೆ ಎಂಬ ಆರೋಪಗಳು ತೀವ್ರ ಚರ್ಚೆಗೆ ಕಾರಣವಾಗಿರುವ ಸಂದರ್ಭದಲ್ಲಿ, ಹಾಸನ ಜಿಲ್ಲೆಯ ಬೇಲೂರು ಕ್ಷೇತ್ರದ ಬಿಜೆಪಿ ಶಾಸಕ ಎಚ್.ಕೆ. ಸುರೇಶ್ ತಮ್ಮ ನಿಷ್ಠೆಯನ್ನು ಸಾಬೀತುಪಡಿಸಲು ದೇವಾಲಯದಲ್ಲಿ ಆಣೆ ಪ್ರಮಾಣ ಮಾಡುವ ಮೂಲಕ ಸುದ್ದಿಯಲ್ಲಿದ್ದಾರೆ.



ಮಂಗಳವಾರ ಬೆಳಿಗ್ಗೆ ಅವರು ಬೇಲೂರಿನ ಐತಿಹಾಸಿಕ ಶ್ರೀ ಚನ್ನಕೇಶವಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಚನ್ನಕೇಶವಸ್ವಾಮಿ, ಸೌಮ್ಯನಾಯಕಿ ಹಾಗೂ ರಂಗನಾಯಕಿ ಅಮ್ಮನವರ ಮುಂದೆ ವಿಶೇಷ ಪೂಜೆ ಸಲ್ಲಿಸಿ, ದೇವರ ಪಾದಮುಟ್ಟಿ ಭಕ್ತಿಯಿಂದ ನಮಸ್ಕರಿಸಿದರು. ಈ ಸಂದರ್ಭದಲ್ಲಿ ಅವರು, ಪೂರ್ವಜನ್ಮದ ಪುಣ್ಯದಿಂದ ನನಗೆ ಕ್ಷೇತ್ರದ ಜನರ ಸೇವೆ ಮಾಡುವ ಅಪೂರ್ವ ಅವಕಾಶ ಸಿಕ್ಕಿದೆ ಎಂದು ಭಾವೋದ್ರಿಕ್ತವಾಗಿ ಹೇಳಿದರು.

ಅದರ ನಂತರ ದೇವಾಲಯದ ಆವರಣದಲ್ಲಿರುವ ಬಲಿಕಲ್ಲು (ಕರಿಕಲ್ಲು) ಮುಟ್ಟಿ ಪ್ರಮಾಣ ಮಾಡಿದ ಶಾಸಕರು, ಈ ಕರಿಕಲ್ಲೇ ಸಾಕ್ಷಿ, ನಾನು ವಿಧಾನ ಪರಿಷತ್ ಚುನಾವಣೆಯಲ್ಲಿ ಯಾವುದೇ ಅಡ್ಡಮತದಾನ ಮಾಡಿಲ್ಲ ಎಂದು ಮೂರು ಬಾರಿ ಗಟ್ಟಿಯಾಗಿ ಉಚ್ಚರಿಸಿದರು. ಅಲ್ಲದೆ, ನಾನು ನನ್ನ ಜೀವವಿರುವವರೆಗೂ ಬಿಜೆಪಿ ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದು ಪುನರುಚ್ಚರಿಸಿದರು.

ಆಣೆ ಪ್ರಮಾಣದ ಬಳಿಕ ಮಾತನಾಡಿದ ಸುರೇಶ್, ನನ್ನ ವಿರುದ್ಧ ಕೇಳಿಬರುತ್ತಿರುವ ಅಡ್ಡಮತದಾನದ ಅಪಪ್ರಚಾರವು ದೊಡ್ಡ ಪಿತೂರಿ ಮತ್ತು ಷಡ್ಯಂತ್ರ. ನಮ್ಮ ಕ್ಷೇತ್ರಕ್ಕೆ ಖುದ್ದಾಗಿ ಪ್ರಧಾನಿ ನರೇಂದ್ರ ಮೋದಿಯವರು ಬಂದು ಪ್ರಚಾರ ಮಾಡಿದ್ದರು. ಅಂತಹ ನಾಯಕರಿಗೆ ಹಾಗೂ ಪಕ್ಷಕ್ಕೆ ನಾನು ಅನ್ಯಾಯ ಮಾಡಿದರೆ ಭಗವಂತ ನನ್ನನ್ನು ಕ್ಷಮಿಸುವುದಿಲ್ಲ. ನಾನು ಪಕ್ಷದ ಸೂಚನೆಯಂತೆ ನಿಖರವಾಗಿ ಮತ ಚಲಾಯಿಸಿದ್ದೇನೆ. ಇದಕ್ಕೆ ಪರಮಾತ್ಮನೇ ಸಾಕ್ಷಿ ಎಂದು ಸ್ಪಷ್ಟಪಡಿಸಿದರು.

ನನ್ನನ್ನು ಹಣದಿಂದಾಗಲಿ ಅಥವಾ ದೌರ್ಜನ್ಯದಿಂದಾಗಲಿ ಯಾರೂ ಖರೀದಿಸಲು ಸಾಧ್ಯವಿಲ್ಲ. ನನ್ನನ್ನು ಕೇವಲ ಜನರ ಪ್ರೀತಿಯಿಂದ ಮಾತ್ರ ಖರೀದಿಸಲು ಸಾಧ್ಯ. ಇಷ್ಟು ಜನರ ಪ್ರೀತಿಯೇ ನನಗೆ ಶ್ರೀರಕ್ಷೆ. ನನ್ನ ವಿರುದ್ಧ ನಡೆದಿರುವ ಈ ಪಿತೂರಿಯ ಹಿಂದಿನ ಷಡ್ಯಂತ್ರವನ್ನು ಆ ಭಗವಂತನೇ ಎಲ್ಲರಿಗೂ ತಿಳಿಸಲಿ ಎಂಬ ಕಾರಣಕ್ಕೆ ನಾನು ಈ ಆಣೆ ಪ್ರಮಾಣ ಮಾಡಿದ್ದೇನೆ ಎಂದು ಹೇಳಿದರು.

ಅಗತ್ಯ ಕ್ರಮಗಳೊಂದಿಗೆ ಬಂಡಿಪುರ ನಾಗರಹೊಳೆ ಸಫಾರಿ ಆರಂಭಕ್ಕೆ ಸಿಎಂ ಡಿಕೆಶಿ ಸೂಚನೆ

ಬೆಂಗಳೂರು, ಜೂ.30 - ಅಗತ್ಯ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಬಂಡಿಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿನಸಫಾರಿಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪುನರಾರಂಭಿಸಲುಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಹಾಗೆಯೇ ಮೇಕೆದಾಟು ಯೋಜನೆಗೆ ಸಣ್ಣ ಪುಟ್ಟ ನೆಪಗಳನ್ನು ಮುಂದಿಟ್ಟು ಸುಪ್ರೀಂಕೋರ್ಟ್‌ನಲ್ಲಿ ತಕರಾರು ಮಾಡಲು ತಮಿಳುನಾಡು ಪ್ರಯತ್ನಿಸುತ್ತಿದೆ. ಈ ಸಣ್ಣ ಪುಟ್ಟ ತಾಂತ್ರಿಕ ಸಮಸ್ಯೆಗಳು ಇದೆಯಾ? ಎಂದು ಪರಿಶೀಲಿಸಿ ಪರಿಣಾಮಕಾರಿಯಾಗಿ ಬಗೆಹರಿಸಲು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ಅವರು ಈ ನಿರ್ದೇಶನ ನೀಡಿದರು.

ಸಭೆಯಲ್ಲಿ ಅಧಿಕಾರಿಗಳು ನೀಡಿದ ಮಾಹಿತಿಯಂತೆ, ಬಂಡಿಪುರ ಮತ್ತು ನಾಗರಹೊಳೆ ಪರಿಸರ ಪ್ರವಾಸೋದ್ಯಮ ಹಾಗೂ ಸಫಾರಿ ಪ್ರದೇಶಗಳಲ್ಲಿ ಹುಲಿಗಳು ಮತ್ತು ಚಿರತೆಗಳ ಸಾಂದ್ರತೆ, ಮಾನವ ವನ್ಯಜೀವಿ ಸಂಘರ್ಷ ಹೆಚ್ಚಿರುವ ಪ್ರದೇಶಗಳಿಗಿಂತ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಯಾವುದೇ ಧಕ್ಕೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸಫಾರಿ ಚಟುವಟಿಕೆಗಳನ್ನು ಆರಂಭಿಸುವಂತೆ ಮುಖ್ಯಮಂತ್ರಿ ಸೂಚಿಸಿದರು.

ಸಭೆಯಲ್ಲಿ ಬಿಎಂಐಸಿ ಕಾರಿಡಾರ್ ನಿರ್ಮಾಣದಿಂದ ಆನೆ, ಹುಲಿ ಹಾಗೂ ಚಿರತೆಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಇದರ ಪರಿಣಾಮವಾಗಿ ವನ್ಯಜೀವಿಗಳು ಅರಣ್ಯ ಪ್ರದೇಶಗಳಿಂದ ಹೊರಬಂದು ಚನ್ನಪಟ್ಟಣ ಹಾಗೂ ರಾಮನಗರ ಭಾಗಗಳತ್ತ ಚಲಿಸುತ್ತಿದ್ದು, ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗಲು ಇದೂ ಪ್ರಮುಖ ಕಾರಣವಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಶಾಸಕರ ಅನುದಾನದಲ್ಲಿ ತಾರತಮ್ಯ ; ಅಶ್ವತ್ಥನಾರಾಯಣ್ ಟೀಕೆ

ಬೆಂಗಳೂರು, ಜೂ.30 - ಕಾಂಗ್ರೆಸ್ ಸರಕಾರವು ಬೆಂಗಳೂರಿನ ಅಭಿವೃದ್ಧಿ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಅವರು ಟೀಕಿಸಿದ್ದಾರೆ.

ಬೆಂಗಳೂರಿನ ಅಭಿವೃದ್ಧಿಗೆ ಬೇಕಾದ ಅನುದಾನವನ್ನು ಸಾಕಷ್ಟು ಕೊಟ್ಟಿಲ್ಲ. ಅದರಲ್ಲೂ ತಾರತಮ್ಯ ಮಾಡಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಶಾಸಕರಿಗೆ ಹೆಚ್ಚು ಹಾಗೂ ಬಿಜೆಪಿ ಶಾಸಕರಿಗೆ ಕಡಿಮೆ ಅನುದಾನ ನೀಡಿದ್ದಾರೆ. ಈ ತಾರತಮ್ಯ ನಿಲ್ಲಬೇಕು ಎಂದು ಒತ್ತಾಯಿಸಿದರು.

ಕಸದ ತೆರಿಗೆ, ಆಸ್ತಿ ತೆರಿಗೆ, ಜಾಹೀರಾತು ಮೂಲಕ ಸಂಗ್ರಹ, ವಿದ್ಯುತ್ ದರ ಹೆಚ್ಚಳ, ಬಿಡಬ್ಲ್ಯುಎಸ್‌ಎಸ್‌ಬಿಯಲ್ಲೂ ಹೆಚ್ಚು ದರ ವಿಧಿಸಿ ಹಣ ಸಂಗ್ರಹಿಸಿದ್ದಾರೆ. ವಿದ್ಯುತ್ ಮೇಲೆ ಐದಾರು ದರ ವಿಧಿಸುತ್ತಿದ್ದಾರೆ ಎಂದು ಗಮನ ಸೆಳೆದರು.

ಬಿಜೆಪಿ ಸರಕಾರವು ಹೆಚ್ಚಿನ ಅನುದಾನವನ್ನು ಬೆಂಗಳೂರಿಗೆ ನೀಡಿತ್ತು. ಅದಕ್ಕೆ ಹೋಲಿಸಿದರೆ ಕಾಂಗ್ರೆಸ್ಸಿನ ಸರಕಾರದ ಅವಧಿಯಲ್ಲಿ ಕಡಿಮೆ ಅನುದಾನ ನೀಡಿದ್ದಾರೆ. ಸರಕಾರ ತಾರತಮ್ಯ ಮಾಡದೇ ಪ್ರತಿಯೊಂದು ಕ್ಷೇತ್ರಕ್ಕೂ ಸಮಾನವಾಗಿ, ಅವಶ್ಯಕತೆ ಆಧರಿತವಾಗಿ ಅನುದಾನ ಕೊಡಬೇಕು ಎಂದು ಆಗ್ರಹಿಸಿದರು.

ಬಾಕಿ ಬಿಲ್ ಬಿಡುಗಡೆಗೆ ಗುತ್ತಿಗೆದಾರರ ಸಂಘದಿಂದ ಸಿಎಂ ಡಿಕೆಶಿಗೆ ಮನವಿ

ಬೆಂಗಳೂರು, ಜೂ. 30 - ಬಾಕಿ ಇರುವ 37 ಸಾವಿರ ಕೋಟಿ ರೂ.ಗಳ ಬಿಲ್ಲನ್ನು ತಕ್ಷಣ ಬಿಡುಗಡೆ ಮಾಡುವಂತೆ ರಾಜ್ಯ ಗುತ್ತಿಗೆದಾರರ ಸಂಘ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿಕೊಂಡಿದೆ.

ಇಂದು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ ಗುತ್ತಿಗೆದಾರರ ನಿಯೋಗ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಕಾಮಗಾರಿಗಳ ಬಿಲ್‌ಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಹಾಗೂ ಗುತ್ತಿಗೆದಾರರು ಎದುರಿಸುತ್ತಿರುವ ವಿವಿಧ ಆಡಳಿತಾತಕ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಆಗ್ರಹಿಸಿದರು.

ಕಳೆದ ಮಾರ್ಚ್ 6 ರಂದು ಫ್ರೀಡಂ ಪಾರ್ಕ್‌ನಲ್ಲಿ ನಡೆದ ರಾಜ್ಯಮಟ್ಟದ ಬೃಹತ್ ಪ್ರತಿಭಟನೆಯ ವೇಳೆ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿತ್ತು. ಆದರೆ, ಇದುವರೆಗೆ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದ ಕಾರಣ ಮತ್ತೊಮ್ಮೆ ಸರ್ಕಾರದ ಗಮನ ಸೆಳೆಯಲಾಗಿದೆ ಎಂದು ಸಂಘದ ಮುಖಂಡರು ತಿಳಿಸಿದ್ದಾರೆ.

ಸಂಘದ ಪ್ರಕಾರ, 2021-22ರಿಂದ 2023-24ರವರೆಗೆ ವಿವಿಧ ಇಲಾಖೆಗಳಲ್ಲಿ ಸುಮಾರು 37,370.76 ಕೋಟಿ ಮೊತ್ತದ ಕಾಮಗಾರಿ ಬಿಲ್‌ಗಳು ಬಾಕಿ ಉಳಿದಿವೆ. ಲೋಕೋಪಯೋಗಿ, ಜಲಸಂಪನ್ಮೂಲ, ಸಣ್ಣ ನೀರಾವರಿ, ನಗರಾಭಿವೃದ್ಧಿ, ವಸತಿ, ಕಾರ್ಮಿಕ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸೇರಿದಂತೆ ಹಲವು ಇಲಾಖೆಗಳ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಯಿತು.

ಇದೇ ವೇಳೆ 2017-18ರಿಂದ 2019-20ರ ಅವಧಿಯ ಕಾಮಗಾರಿಗಳಿಗೆ ಸಂಬಂಧಿಸಿದ ಜಿಎಸ್‌ಟಿ ವ್ಯತ್ಯಾಸದ ಶೇ.8ರ ಮೊತ್ತವನ್ನು ಏಳು ವರ್ಷಗಳಿಂದ ಪಾವತಿಸದಿರುವುದು, ಇ-ಸಂಗ್ರಹಣಾ ವೇದಿಕೆಯ ಒಪ್ಪಂದ ನಿರ್ವಹಣಾ ಮಾಡ್ಯೂಲ್ ಕಡ್ಡಾಯಗೊಳಿಸಿರುವ ಆದೇಶವನ್ನು ರದ್ದುಪಡಿಸುವುದು, ಲೈಸೆನ್ಸ್ ನವೀಕರಣದ ವೇಳೆ ವರ್ಕ್ ಡನ್ ಮತ್ತು ಟರ್ನೋವರ್ ಮಾನದಂಡವನ್ನು 10 ವರ್ಷಗಳಿಗೆ ವಿಸ್ತರಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸಂಘ ಮುಂದಿಟ್ಟಿದೆ.

ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಕ್ರಮಕ್ಕೆ ಜೆಡಿಎಸ್ ದೂರು

ಬೆಂಗಳೂರು, ಜೂ. 30 - ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅಸಭ್ಯ ವರ್ತನೆ ತೋರಿ, ಸಾರ್ವಜನಿಕವಾಗಿ ಪ್ರಚೋದನೆ ಮಾಡಿದ್ದಾರೆ ಎಂದು ಆರೋಪಿಸಿರುವ ಜೆಡಿಎಸ್, ಇವರ ವಿರುದ್ಧ ಕಾನೂನು ರೀತಿ ಕ್ರಮ ಜರಗಿಸುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ನೀಡಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಮುಖ್ಯ ವಕ್ತಾರ ಹಾಗೂ ಮಾಜಿ ಶಾಸಕ ಕೆ.ಟಿ. ಶ್ರೀಕಂಠೇಗೌಡ ಅವರು ಶಾಸಕರು ಇದೇ ರೀತಿ ವರ್ತನೆ ಮುಂದುವರೆಸಿದರೆ ಪಕ್ಷದ ವತಿಯಿಂದ ರಾಜ್ಯಾದ್ಯಂತ ಹೋರಾಟ ಮಾಡುತ್ತೇವೆ ಎಂದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಜೆಡಿಎಸ್ ಬೆಂಬಲ ನೀಡಿರುವುದರಿಂದ ಇದನ್ನು ಡೈವರ್ಟ್ ಮಾಡಲು ಈ ರೀತಿಯ ಹುನ್ನಾರ ಮಾಡಲಾಗಿದೆ ಎಂದು ಆರೋಪಿಸಿದರು.

ಕೆಂಪೇಗೌಡ ಜಯಂತಿ ಸಂದರ್ಭದಲ್ಲಿ ಶಾಸಕರು ತೊಡೆ ತಟ್ಟಿ, ತೋಳೇರಿಸಿ ಅಸಭ್ಯ ವರ್ತನೆ ಮಾಡಿದ್ದಾರೆ. ಅಲ್ಲದೆ ಜನರನ್ನು ಪ್ರಚೋದಿಸಿದ್ದಾರೆ. ಆದರೂ ಅವರ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.ಕಾಂಗ್ರೆಸ್ ನಾಯಕರು ಶಾಸಕರಿಗೆ ಸೂಕ್ತ ತಿಳುವಳಿಕೆ ನೀಡಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಕಾನೂನು ಬಾಹಿರವಾಗಿ ಮೂರು ಸಿಎ ನಿವೇಶನವನ್ನು ಪಡೆದಿರುವುದನ್ನು ಜೆಡಿಎಸ್ ಪ್ರಶ್ನಿಸಿದ್ದರಿಂದ ಅವರು ನಮ ನಾಯಕರ ವಿರುದ್ಧ ಅವಹೇಳನ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಮಂಗಳೂರು : ಭೀಕರ ಅಲೆಗಳ ಅಬ್ಬರಕ್ಕೆ ಸಿಲುಕಿ ಮುಳುಗಿದ ಮೀನುಗಾರಿಕಾ ಬೋಟ್! ; ಮೀನುಗಾರರ ರಕ್ಷಣೆ

ಮಂಗಳೂರು, ಜೂ. 30 - ಅರಬ್ಬಿ ಸಮುದ್ರದಲ್ಲಿ ಭೀಕರ ಅಲೆಗಳ ಅಬ್ಬರಕ್ಕೆ ಸಿಲುಕಿ ಐಎಫ್‌ಬಿ ಮಂಜುಮಾತಾ ಮೀನುಗಾರಿಕಾ ಬೋಟ್ ಮುಳುಗಿದ ಘಟನೆ ಮಂಗಳೂರಿನ ಕರಾವಳಿಯಲ್ಲಿ ಆತಂಕ ಮೂಡಿಸಿದೆ. ಈ ದೋಣಿಯಲ್ಲಿ ಮೀನುಗಾರಿಕೆಗೆ ತೆರಳಿದ್ದ ಆರು ಮಂದಿ ಮೀನುಗಾರರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆ ತಕ್ಷಣವೇ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ರಕ್ಷಿಸಿದೆ.

ಮಂಗಳವಾರ ಬೆಳಿಗ್ಗೆ ಮಂಗಳೂರಿನ ಆಳ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಬೋಟ್ ದೈತ್ಯ ಅಲೆಗಳ ಹೊಡೆತಕ್ಕೆ ಸಿಲುಕಿತು. ಬೋಟ್ ಒಳಗೆ ನೀರು ನುಗ್ಗಿ ಒತ್ತಡ ಹೆಚ್ಚಾಗುತ್ತಿದ್ದಂತೆ ದೋಣಿ ಸಮುದ್ರದಲ್ಲಿ ಮುಳುಗಲು ಆರಂಭವಾಯಿತು. ಸಂಕಷ್ಟದಲ್ಲಿದ್ದ ಮೀನುಗಾರರ ಮಾಹಿತಿ ಸಿಗುತ್ತಿದ್ದಂತೆಯೇ ಕರಾವಳಿ ರಕ್ಷಣಾ ಪಡೆ ಸ್ಥಳಕ್ಕೆ ಧಾವಿಸಿತು. ಅತ್ಯಾಧುನಿಕ ಹಡಗು



'ಐಸಿಜಿಎಸ್ ಸಚೇತ್' ಮೂಲಕ ಸ್ಥಳಕ್ಕೆ ತಲುಪಿದ ಸಿಬ್ಬಂದಿ, ಅಲೆಗಳ ಅಬ್ಬರದ ನಡುವೆ ರಿಮೋಟ್-ಆಪರೇಟೆಡ್ ಲೈಫ್‌ಬಾಯ್‌ಗಳನ್ನು ಬಳಸಿಕೊಂಡು ಮೀನುಗಾರರನ್ನು ತಲುಪಿ, ಆರು ಮಂದಿಯ ಜೀವವನ್ನು ಉಳಿಸಿದರು.

ರಕ್ಷಿಸಲ್ಪಟ್ಟ ಮೀನುಗಾರರನ್ನು ನ್ಯೂ ಮಂಗಳೂರು ಬಂದರಿಗೆ ಕರೆತರಲಾಗಿದ್ದು, ಅವರಿಗೆ ಪ್ರಾಥಮಿಕ ಚಿಕಿತ್ಸೆ, ಆಹಾರ ಹಾಗೂ ಅಗತ್ಯ ನೆರವು ಒದಗಿಸಲಾಗಿದೆ. ಅಧಿಕಾರಿಗಳು ಎಲ್ಲಾ ಮೀನುಗಾರರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಕರಾವಳಿ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್: ಈ ಘಟನೆ ಕರಾವಳಿಯಲ್ಲಿ ಭಾರೀ ಮಳೆಯ ನಡುವೆ ನಡೆದಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರೀ ಹಾಗೂ ಅತಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಮಳೆಯೊಂದಿಗೆ ಗಂಟೆಗೆ 30-40 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಮೀನುಗಾರರು ಹಾಗೂ ಕರಾವಳಿ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ನೇಹಾ ಹಿರೇಮಠ ಕೊಲೆ ಪ್ರಕರಣ ; ಆರೋಪಿ ಫಯಾಜ್ ಜಾಮೀನು ಅರ್ಜಿ ವಜಾ



ಧಾರವಾಡ, ಜೂ. 30 - ಇಡೀ ರಾಜ್ಯವನ್ನು ಬೆಚ್ಚಿಬೀಳಿಸಿದ ಹುಬ್ಬಳ್ಳಿಯ ನೇಹಾ ಹಿರೇಮಠ ಕೊಲೆ ಪ್ರಕರಣದಲ್ಲಿ ಮುಖ್ಯ ಆರೋಪಿ ಫಯಾಜ್‌ಗೆ ಮತ್ತೊಮ್ಮೆ ನ್ಯಾಯಾಲಯದಲ್ಲಿ ಭಾರೀ ಮುಖಭಂಗವಾಗಿದೆ. ಆರೋಪಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠವು ಇಂದು ವಜಾಗೊಳಿಸಿದೆ.

ಈ ಹಿಂದೆ ಹುಬ್ಬಳ್ಳಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಫಯಾಜ್‌ನ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಆ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಆರೋಪಿ, ತನಗೆ ಜಾಮೀನು ನೀಡಬೇಕು ಎಂದು ಮನವಿ ಮಾಡಿದ್ದ. ಆದರೆ ಹೈಕೋರ್ಟ್‌ನಲ್ಲಿ ಉಭಯ ಪಕ್ಷಗಳ ವಾದ-ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠವು ಪ್ರಕರಣದ ಗಾಂಭೀರ್ಯತೆಯನ್ನು ಪರಿಗಣಿಸಿ, ಯಾವುದೇ ಕಾರಣಕ್ಕೂ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

ಕೊಲೆಯಾದ ವಿದ್ಯಾರ್ಥಿನಿ ನೇಹಾ ಪರವಾಗಿ ಹಿರಿಯ ವಕೀಲ ರಾಘವೇಂದ್ರ ಮುತ್ತಗಿ ಅವರು ಬಲವಾದ ವಾದ ಮಂಡಿಸಿದರು. ಆರೋಪಿ ಮಾಡಿದ ಕೃತ್ಯ ಅತ್ಯಂತ ಕ್ರೂರವಾಗಿದ್ದು, ಜಾಮೀನು ನೀಡಿದರೆ ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ ಮತ್ತು ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ ಎಂದು ಅವರು ನ್ಯಾಯಾಲಯದ ಗಮನಕ್ಕೆ ತಂದರು. ಈ ವಾದವನ್ನು ಪುರಸ್ಕರಿಸಿದ ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಎಪ್ರಿಲ್ 18, 2024 ರಂದು ಹುಬ್ಬಳ್ಳಿಯ ಬಿವಿಬಿ ಕಾಲೇಜು ಆವರಣದಲ್ಲಿ ನಡೆದಿದ್ದ ಈ ಭೀಕರ ಘಟನೆ ರಾಜ್ಯಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. 24 ವರ್ಷದ ಎಂಸಿಎ ವಿದ್ಯಾರ್ಥಿನಿ ನೇಹಾ ಹಿರೇಮಠ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯ ನಿರಂಜನ ಹಿರೇಮಠ ಅವರ ಪುತ್ರಿ.

ಪರೀಕ್ಷೆ ಮುಗಿದ ಐದೇ ನಿಮಿಷದಲ್ಲಿ ಫಲಿತಾಂಶ ಪ್ರಕಟಿಸಿ ಇತಿಹಾಸ ಸೃಷ್ಟಿಸಿದ ವಿಟಿಯು

ಬೆಂಗಳೂರು, ಜೂ.30 - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) 6ನೇ ಸೆಮಿಸ್ಟರ್ ಎಂಜಿನಿಯರಿಂಗ್ ಪರೀಕ್ಷೆ ಮುಗಿದ ಕೇವಲ 5 ನಿಮಿಷದೊಳಗೆ ಫಲಿತಾಂಶ ಪ್ರಕಟಿಸುವ ಮೂಲಕ ಹೊಸ ಇತಿಹಾಸ ನಿರ್ಮಿಸಿದೆ. ಫಲಿತಾಂಶವನ್ನು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಹಾಗೂ ಕುಲಸಚಿವ (ಮೌಲ್ಯಮಾಪನ) ಪ್ರೊ. ಯು.ಜೆ. ಉಜ್ವಲ್ ಹಾಗೂ ಕುಲಸಚಿವ ಡಾ. ಪ್ರಸಾದ ಬಿ. ರಾಂಪುರೆ ಜಂಟಿಯಾಗಿ ಬಿಡುಗಡೆ ಮಾಡಿದರು. ಆ ಮೂಲಕ ಈ ಹಿಂದೆ ಸೃಷ್ಟಿಸಿದ್ದ ಎಲ್ಲಾ ದಾಖಲೆಗಳನ್ನು ವಿಟಿಯು ಮುರಿದಿದೆ.

ಬಿ.ಇ. ಮತ್ತು ಬಿ.ಟೆಕ್ 6ನೇ ಸೆಮಿಸ್ಟರ್ ಪರೀಕ್ಷೆಗೆ 60,856 ವಿದ್ಯಾರ್ಥಿಗಳು ಹಾಜರಾಗಿದ್ದರು. ಮಂಗಳವಾರ ಸಂಜೆ 5.30ಕ್ಕೆ ಪರೀಕ್ಷೆ ಅಂತ್ಯವಾಗಿದ್ದು, 5.35ಕ್ಕೆ ಫಲಿತಾಂಶವನ್ನು ಬಿಡುಗಡೆ ಮಾಡಿದೆ. ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ, ಸಂಪೂರ್ಣ ಮೌಲ್ಯಮಾಪನ ಪ್ರಕ್ರಿಯೆಯನ್ನು 21 ದಿನಗಳ ಮುಂಚಿತವಾಗಿಯೇ ಮುಗಿಸಿದೆ. ಒಟ್ಟು ಶೇ. 76.84 ಫಲಿತಾಂಶ ದಾಖಲಾಗಿದೆ.

ಈ ಕುರಿತು ಮಾತನಾಡಿದ ವಿಟಿಯು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಪರೀಕ್ಷೆ ಬರೆದ ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಾಯುತ್ತಿರುತ್ತಾರೆ. ಹೀಗಾಗಿ ನಾವು ಸಾಧ್ಯವಾದಷ್ಟು ಬೇಗ ಫಲಿತಾಂಶ ಪ್ರಕಟಿಸಲು ನಿರ್ಧರಿಸಿ, ಆ ಪ್ರಕಾರ ಸಿದ್ಧತೆ ನಡೆಸಿ ಫಲಿತಾಂಶ ಬಿಡುಗಡೆ ಮಾಡಿದ್ದೇವೆ. ಈ ಹಿಂದೆ ಅಂತಿಮ ವರ್ಷದ ವಿದ್ಯಾರ್ಥಿಗಳ ಫಲಿತಾಂಶವನ್ನು 10 ನಿಮಿಷಗಳ ಒಳಗಾಗಿ ಬಿಡುಗಡೆ ಮಾಡಲಾಗಿತ್ತು. ಇದಕ್ಕೆ ಸಹಕಾರ ನೀಡಿದ ವಿಟಿಯು ಆಡಳಿತ ಸಿಬ್ಬಂದಿ, ಪರೀಕ್ಷಾ ವಿಭಾಗದ ಸಿಬ್ಬಂದಿ ಮತ್ತು ಸಂಯೋಜಿತ ಕಾಲೇಜುಗಳ ಸಿಬ್ಬಂದಿಗೆ ಅಭಿನಂದನೆ ತಿಳಿಸುತ್ತೇನೆ ಎಂದರು.

ವಿಟಿಯು ಕುಲಸಚಿವ(ಮೌಲ್ಯಮಾಪನ) ಪ್ರೊ. ಯು.ಜೆ. ಉಜ್ವಲ್‌ಾತನಾಡಿ, ನಾವು ಡಿಜಿಟಲ್ ಮೌಲ್ಯಮಾಪನ ಮಾಡಿದ್ದು, ಫಲಿತಾಂಶವನ್ನು ಶೀಘ್ರವಾಗಿ ಪ್ರಕಟಿಸಲು ಸಿದ್ಧತೆ ನಡೆಸಲಾಗಿತ್ತು. ಎಲ್ಲರ ಸಹಕಾರದಿಂದ ಇದು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ.

6ನೇ ಸೆಮಿಸ್ಟರ್ ಫಲಿತಾಂಶ ಪ್ರಕಟದ ಇತಿಹಾಸ

ವರ್ಷ	ವಿದ್ಯಾರ್ಥಿಗಳ ಸಂಖ್ಯೆ	ಫಲಿತಾಂಶದ ಅವಧಿ
2025-26	60,856	5 ನಿಮಿಷ
2024-25	58,232	10 ದಿನ
2023-24	49,997	11 ದಿನ
2022-23	41,835	10 ದಿನ

ಮುತ್ತತ್ತಿಯಲ್ಲಿ ಋಷಿಕೇಶ ಹಾಗೂ ಹರಿದ್ವಾರದ ಮಾದರಿಯಲ್ಲಿ ಕಾಲುವೆ ನಿರ್ಮಿಸಿ ಸ್ನಾನಘಟ್ಟಗಳ ಅಭಿವೃದ್ಧಿಗೆ ರಾಮಲಿಂಗಾ ರೆಡ್ಡಿ ಸೂಚನೆ

ಮಂಡ್ಯ, ಜೂ. 30 - ಮುತ್ತತ್ತಿ ಪ್ರವಾಸಿ ತಾಣದಲ್ಲಿ ಭಕ್ತಾದಿಗಳ ಸುರಕ್ಷತೆಗಾಗಿ ಋಷಿಕೇಶ ಹಾಗೂ ಹರಿದ್ವಾರದ ಮಾದರಿಯಲ್ಲಿ ಕಾಲುವೆ ನಿರ್ಮಿಸಿ ಸ್ನಾನಘಟ್ಟಗಳನ್ನು ಅಭಿವೃದ್ಧಿಪಡಿಸುವ ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಸೂಚನೆ ನೀಡಿದ್ದಾರೆ. ಈ ಯೋಜನೆಗೆ ಅಗತ್ಯವಿರುವ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.



ಮುತ್ತತ್ತಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಸಚಿವರು, ಕಾವೇರಿ ನದಿ ತೀರದಲ್ಲಿ 20 ಸಿಸಿ ಕ್ಯಾಮರಾಗಳನ್ನು ಅಳವಡಿಸುವುದಾಗಿ ಹಾಗೂ ಪ್ರತಿದಿನ ಅರಣ್ಯ ಇಲಾಖೆಯ ಸಿಬ್ಬಂದಿಯೊಂದಿಗೆ 8 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವುದಾಗಿ ತಿಳಿಸಿದರು.

ಅಲ್ಲದೆ, ಮುತ್ತತ್ತಿಯಲ್ಲಿ ಪೊಲೀಸ್ ಚೌಕಿ ನಿರ್ಮಿಸಿ ಹಬ್ಬ, ವಿಶೇಷ ದಿನಗಳು ಹಾಗೂ ರಜಾ ದಿನಗಳಲ್ಲಿ ಒಬ್ಬ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ನಿಯೋಜಿಸಲು ಎಸ್ಪಿಗೆ ಸೂಚನೆ ನೀಡಲಾಗುವುದು ಎಂದರು.

ಸಚಿವರು ಮುಂದುವರಿದು, ಮೇಕೆದಾಟು ಅಣೆಕಟ್ಟು ನಿರ್ಮಾಣವಾದರೆ ಪ್ರವಾಸಿಗರಿಗೆ ಅಗತ್ಯ ಮೂಲಸೌಕರ್ಯ, ಶೌಚಾಲಯ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು. ಮುತ್ತತ್ತಿ ವನ್ಯಜೀವಿ ವಲಯ ಪ್ರದೇಶವಾಗಿರುವುದರಿಂದ ಕಾವೇರಿ ನದಿ ತೀರದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗುವುದು ಎಂದು ಹೇಳಿದರು.

ಕಳೆದ ಜೂನ್ 24ರಂದು ಮುತ್ತತ್ತಿಗೆ ಪ್ರವಾಸಕ್ಕೆ ಬಂದಿದ್ದ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಜೆ. ಬ್ಯಾಡರಹಳ್ಳಿ ಗ್ರಾಮದ ಐದು ಮಂದಿ ಪ್ರವಾಸಿಗರು ನೀರಿನಲ್ಲಿ ಮುಳುಗಿ ಮೃತಪಟ್ಟ ಹಿನ್ನೆಲೆಯಲ್ಲಿ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಮಿಳುನಾಡಿಗೆ ನೀರು ಬಿಡುವ ವಿಚಾರವಾಗಿ ಅವರು, ಇದುವರೆಗೆ ತಮಿಳುನಾಡಿಗೆ ನೀರು ಬಿಡಲಾಗಿಲ್ಲ. ಅಣೆಕಟ್ಟಿನಲ್ಲಿ ನೀರು ಇಲ್ಲದ ಕಾರಣ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಲಾಗಿದೆ. ಮಳೆ ಬಂದರೆ ಯಾವುದೇ ಸಮಸ್ಯೆ ಇರುವುದಿಲ್ಲ. ಕೆಆರ್‌ಎಸ್‌ಗೆ ಬಾಗೀನ ಅರ್ಪಿಸಿ ಒಂದು ವರ್ಷ ಕಳೆದಿದ್ದು, ಮಳೆ ಬಂದು ಅಣೆಕಟ್ಟು ತುಂಬಿದಾಗ ಬಾಗೀನ ಅರ್ಪಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕರ್ನಾಟಕ ಮಲ್ಲ

ಸಂಪಾದಕರ ಮಾತು...

ಬುಧವಾರ 01, ಜುಲೈ 2026

ಅಯೋಧ್ಯೆ ಲೂಟಿ ಬಗ್ಗೆ ಸಮಗ್ರ ತನಿಖೆ ಅಗತ್ಯವಾಗಿದೆ

ಅಯೋಧ್ಯೆಯಲ್ಲಿ ನಿರ್ಮಾಣ ಆಗಿರುವ ಬಾಲ ಶ್ರೀ ರಾಮ ಮಂದಿರದ ದೇಣಿಗೆ ಲೂಟಿ ಪ್ರಕರಣ ದೇಶದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದೆ. ರಾಮ ಮಂದಿರ ಪೂರ್ಣ ರೀತಿಯಲ್ಲಿ ನಿರ್ಮಾಣ ಆಗಿ ಇನ್ನೂ ಒಂದು ವರ್ಷ ಕೂಡಾ ಪೂರ್ಣ ಆಗಿಲ್ಲ. 2025ರ ನವಂಬರ್ 25ರಂದು ಅಯೋಧ್ಯೆ ರಾಮ ಮಂದಿರದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಎಂಬ ಸಂಕೇತವಾಗಿ ದೇವಸ್ಥಾನದ ಧ್ವಜಾರೋಹಣ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರೂ ಆ ಶುಭಾವಸರದಲ್ಲಿ ಉಪಸ್ಥಿತರಿದ್ದರು. ಅದರ ಮೊದಲು 2024ರ ಜನವರಿ 22ರಂದು ಅಯೋಧ್ಯೆಯ ಭವ್ಯ ರಾಮ ಮಂದಿರದಲ್ಲಿ ಬಾಲ ರಾಮನ ಪ್ರಾಣ ಪ್ರತಿಷ್ಠೆ ನಡೆಯುವ ಮೂಲಕ ರಾಮ ಮಂದಿರದ ಲೋಕಾರ್ಪಣೆ ನಡೆದಿತ್ತು. ಆ ಶುಭ ಸಂದರ್ಭದಲ್ಲೂ ಪ್ರಧಾನಿ ಮೋದಿ ಅವರು ಉಪಸ್ಥಿತರಿದ್ದು ಬಾಲ ರಾಮನ ಪ್ರಾಣ ಪ್ರತಿಷ್ಠೆಗೆ ಸಾಕ್ಷಿಯಾಗಿದ್ದರು. ಅಯೋಧ್ಯೆಯಲ್ಲಿ ರಾಮ ಮಂದಿರದ ನಿರ್ಮಾಣ ಕಾರ್ಯ 2020ರಲ್ಲಿ ಆರಂಭ ಆಗಿದ್ದು ಮೂರೂವರೆ ವರ್ಷಗಳಲ್ಲಿ ಮಂದಿರದ ನಿರ್ಮಾಣ ಆಗಿ ಪ್ರಾಣ ಪ್ರತಿಷ್ಠೆ ನಡೆದಿದೆ. ಬಾಲ ರಾಮನ ಪ್ರಾಣ ಪ್ರತಿಷ್ಠೆ ಬಳಿಕ ಕಳೆದ ಎರಡೂವರೆ ವರ್ಷಗಳಿಂದ ಬಾಲ ರಾಮನ ದರ್ಶನಕ್ಕೆ ದಿನಂಪ್ರತಿ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಿದ್ದಾರೆ.

ಅಯೋಧ್ಯೆಯ ರಾಮ ಜನ್ಮ ಭೂಮಿ ಭೂ ವಿವಾದಕ್ಕೆ ದೀರ್ಘ ಕಾಲದ ಇತಿಹಾಸ ಇದೆ. ಶ್ರೀ ರಾಮನ ಜನ್ಮ ಭೂಮಿಯಲ್ಲಿ ಬಾಬ್ರಿ ಮಸೀದಿ ನಿರ್ಮಾಣ ಆಗಿದೆ ಎಂಬ ವಿವಾದ ದೇಶದ ನ್ಯಾಯಾಲಯಗಳಲ್ಲಿ ದೀರ್ಘ ವರ್ಷಗಳ ಕಾಲ ವಿಚಾರಣೆಯ ವಿಷಯ ಆಗಿದ್ದು ಎಲ್ಲರಿಗೂ ತಿಳಿದಿರುವ ಸತ್ಯವಾಗಿದೆ. ಬಾಬ್ರಿ ಮಸೀದಿಯನ್ನು ಅಕ್ರಮವಾಗಿ ರಾಮನ ಜನ್ಮ ಭೂಮಿಯಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಮಸೀದಿ ವಿರುದ್ಧ ನೂರಾರು ವರ್ಷಗಳ ಹೋರಾಟ ನಡೆದಿದೆ. ಆ ಹೋರಾಟ ತೀವ್ರ ರೂಪ ಪಡೆದಿದ್ದು ಬಿಜೆಪಿ ಅಧ್ಯಕ್ಷರಾಗಿದ್ದ ಲಾಲ್‌ಕೃಷ್ಣ ಆಡ್ವಾಣಿ ಅವರ ಅಯೋಧ್ಯೆ ರಥ ಯಾತ್ರೆ ಮೂಲಕ. ರಾಮ ಜನ್ಮಭೂಮಿಯಲ್ಲೇ ರಾಮ ಮಂದಿರ ನಿರ್ಮಾಣ ಮಾಡುವುದಾಗಿ ಘೋಷಣೆ ಮಾಡಿಕೊಂಡು ಆಡ್ವಾಣಿ ಅವರು 1990ರ ಸೆಪ್ಟೆಂಬರ್ 25ರಂದು ಗುಜರಾತಿನ ಸೋಮನಾಥ ದೇವಸ್ಥಾನದಿಂದ ರಥ ಯಾತ್ರೆ ಆರಂಭಿಸಿದ್ದರು. ದಿನಕ್ಕೆ 300 ಕಿಲೋ ಮೀಟರ್ ದೂರ ಸಾಗುವ ಮೂಲಕ ಅಕ್ಟೋಬರ್ 30ರಂದು ರಥಯಾತ್ರೆ ಅಯೋಧ್ಯೆಗೆ ತಲುಪುವ ಗುರಿ ಹೊಂದಿತ್ತು. ಆದರೆ ಆಡ್ವಾಣಿ ಅವರ ಅಯೋಧ್ಯೆ ರಥ ಯಾತ್ರೆ ದೇಶದಲ್ಲಿ ಕೋಮು ಆತಂಕ ಸೃಷ್ಟಿ ಮಾಡಿದ ಕಾರಣದಿಂದಾಗಿ ಯಾತ್ರೆ ಬಿಹಾರಕ್ಕೆ ತಲುಪಿದಾಗ ಯಾತ್ರೆಯನ್ನು ತಡೆಯಲು ಪೊಲೀಸರು ಆಡ್ವಾಣಿ ಅವರನ್ನು 2020ರ ಅಕ್ಟೋಬರ್ 23ರಂದು ಬಂಧಿಸಿದ್ದರು. ಆಡ್ವಾಣಿ ಅವರ ಬಂಧನ ವಿರುದ್ಧ ಬಿಜೆಪಿ ಭಾರೀ ಪ್ರತಿಭಟನೆ ನಡೆಸಿದ್ದಲ್ಲದೆ ವಿಶ್ವನಾಥ್ ಪ್ರತಾಪ್ ಸಿಂಗ್ ಅವರ ಸರಕಾರದ ಬೆಂಬಲವನ್ನು ಬಿಜೆಪಿ ಹಿಂದೆ ಪಡೆದ ಪರಿಣಾಮವಾಗಿ ವಿಶ್ವನಾಥ್ ಪ್ರತಾಪ್ ಸಿಂಗ್ ಅವರ ನೇತೃತ್ವದ ರಾಷ್ಟ್ರೀಯ ರಂಗ ಸರಕಾರ ಪತನ ಆಗಿದ್ದು ಇತಿಹಾಸ.

ಆ ಬಳಿಕ ಅಯೋಧ್ಯೆ ರಾಮ ಮಂದಿರ ಚಳುವಳಿ ಅತ್ಯಂತ ತೀವ್ರ ರೂಪ ಪಡೆದು ಬಿಜೆಪಿ ಮತ್ತು ಸಂಘ ಪರಿವಾರಗಳು ವಿವಾದತ್ಮಾಕ ಬಾಬ್ರಿ ಮಸೀದಿಯಲ್ಲಿ ಕರ ಸೇವೆ ನಡೆಸಲು ನ್ಯಾಯಾಂಗದ ಅನುಮತಿ ಪಡೆದು ಕರ ಸೇವೆ ಹಮ್ಮಿಕೊಂಡಾಗ 1992ರ ಡಿಸೆಂಬರ್ 6ರಂದು ಕರಸೇವಕರು ಬಾಬರಿ ಮಸೀದಿಯನ್ನು ಧ್ವಂಸ ಮಾಡಿದ್ದರು. ಅದರ ತಕ್ಷಣವೇ ದೇಶದಾದ್ಯಂತ ಕೋಮು ಗಲಭೆ ನಡೆದು ಹಿಂದೂ ಮತ್ತು ಮುಸ್ಲಿಂ ಸಮುದಾಯದ ಸಾವಿರಾರು ಜನರ ಅಮಾನುಷ ಹತ್ಯೆ ನಡೆದಿತ್ತು. ಅದರ ಜತೆಗೆ ಎರಡು ಸಮುದಾಯಗಳ ನಡುವೆ ದೊಡ್ಡ ಕಂದರ ನಿರ್ಮಾಣ ಆಗಿ ಪರಸ್ಪರ ವಿಶ್ವಾಸ ಅಳಿದು ಹೋಗಲು ಕಾರಣವಾಯಿತು. ಆ ಬಳಿಕ ಅಲಹಾಬಾದ್ ಹೈಕೋರ್ಟ್ ಅಯೋಧ್ಯೆ ಭೂ ವಿವಾದ ಬಗ್ಗೆ ಚಾರಿತ್ರಿಕ ತೀರ್ಪು ನೀಡಿ ವಿವಾದಾತ್ಮಕ 2.77 ಎಕರೆ ಜಾಗವನ್ನು ಮೂರು ಭಾಗವಾಗಿ ಹಂಚಿಕೊಳ್ಳಲು ವಾದಿ ಮತ್ತು ಪ್ರತಿವಾದಿಗಳಿಗೆ ಸಲಹೆ ಮಾಡಿತ್ತು. ಆದರೆ ಆ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಕೆ ಆಗಿ ಅತ್ಯಂತ ಜಟಿಲ ಅಯೋಧ್ಯೆ ಭೂವಿವಾದವನ್ನು ಬಗೆ ಹರಿಸಲು ಸುಪ್ರೀಂಕೋರ್ಟಿನ ಐವರು ನ್ಯಾಯಾಧೀಶರ ಸಂವಿಧಾನ ಪೀಠ ರಚನೆ ಆಗಿತ್ತು.

ಹಾಗೆ ರಚನೆ ಆದ ಸಂವಿಧಾನ ಪೀಠದ ಮುಖ್ಯಸ್ಥರಾಗಿ ಸುಪ್ರೀಂಕೋರ್ಟಿನ ಆಗಿನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ರಂಜನ್ ಗೊಗೋಯ್ ಮತ್ತು ಸದಸ್ಯರಾಗಿ ನ್ಯಾಯಮೂರ್ತಿಗಳಾದ ಶರದ್ ಅರವಿಂದ್ ಬೊಬ್ಡೆ, ಡಿ. ವೈ. ಚಂದ್ರಚೂಡ್, ಅಶೋಕ್ ಭೂಷಣ್ ಮತ್ತು ಎಸ್. ಅಬ್ದುಲ್ ನಜೀರ್ ಇದ್ದರು. ಆ ಸಂವಿಧಾನ ಪೀಠ 2019ರ ನವಂಬರ್ 9ರಂದು ನೀಡಿದ್ದ ಐತಿಹಾಸಿಕ ತೀರ್ಪಲ್ಲಿ ಅಯೋಧ್ಯೆಯ 2.77 ಎಕ್ರೆ ಭೂಪ್ರದೇಶ ರಾಮ ಲಲ್ಲಾನಿಗೆ ಸೇರಿದ್ದು ಎಂದು ಘೋಷಣೆ ಮಾಡಿ ಅಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಅನುಮತಿ ನೀಡಿತ್ತು. ರಾಮ ಮಂದಿರದ ನಿರ್ಮಾಣ ಮತ್ತು ಅದರ ನಿರ್ವಹಣೆಗೆ ಟ್ರಸ್ಟ್ (ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್) ಒಂದನ್ನು ರಚನೆ ಮಾಡಲು ಭಾರತ ಸರಕಾರಕ್ಕೆ ಆದೇಶ ನೀಡಿತ್ತು. ಅಯೋಧ್ಯೆಯಲ್ಲೇ ಪರ್ಯಾಯ ಮಸೀದಿ ನಿರ್ಮಾಣಕ್ಕೆ ಮುಸ್ಲಿಂ ವಕ್ಫ್ ಮಂಡಳಿಗೆ 5 ಎಕ್ರೆ ಭೂಮಿಯನ್ನು ಉತ್ತರಪ್ರದೇಶ ಸರಕಾರ ನೀಡುವಂತೆಯೂ ಸುಪ್ರೀಂ ಕೋರ್ಟು ತೀರ್ಪು ನೀಡಿತ್ತು. ಸಹಜವಾಗಿಯೇ 'ಅಯೋಧ್ಯೆ ರಾಮ ಜನ್ಮ ಭೂಮಿ' ಬಾಬ್ರಿ ಮಸೀದಿ ವಿವಾದಕ್ಕೆ ಕೊನೆ ಹಾಡುವ ಅತ್ಯಂತ ಮಹತ್ತರ ತೀರ್ಪನ್ನು ದೇಶದ ಎಲ್ಲ ಜನರೂ ಮತ-ಧರ್ಮದ ಭೇದವಿಲ್ಲದೆ ಸ್ವಾಗತ ಮಾಡಿದ್ದರು.

ಸುಪ್ರೀಂ ಕೋರ್ಟಿನ ಚಾರಿತ್ರಿಕ ತೀರ್ಪಿನ ಬಳಿಕ ಅಯೋಧ್ಯೆ ರಾಮ ಜನ್ಮ ಭೂಮಿಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ 2020ರ ಆಗಸ್ಟ್ 5ರಂದು ಭೂಮಿ ಪೂಜೆ ನಡೆದಿತ್ತು. ಭೂಮಿ ಪೂಜೆ ಮತ್ತು ಶಂಕು ಸ್ಥಾಪನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ವಿವಿಧ ಧಾರ್ಮಿಕ ವಿಧಿ ವಿಧಾನಗಳ ನಡುವೆ ನೆರವೇರಿಸಿದ್ದರು. ಪ್ರಧಾನಿ ಮೋದಿ ಅವರು ಲೋಕಸಭೆಯಲ್ಲಿ 2020ರ ಫೆಬ್ರವರಿ 5ರಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಘೋಷಣೆ ಮಾಡಿದ್ದರು.15 ಸದಸ್ಯರ ಟ್ರಸ್ಟ್ ರಚನೆ ಘೋಷಣೆ ಮಾಡಿದ್ದ ಪ್ರಧಾನಿ ಮೋದಿ ಅವರು ಟ್ರಸ್ಟಿನ ಅಧ್ಯಕ್ಷರಾಗಿ ಹಿರಿಯ ಧಾರ್ಮಿಕ ನಾಯಕ ಮಹಂತ ನೃತ್ಯ ಗೋಪಾಲದಾಸ್ ಮಹಾರಾಜ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ವಿಶ್ವ ಹಿಂದೂ ಪರಿಷತ್ ಹಿರಿಯ ನಾಯಕ ಚಂಪತ್ ರಾಯ್ ಅವರನ್ನು ನೇಮಕ ಮಾಡಿದ್ದಾಗಿ ಪ್ರಕಟಿಸಿದ್ದರು. ಟ್ರಸ್ಟಿನಲ್ಲಿ 9 ಖಾಯಂ ಟ್ರಸ್ಟಿಗಳಾದರೆ 6 ಟ್ರಸ್ಟಿ ಸದಸ್ಯರು ಸರಕಾರದ ನಾಮ ನಿರ್ದೇಶನ ಸದಸ್ಯರು.

2020ರ ಆಗಸ್ಟ್ 5ರಂದು ನಿರ್ಮಾಣ ಕಾಮಗಾರಿ ಆರಂಭವಾಗಿ 2025ರ ನವಂಬರ್ 25ರಂದು ಪೂರ್ಣಗೊಂಡ ರಾಮ ಮಂದಿರವನ್ನು 1900-2,150 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ ಎಂದು ಅಂದಾಜಿಸಲಾಗಿದೆ. ರಾಮ ಮಂದಿರವನ್ನು ಕಬ್ಬಿಣ ಮತ್ತು ಉಕ್ಕು ಇಲ್ಲದೆ ನಿರ್ಮಾಣ ಮಾಡಲಾಗಿದ್ದು ಮುಂದಿನ 1000 ವರ್ಷಗಳ ತನಕವೂ ಯಾವುದೇ ರೀತಿಯ ಹಾನಿ ಕೂಡಾ ಆಗದ ರೀತಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಾಣ ಮಾಡಲಾಗಿದೆ ಎಂದು ಟ್ರಸ್ಟ್ ಹೇಳಿಕೊಂಡಿದೆ. ಆದರೆ ರಾಮ ಲಲ್ಲಾನ ದರ್ಶನ ಆರಂಭವಾಗಿ ಎರಡೂವರೆ ವರ್ಷ ಆಗುತ್ತಲೇ ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ನಡೆದಿರುವುದು ಬಯಲಿಗೆ ಬರುವ ಮೂಲಕ ಭಾರೀ ವಿವಾದ ತಲೆ ಎತ್ತಿದೆ. ರಾಮನಲ್ಲಿ ಶ್ರದ್ಧೆ ಮತ್ತು ಭಕ್ತಿ ಇಟ್ಟ ಎಲ್ಲರೂ ಅತ್ಯಂತ ಆತಂಕ ಮಾತ್ರವಲ್ಲ ಕೆರಳುವ ಬೆಳವಣಿಗೆ ಇದಾಗಿದೆ. ಇದರಿಂದಾಗಿ ಒಟ್ಟು ಹಗರಣ, ಅವ್ಯವಹಾರ ಬಗ್ಗೆ ಪಾರದರ್ಶಕ ತನಿಖೆಯ ಅಗತ್ಯ ಇದೆ.

ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಮಾಡುವ ಮಟ್ಟಕ್ಕೆ ದೇವಸ್ಥಾನದ ಒಳಗೆ ಅವ್ಯವಹಾರ ನಡೆದಿದೆ ಎಂದರೆ ಅದಕ್ಕೆ ಮಂದಿರದ ಆಡಳಿತದ ಹೊಣೆ ಹೊತ್ತಿರುವ ಟ್ರಸ್ಟ್ ಹೊಣೆಯಾಗಿದೆ. ಟ್ರಸ್ಟಿನ ಸದಸ್ಯರ ಗಮನಕ್ಕೆ ಬಾರದೆ ಅಲ್ಲಿ ದೇಣಿಗೆ ಅಥವಾ ಮಂದಿರದ ಹುಂಡಿಗೆ ಕನ್ನ ಹಾಕುವುದು ಸಾಧ್ಯವಿಲ್ಲ. ಮಂದಿರದ ಆಡಳಿತ ನಿರ್ವಹಣೆಯಲ್ಲಿ ಟ್ರಸ್ಟ್ ನಿರ್ಲಕ್ಷ್ಯ ವಹಿಸಿದೆ ಅಥವಾ ಟ್ರಸ್ಟಿನ ಸದಸ್ಯರನ್ನು ಕೂಡಾ ಸೇರಿಸಿಕೊಂಡೇ ದೇಣಿಗೆ ಲೂಟಿ ಮಾಡುವ ಜಾಲ ಕಳೆದ ಕನಿಷ್ಠ ಎರಡು ವರ್ಷಗಳಿಂದ ಕಾರ್ಯ ಎಸಗುತ್ತಿದೆ ಎಂದೇ ಶಂಕಿಸಬೇಕಾಗುತ್ತದೆ. ಟ್ರಸ್ಟಿನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿಗೆ ಮಂದಿರದ ದೈನಂದಿನ ಚಟುವಟಿಕೆಯ ಮಾಹಿತಿ ಇದ್ದೇ ಇರಬೇಕು. ಕನಿಷ್ಠ 70 ಬಾರಿ ಹುಂಡಿ ಹಣ ಲೂಟಿ ಆಗಿರುವುದನ್ನು ವಿಶೇಷ ತನಿಖಾ ತಂಡ ಸಿಸಿಟಿವಿ ದೃಶ್ಯದಿಂದ ಪತ್ತೆ ಹಚ್ಚಿದೆ ಎಂಬ ಅಂಶವನ್ನು ಗಮನಿಸಿದರೆ ಲೂಟಿ ಜಾಲದ ಹಿಂದೆ ಕೇವಲ 8 ಸಿಬ್ಬಂದಿ ಮಾತ್ರ ಇರುವುದಲ್ಲ ಎನ್ನುವುದು ಖಚಿತ ಆಗುತಿದ್ದು ರಾಮ ಮಂದಿರದ ಹಣ ಲೂಟಿ ಮೂಲವನ್ನು ಪತ್ತೆ ಹಚ್ಚುವ ಜತೆಗೆ ರಾಮ ಮಂದಿರದ ಹೆಸರಲ್ಲಿ ಸಂಗ್ರಹ ಆದ ಎಲ್ಲಾ ದೇಣಿಗೆಯ ಮಾಹಿತಿಯನ್ನೂ ಪತ್ತೆ ಹಚ್ಚುವ ಉನ್ನತ ಮಟ್ಟದ ತನಿಖೆಯ ಅಗತ್ಯ ಇದೆ.

ಮಹಾರಾಷ್ಟ್ರದಲ್ಲಿ ನಡೆದ ಗುಂಡಿನ ದಾಳಿ ಘಟನೆ ಹಿಂದೆ ವಿದೇಶದಲ್ಲಿರುವ ಸುಲಿಗೆ ಜಾಲದ ಕೈವಾಡ: ಫಡ್ನವೀಸ್



ಮುಂಬಯಿ, ಜೂ.30 - ಮಹಾರಾಷ್ಟ್ರದಲ್ಲಿ ನಡೆದ ಗುಂಡಿನ ದಾಳಿ ಪ್ರಕರಣಗಳು ಮತ್ತು ಅವುಗಳಲ್ಲಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನ ಪಾತ್ರ ಕುರಿತಂತೆ ವಿರೋಧ ಪಕ್ಷಗಳು ತನಿಖೆಗಾಗಿ ಒತ್ತಾಯಿಸಿದ ಬಳಿಕ, ಈ ಘಟನೆಯ ಹಿಂದೆ ವಿದೇಶದಿಂದ ಕಾರ್ಯನಿರ್ವಹಿಸುತ್ತಿರುವ ಸಂಘಟಿತ ಹಫ್ತಾ ಜಾಲದ ಕೈವಾಡವಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ರಾಜ್ಯ ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ಫಡ್ನವೀಸ್, ವಿದೇಶಗಳಿಂದ ಕಾರ್ಯನಿರ್ವಹಿಸುತ್ತಿರುವ ಕ್ರಿಮಿನಲ್ ಜಾಲದ ಭಾಗವಾಗಿರುವ ಮತ್ತು ಬೆದರಿಕೆಗಳನ್ನು ಸಂಘಟಿಸಲು ವಿಪಿಎನ್‌ಗಳು ಮತ್ತು ವರ್ಚುವಲ್ ಸಂಖ್ಯೆಗಳನ್ನು ಬಳಸುತ್ತಿರುವ ವ್ಯಕ್ತಿಗಳನ್ನು ಮರಳಿ ಕರೆತರಲು ಕೇಂದ್ರವು ಪ್ರಯತ್ನಿಸುತ್ತಿದೆ ಎಂದು ಹೇಳಿದರು. ರಾಜ್ಯದಲ್ಲಿ ಇತ್ತೀಚೆಗೆ ನಡೆದ ಗುಂಡಿನ ದಾಳಿಯ ಘಟನೆಗಳ ಕುರಿತು ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸುತ್ತಿದ್ದರು.

'ಅವರು ಹಲವಾರು ಜನರನ್ನು ಬೆದರಿಸುತ್ತಾರೆ. ಯಾರಾದರೂ ಹಣ ನೀಡಲು ನಿರಾಕರಿಸಿದರೆ, ಸ್ಥಳೀಯ ಅಪರಾಧಿಗಳಿಗೆ ಆ ವ್ಯಕ್ತಿಯ ಮನೆ ಅಥವಾ ಅಂಗಡಿಯ ಹೊರಗೆ ಗುಂಡು ಹಾರಿಸಲು ಹೇಳಿಕೊಳ್ಳುತ್ತಾರೆ. ಜನರನ್ನು ಭಯಭೀತಗೊಳಿಸಿ ಸುಲಿಗೆ ಹಣ ಪಾವತಿಸುವುದು ಅವರ ಉದ್ದೇಶ. ಇವರು ಹೆಚ್ಚು ಪ್ರಭಾವಶಾಲಿ ವ್ಯಕ್ತಿಗಳಲ್ಲ. ಅವರು ವಿದೇಶದಲ್ಲಿ ಕುಳಿತು ಭಯ ಹುಟ್ಟಿಸುವ ಮೂಲಕ ಹಣ ಸುಲಿಗೆ ಮಾಡಲು ಪ್ರಯತ್ನಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದರು.

ಇತ್ತೀಚಿನ ಗುಂಡಿನ ದಾಳಿ ಘಟನೆಗಳ ತನಿಖೆಯಲ್ಲಿ ಭಾರತದ ಹೊರಗಿನಿಂದ ಕಳುಹಿಸಲಾದ ಹಣವನ್ನು ಬಳಸಿಕೊಂಡು ಶೂಟರ್‌ಗಳನ್ನು ನೇಮಿಸಿಕೊಳ್ಳಲಾಗಿದೆ ಎಂದು ನಾನು ದೃಢಪಡಿಸಿದ್ದೇನೆ.ಸರಕಾರವು ಇದರಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಗುರುತಿಸಿ ಕ್ರಮ ಕೈಗೊಳ್ಳುತ್ತದೆ ಎಂದು ಅವರು ಸದನಕ್ಕೆ ಭರವಸೆ ನೀಡಿದರು.

ಲಾರೆನ್ಸ್ ಬಿಷ್ಣೋಯ್ ಮತ್ತು ರೋಹಿತ್ ಗೋದಾರ ನಡುವೆ ಪೈಪೋಟಿಯೂ ಇದೆ, ಇಬ್ಬರೂ ಪ್ರಾಬಲ್ಯ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ನಾವು ಅವರನ್ನು ಕೂಡ ಪತ್ತೆಹಚ್ಚುತ್ತೇವೆ. ಈ ಸುಲಿಗೆ ಗ್ಯಾಂಗ್‌ಗಳು ಮತ್ತು ಸಂಘಟಿತ ಅಪರಾಧ ಸಿಂಡಿಕೇಟ್‌ಗಳನ್ನು ಸಂಪೂರ್ಣವಾಗಿ ಕಿತ್ತುಹಾಕಲಾಗುವುದು ಎಂದು ಫಡ್ನವೀಸ್ ಸ್ಪಷ್ಟಪಡಿಸಿದರು.

ಹಫ್ತಾ ಬೆದರಿಕೆಗಳನ್ನು ಸ್ವೀಕರಿಸುತ್ತಿರುವ ನಾಗರಿಕರು ಭಯಭೀತರಾಗಬಾರದು. ಅಂತಹ ಗ್ಯಾಂಗ್‌ಗಳನ್ನು ಸೋಲಿಸಲು ಮೊದಲು ಭಯವನ್ನು ಮುರಿಯುವ ಅಗತ್ಯವಿದೆ ಎಂದು ಅವರು ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ವಡೆಟ್ಟಿವಾರ್, ದಾಳಿಯ ಹಿಂದಿನ ಪಿತೂರಿಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದರಲ್ಲದೆ,ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಪಾತ್ರವಿದ್ದರೆ ಅದನ್ನು ತನಿಖೆ ಮಾಡಬೇಕು ಎಂದು ತಿಳಿಸಿದರು.

ಗ್ಯಾಂಗ್‌ಗಳ ಪೈಪೋಟಿಯಿಂದಾಗಿ ಅಮಾಯಕ ಜನರು ಪ್ರಾಣ ಕಳೆದುಕೊಳ್ಳಬಾರದು ಮತ್ತು ಸರಕಾರವು ಅಂತಹ ಅಪರಾಧಗಳ ಹಿಂದಿನ ಜಾಲಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುತ್ತದೆಯೇ ಎಂದು ಅವರು ಪ್ರಶ್ನಿಸಿದರು.ಬೆದರಿಕೆಯಲ್ಲಿರುವ ಜನರಿಗೆ ಪದೇ ಪದೇ ಪೊಲೀಸ್ ರಕ್ಷಣೆ ನೀಡುವುದರಿಂದ ಪಡೆ ಮತ್ತು ಸಾರ್ವಜನಿಕ ಸಂಪನ್ಮೂಲಗಳ ಮೇಲೆ ಹೆಚ್ಚುವರಿ ಹೊರೆ ಬೀಳುತ್ತಿದೆ ಎಂದ ಕಾಂಗ್ರೆಸ್ ನಾಯಕ, ಕೇವಲ ಭದ್ರತೆಯನ್ನು ಒದಗಿಸುವ ಬದಲು ಸಮಸ್ಯೆಯ ಮೂಲಕೆ ಹೋಗಬೇಕ್ಕು ಎಂದು ಸರಕಾರವನ್ನು ಒತ್ತಾಯಿಸಿದರು.

ಉದ್ಯಮಿಗಳಿಂದ ಲಕ್ಷಾಂತರ ರೂ.ಗಳನ್ನು ಸುಲಿಗೆ ಮಾಡುವ ಮತ್ತು ಭಯವನ್ನುಹರಡಲುಗುಂಡಿನಘಟನೆಗಳನ್ನುಬಳಸುವಸಂಘಟಿತಗ್ಯಾಂಗ್‌ಗಳನ್ನು ನಿರ್ಮೂಲನೆ ಮಾಡಲು ಸರಕಾರವು ಮೀಸಲಾದ ತಂಡ ಅಥವಾ ಕಾರ್ಯಪಡೆಯನ್ನು ರಚಿಸುತ್ತದೆಯೇ ಎಂದು ವಿರೋಧ ಪಕ್ಷದ ಶಾಸಕ ಶೇಖ್ ಕೇಳಿದರು.

ಸರಕಾರ ಈಗಾಗಲೇ ಕ್ರಮ ಕೈಗೊಳ್ಳುತ್ತಿದೆ ಮತ್ತು ಅಗತ್ಯವಿರುವಲ್ಲೆಲ್ಲಾ ತನ್ನ ಪ್ರಯತ್ನಗಳನ್ನು ತೀವ್ರಗೊಳಿಸುವುದಾಗಿ ಹೇಳಿದ ಫಡ್ನವೀಸ್,ಅಪರಾಧ ಜಾಲಗಳನ್ನು ನಿರ್ದೇಶಿಸುವ ಅನೇಕರು ವಿದೇಶದಿಂದ ಕಾರ್ಯನಿರ್ವಹಿಸುತ್ತಿರುವುದರಿಂದ ಈ ವಿಷಯವನ್ನು ಕೇಂದ್ರದೊಂದಿಗೆ ಕೂಡ ಪ್ರಸ್ತಾವಿಸಲಾಗಿದೆ ಎಂದು ಹೇಳಿದರು.

ನಾವು ಕೇಂದ್ರ ಸರಕಾರಕ್ಕೆ ಮಾಹಿತಿ ನೀಡಿದ್ದೇವೆ, ವಿದೇಶಗಳಿಂದ ಈ ಕ್ರಿಮಿನಲ್ ಜಾಲಗಳನ್ನು ನಿರ್ವಹಿಸುತ್ತಿರುವವರನ್ನು ಮರಳಿ ಕರೆತರಲು ಪ್ರಯತ್ನಿಸುತ್ತಿದೆ. ಅವರ ವಿರುದ್ಧ ಸಂಪೂರ್ಣ ಕ್ರಮ ಕೈಗೊಳ್ಳುವುದನ್ನು ನಾವು ಖಚಿತಪಡಿಸುತ್ತೇವೆ ಎಂದು ಅವರು ತಿಳಿಸಿದರು.ಇದಕ್ಕೂ ಮೊದಲು, ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ಗೆ ಸಂಬಂಧಿಸಿದ ಸುಲಿಗೆ, ಕೊಲೆ ಬೆದರಿಕೆ ಮತ್ತು ಗುಂಡು ಹಾರಿಸುವ ಘಟನೆಗಳು ರಾಜ್ಯದಲ್ಲಿ ಹೆಚ್ಚುತ್ತಿವೆ ಎಂದ ವಡೆಟ್ಟಿವಾರ್, ಇದು ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತದೆ ಎಂದರು.

ಪಿಂಪ್ರಿ-ಚಿಂಚ್‌ವಾಡ್‌ನಲ್ಲಿ ಪೀಠೋಪಕರಣ ವ್ಯಾಪಾರಿಯ ಅಂಗಡಿಯ ಮೇಲೆ ಇತ್ತೀಚೆಗೆ ನಡೆದ ಗುಂಡಿನ ದಾಳಿ ಘಟನೆಯನ್ನು ಉಲ್ಲೇಖಿಸಿದ ಅವರು, ಬಿಷ್ಣೋಯ್ ಗ್ಯಾಂಗ್ ಈ ದಾಳಿಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ ಎಂದು ಹೇಳಿಕೊಂಡರು. ಬಿಷ್ಣೋಯ್‌ನನ್ನು ಗುಜರಾತ್ ಜೈಲಿನಲ್ಲಿ ಇರಿಸಲಾಗಿದ್ದರೂ ಮಹಾರಾಷ್ಟ್ರದಲ್ಲಿ ಗ್ಯಾಂಗ್ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂದು ಕೇಳಿದ ಕಾಂಗ್ರೆಸ್ ನಾಯಕ, ಗ್ಯಾಂಗ್‌ನ ಜಾಲವನ್ನು ನಾಶಮಾಡಲು ಪೊಲೀಸರು ತೆಗೆದುಕೊಂಡ ಕ್ರಮಗಳ ವಿವರಗಳಿಗಾಗಿವ ಕೇಳಿದರು.

ಪಿಂಪ್ರಿ-ಚಿಂಚ್‌ವಾಡ್ ಪ್ರಕರಣದ 12 ಆರೋಪಿಗಳಲ್ಲಿ ಕೇವಲ ನಾಲ್ವರನ್ನು ಮಾತ್ರ ಬಂಧಿಸಲಾಗಿದೆ, ಆದರೆ 8 ಮಂದಿ ಘಟನೆಯ ನಂತರ ಒಂದು ತಿಂಗಳಿಗೂ ಹೆಚ್ಚು ಕಾಲ ತಲೆಮರೆಸಿಕೊಂಡಿದ್ದಾರೆ, ಇದು ತನಿಖೆಯ ವೈಫಲ್ಯ ಎಂದು ವಡೆಟ್ಟಿವಾರ್ ಆರೋಪಿಸಿದರು. ಸಾರ್ವಜನಿಕ ವ್ಯಕ್ತಿಗಳಿಗೆ ಬೆದರಿಕೆಗಳು, ಮಾಜಿ ಸಚಿವರ ಹತ್ಯೆ, ವ್ಯಾಪಾರಿಗಳ ಮೇಲಿನ ದಾಳಿ ಮತ್ತು ಇತರ ಘಟನೆಗಳು ಗ್ಯಾಂಗ್‌ನ ಹೆಚ್ಚುತ್ತಿರುವ ಪ್ರಭಾವವನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ಹೇಳಿದರು.

ಮಹಾರಾಷ್ಟ್ರ ಸರಕಾರದ ಸಾಲ ಮನ್ನಾ 'ಕಣ್ಣೊರೆಸುವ' ಕೆಲಸ; ಕಾಂಗ್ರೆಸ್ ಆರೋಪ

ಮುಂಬಯಿ, ಜೂ. 30- ಬಿಜೆಪಿ ನೇತೃತ್ವದ ಮಹಾಯುತಿ ಸರಕಾರದ 36,500 ಕೋಟಿ ರೂ. ಕೃಷಿ ಸಾಲ ಮನ್ನಾ 'ಕಣ್ಣೊರೆಸುವ' ಕೆಲಸ ಎಂದು ಆರೋಪಿಸಿದ ಮಹಾರಾಷ್ಟ್ರ ಕಾಂಗ್ರೆಸ್, ಶಾಸಕಾಂಗದಲ್ಲಿ ಮಂಡಿಸಲಾದ ಪೂರಕ ಬೇಡಿಕೆಗಳು ಈ ಯೋಜನೆಗೆ ಕೇವಲ 20,000 ಕೋಟಿ ರೂ.ಗಳನ್ನು ಮಾತ್ರ ಮೀಸಲಿಟ್ಟಿವೆ ಎಂದು ಬೆಟ್ಟು ಮಾಡಿದೆ.

ವಿಧಾನಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್, ಸರಕಾರವು ಸುಮಾರು 16,000 ಕೋಟಿ ರೂ.ಗಳ ಉಳಿದ ಅಂತರವನ್ನು ಹೇಗೆ ತುಂಬಲು ಯೋಜಿಸಿದೆ ಎಂದು ಪ್ರಶ್ನಿಸಿದರು.

ಸರಕಾರವು ಸಂಪೂರ್ಣ ಸಾಲ ಮನ್ನಾ ಮೊತ್ತವನ್ನು ಒಂದು ಬಾರಿ ಇತ್ಯರ್ಥದಲ್ಲಿ ಬ್ಯಾಂಕ್‌ಗಳಿಗೆ ವರ್ಗಾಯಿಸುವುದಾಗಿ ಹೇಳಿದೆ. ಉಳಿದ 16,000 ಕೋಟಿ ರೂ. ಗಳನ್ನು ಎಲ್ಲಿಂದ ಸಂಗ್ರಹಿಸುತ್ತದೆ? ಇದರರ್ಥ ಘೋಷಣೆ ಕೇವಲ ಕಣ್ಣಿಗೆ ಕಟ್ಟುವಂತಿದೆ. ಫಲಾನುಭವಿಗಳ ಅಂಕಿಅಂಶಗಳನ್ನು ಉಬ್ಬಿಸಲಾಗಿದೆ, ಮತ್ತು ನಾವು ನಿನ್ನೆ ವಿಧಾನಸಭೆಯಲ್ಲಿ ಇದನ್ನು ಬಹಿರಂಗಪಡಿಸಿದ್ದೇವೆ ಎಂದು ಅವರು ಹೇಳಿದರು.

ಜೂ.2 ರಂದು ಮಹಾರಾಷ್ಟ್ರ ಸಚಿವ ಸಂಪುಟವು 'ಪುಣ್ಯಶ್ಲೋಕ್ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಕರ್ಜಾ-ಮುಕ್ತಿ ಯೋಜನೆ'ಯನ್ನು ಅನುಮೋದಿಸಿತು, ಇದು ಸುಮಾರು 56 ಲಕ್ಷ ಕೃಷಿಕರಿಗೆ ಪ್ರಯೋಜನವನ್ನು ನೀಡುವ ನಿರೀಕ್ಷೆಯಿರುವ 36,585 ಕೋಟಿ ರೂ.ಗಳ ಕೃಷಿ ಸಾಲ ಮನ್ನಾ ಯೋಜನೆಯಾಗಿದೆ.

56 ಲಕ್ಷ ರೈತರು ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತಾರೆ ಎಂಬ ಸರಕಾರದ ಹೇಳಿಕೆಯನ್ನು ವಡೆಟ್ಟಿವಾರ್ ಪ್ರಶ್ನಿಸಿದರು.

56 ಸಂಖ್ಯೆ ಪ್ರಸಿದ್ಧವಾಗಿದೆ, ಮತ್ತು ಅದು ಯಾರ ಎದೆಯ ಅಳತೆಯನ್ನು ಸೂಚಿಸುತ್ತದೆ ಎಂದು ಎಲ್ಲರಿಗೂ ತಿಳಿದಿದೆ. ಫಲಾನುಭವಿಗಳ ನಿಜವಾದ ಸಂಖ್ಯೆ 12 ಲಕ್ಷಕ್ಕಿಂತ ಹೆಚ್ಚಿಲ್ಲ. ಅಂತಿಮ ಅಂಕಿಅಂಶಗಳು ಹೊರಬಂದ ಬಳಿಕ ವೆಚ್ಚವು 12,000 ಕೋಟಿ ರೂ.ಗಳನ್ನು ಮೀರುವುದಿಲ್ಲ ಎಂದು ಅವರು ಆರೋಪಿಸಿದರು.

ಖಾರಿಫ್ ಬಿತ್ತನೆ ಋತು ಈಗಾಗಲೇ ಆರಂಭವಾಗಿದ್ದು, ರೈತರು ಭರವಸೆ ನೀಡಿದ ಸಾಲ ಮನ್ನಾಕ್ಕಾಗಿ ಕಾಯುತ್ತಿದ್ದಾರೆ. ಈ ಯೋಜನೆಯು ಅವರಿಗೆ ನಿಜವಾದ ಪರಿಹಾರವನ್ನು ನೀಡುವಲ್ಲಿ ವಿಫಲವಾಗಿದೆ ಎಂದು ಅವರು ತಿಳಿಸಿದರು.

ಈ ಮಧ್ಯೆ ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ಕಳ್ಳತನ ಆರೋಪಕ್ಕೆ ಸಂಬಂಧಿಸಿ ವಡೆಟ್ಟಿವಾರ್, ಕಾಂಗ್ರೆಸ್ ಶಾಸಕ ವಿಕಾಸ್ ಠಾಕ್ರೆ, ಶಿವಸೇನೆ (ಯುಬಿಟಿ) ಎಂಎಲ್‌ಸಿ ಅಂಬಾದಾಸ್ ದಾನ್ವೆ ಮತ್ತು ಶಾಸಕ ಸಿದ್ಧಾರ್ಥ್ ಖರತ್ ಸೇರಿದಂತೆ ವಿರೋಧ ಪಕ್ಷದ ನಾಯಕರು ವಿಧಾನ ಭವನದ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಆಪಾದಿತ ಕಳ್ಳತನವನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು ಮತ್ತು 'ಭಕ್ತರು ರಾಮ ಮಂದಿರವನ್ನು ನಿರ್ಮಿಸಿದರು; ಬಿಜೆಪಿ ದೇಣಿಗೆ ಪೆಟ್ಟಿಗೆಯನ್ನು ಲೂಟಿ ಮಾಡಿದೆ' ಎಂದು ಬರೆದ ಬ್ಯಾನರ್‌ನ್ನು ಪ್ರದರ್ಶಿಸಿದರು.

ಪುಣೆ ಕೊಲೆ ಪ್ರಕರಣ:ಸಿಯಾಳ ಅನೈತಿಕ ಸಂಬಂಧದ ಬಗ್ಗೆ ಅನುಮಾನ ಹೊಂದಿದ್ದ ಕೇತನ್ ಅಗರ್ವಾಲ್

ಪುಣೆ, ಜೂ.30 - ಕೇತನ್ ಅಗರ್ವಾಲ್ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರರಿಗೆ ಆತ ತನ್ನ ನಿಶ್ಚಿತಾರ್ಥದವಧು ಬೇರೊಬ್ಬರೊಂದಿಗೆಸಂಬಂಧ ಹೊಂದಿರುವಬಗ್ಗೆ ತನ್ನ ಕುಟುಂಬದ ಬಳಿ ಅನುಮಾನ ವ್ಯಕ್ತಪಡಿಸಿರುವ ಬಗ್ಗೆ ತಿಳಿದುಬಂದಿದ್ದು, ತನ್ನ ವಿವಾಹವನ್ನು ನಿಶ್ಚಯಿಸುವ ಮೊದಲು ಆಕೆಯ ಹಿನ್ನೆಲೆಯನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿದೆಯೇ ಎಂದು ಆತ ತನ್ನ ಕುಟುಂಬ ಸದಸ್ಯರನ್ನು ಕೇಳಿದ್ದಾಗಿ ತಿಳಿದುಬಂದಿದೆ.

ಪುಣೆ ಮೂಲದ ರಿಯಲ್ ಎಸ್ಟೇಟ್ ಏಜೆಂಟ್ ಕೇತನ್‌ನನ್ನು ಜೂ.18 ರಂದು ಜಿಲ್ಲೆಯ ಲೋಹಗಡ್ ಕೋಟೆಯಲ್ಲಿ ಆತ ನಿಶ್ಚಿತಾರ್ಥದ ವಧು ಸಿಯಾ ಗೋಯಲ್ (20) ಮತ್ತು ಆಕೆಯ ಪ್ರಿಯಕರ ಎಂದು ಹೇಳಲಾದ ಚೇತನ್ ಚೌಧರಿ (22) ಬಂಡೆಯಿಂದ ಕೆಳಗೆ ತಳ್ಳಿ ಕೊಲೆ ಮಾಡಿದ ಬಗ್ಗೆ ಆರೋಪಿಸಲಾಗಿದ್ದು, ಕೇತನ್ ಮತ್ತು ಸಿಯಾ ಈ ವರ್ಷದ ನವೆಂಬರ್‌ನಲ್ಲಿ ವಿವಾಹವಾಗಲು ಸಿದ್ಧರಾಗಿದ್ದರು.

ಕೊಲೆ ಪ್ರಕರಣದ ಬಳಿಕ ಆರೋಪಿಗಳಾದ ಸಿಯಾ ಮತ್ತು ಚೇತನ್ ಇಬ್ಬರನ್ನೂ ಬಂಧಿಸಲಾಗಿದ್ದು, ಜು.3 ರವರೆಗೆ ಪೊಲೀಸ್ ಕಸ್ಟಡಿಯಲ್ಲಿ ಇರಿಸಲಾಗಿದೆ. ಕೇತನ ತಂದೆ ವಿಶಾಲ್ ಅಗರ್ವಾಲ್ ನೀಡಿದ ದೂರಿನ ಪ್ರಕಾರ, ತನ್ನ ಮಗ ಸಿಯಾಗೆ ಚೇತನ್ ಚೌಧರಿಯೊಂದಿಗಿನ ನಿಕಟತೆಯ ಬಗ್ಗೆ ಪದೇ ಪದೇ ಕಳವಳ ವ್ಯಕ್ತಪಡಿಸುತ್ತಿದ್ದ ಮತ್ತು ತನ್ನ ಸಂಭಾಷಣೆಯಲ್ಲಿ ಅವರ ಹೆಸರನ್ನು ಆಗಾಗ್ಗೆ ಉಲ್ಲೇಖಿಸುತ್ತಿದ್ದ ಎಂದು ಹೇಳಿದ್ದಾಗಿ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಗೋಯಲ್ ಈ ಹಿಂದೆ ಇಂಡೋನೇಷ್ಯಾದ ಬಾಲಿಗೆ ತಮ್ಮ ವಿವಾಹಪೂರ್ವ ಪ್ರವಾಸವನ್ನು ರದ್ದು ಮಾಡಿದ್ದರು.

ಜೂ. 6 ರಂದು ಬಾಲಿ ಪ್ರವಾಸ ರದ್ದಾದ ಬಳಿಕ ಕೇತನ್ ತನ್ನ ತಂದೆಯನ್ನು ಸಂಪರ್ಕಿಸಿ, ಸಿಯಾ ಸಣ್ಣ ವಿಷಯಗಳಿಗೆ ಜಗಳವಾಡುತ್ತಿದ್ದಾರೆ ಎಂದು ದೂರು ನೀಡಿದ್ದ. ಆಕೆ ಚಿಕ್ಕವಳಾಗಿರುವುದರಿಂದ, ಆ ರೀತಿ ವರ್ತಿಸುತ್ತಿರಬಹುದು ಎಂದು ಆತ ತಂದೆ ಹೇಳಿದ್ದಲ್ಲದೆ ಆಕೆಗೆ ಸಲಹೆ ನೀಡುವುದಾಗಿ ಭರವಸೆ ನೀಡಿದರು ಎಂದು ಪೊಲೀಸ್ ಅಧಿಕಾರಿ ಹೇಳಿದರು. ಜೂ.14 ರಂದು ಸಿಯಾ ಮತ್ತು ಕೇತನ್ ಲೋಹಗಡ್ ಕೋಟೆಯ ಅದೇ ಸ್ಥಳಕ್ಕೆ ಹೋಗಿದ್ದರು, ಅಲ್ಲಿಂದ ನಾಲ್ಕು ದಿನಗಳ ಬಳಿಕ ಆತನನ್ನು ಕೊಲ್ಲಲಾಯಿತು. ಆ ದಿನ (ಜೂ.14) ಕೂಡ ಆಕೆ ಕೇತನ್‌ನನ್ನು ಬಂಡೆಯಿಂದ ತಳ್ಳಲು ಪ್ರಯತ್ನಿಸಿದ್ದಳು ಎಂದು ಆರೋಪಿಸಲಾಗಿದೆ. ಆದರೆ, ಆತ ಒಂದು ಪೊದೆಯನ್ನು ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾದ.ಕೇತನ್ ತನ್ನನ್ನು ಏಕೆ ತಳ್ಳಲಾಯಿತು ಎಂದು ಆಶ್ಚರ್ಯಪಟ್ಟಾಗ, ಆಕೆ ಹಾವಿನ ಬಗ್ಗೆ ಸುಳ್ಳು ಎಚ್ಚರಿಕೆ ನೀಡಿ, ತಾನು ಆತನನ್ನು ರಕ್ಷಿಸಿದ್ದೇನೆ ಎಂದು ತೋರಿಸಲು ಪ್ರಯತ್ನಿಸಿದ್ದಾಗಿ ಪೊಲೀಸರು ಈ ಹಿಂದೆ ಹೇಳಿದರು.

ಜೂ.14 ರಂದು ಲೋಹ್‌ಗಡ್ ಕೋಟೆಯಿಂದ ಹಿಂದಿರುಗಿದ ಬಳಿಕ ಕೇತನ್ ಮತ್ತೊಮ್ಮೆ ತನ್ನ ತಂದೆಯನ್ನು ಮದುವೆಯನ್ನು ನಿಗದಿಪಡಿಸುವ ಮೊದಲು ಸಿಯಾ ಬಗ್ಗೆ ಸಂಪೂರ್ಣ ವಿಚಾರಣೆ ನಡೆಸಿದ್ದೀರಾ ಎಂದು ಕೇಳಿದ್ದ. ಕೇತನ್ ತನ್ನ ತಂದೆಗೆ ತಾನು ಕರೆಮಾಡಿದಾಗಲೆಲ್ಲಾ ಆಕೆಯ ಫೋನ್ ಆಗಾಗ್ಗೆ ಕಾರ್ಯನಿರತವಾಗಿರುತ್ತದೆ ಮತ್ತು ಸಂಭಾಷಣೆಯ ಸಮಯದಲ್ಲಿ ಆಕೆ ಆಗಾಗ್ಗೆ ಚೌಧರಿಯ ಬಗ್ಗೆ ಉಲ್ಲೇಖಿಸುತ್ತಿದ್ದಳು ಹೇಳಿದ್ದಾಗಿ ಪೊಲೀಸ್ ಅಧಿಕಾರಿ ತಿಳಿಸಿದರು. ಸಿಯಾ ಯಾರೊಂದಿಗಾದರೂ ಸಂಬಂಧ ಹೊಂದಿದ್ದಾಳೆ ಎಂದು ಕೇತನ್ ಅನುಮಾನ ವ್ಯಕ್ತಪಡಿಸಿದ್ದ. ಆದಾಗ್ಯೂ, ಕೇತನ್ ಕುಟುಂಬವು ನಮ್ಮ ಕುಟುಂಬಕ್ಕೆ ಸಂಬಂಧಿಸಿರುವುದರಿಂದ ಚಿಂತಿಸಲು ಏನೂ ಇಲ್ಲ ಎಂದು ಆತನಿಗೆ ಭರವಸೆ ನೀಡಿತ್ತು ಎಂದು ಅವರು ಹೇಳಿದರು. ಪೊಲೀಸರ ಪ್ರಕಾರ, ಕೇತನ್ ಮತ್ತು ಸಿಯಾ ಅವರ ಹೊಂದಾಣಿಕೆಯನ್ನು ಅಗರ್ವಾಲ್‌ಗಳು ಮತ್ತು ಗೋಯಲ್‌ಗಳ ಸಾಮಾನ್ಯ ಸಂಬಂಧಿಯ ಮೂಲಕ ಮಾಡಲಾಗಿತ್ತು ಮತ್ತು ಈ ವರ್ಷದ ಫೆಬ್ರವರಿಯಲ್ಲಿ ಪುಣೆಯ ಐಷಾರಾಮಿ ಹೋಟೆಲ್‌ನಲ್ಲಿ ನಿಶ್ಚಿತಾರ್ಥ ನಡೆದಿತ್ತು.

ನಿರಂಕಾರಿ ಮಿಷನ್ ವತಿಯಿಂದ ಕೋಪರ್‌ಖೈರ್ನೆಯಲ್ಲಿ ರಕ್ತದಾನ ಶಿಬಿರ



ನವಿಮುಂಬಯಿ, ಜೂ.30 - ಸದ್ಗುರು ಮಾತಾ ಸುದೀಕ್ಷಾ ಜಿ ಮಹಾರಾಜ್ ಮತ್ತು ನಿರಂಕಾರಿರಾಜಪಿತಾ ಜಿ ಅವರ ದೈವಿಕ ಮಾರ್ಗದರ್ಶನ ಮತ್ತು ಆಶೀರ್ವಾದದೊಂದಿಗೆ, ಸಂತ ನಿರಂಕಾರಿಮಿಷನ್‌ನ ಸಾಮಾಜಿಕ ಅಂಗವಾದ ಸಂತ ನಿರಂಕಾರಿ ಚಾರಿಟೇಬಲ್ ಫೌಂಡೇಶನ್, ಜೂ.28ರಂದು ರವಿವಾರ ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 1:00 ರವರೆಗೆ ನವಿಮುಂಬಯಿಯ ಕೋಪರ್‌ಖೈರ್ನೆ ಯಲ್ಲಿರುವ ಜ್ಞಾನ ವಿಕಾಸ ಸಂಸ್ಥೆ ಕಾಲೇಜು ಮೈದಾನದಲ್ಲಿ ಉತ್ಸಾಹ ಮತ್ತು ನಿಸ್ವಾರ್ಥಸೇವೆಯೊಂದಿಗೆ ರಕ್ತದಾನ ಶಿಬಿರವನ್ನು ಆಯೋಜಿಸಿತು. ಸಂತ ನಿರಂಕಾರಿ ಬ್ಲಡ್‌ಬ್ಯಾಂಕ್‌ನವರು 109ಯೂನಿಟ್ ರಕ್ತವನ್ನು ಸಂಗ್ರಹಿಸಿದರು.

ಮುಂಬಯಿನಲ್ಲಿ ಪ್ರಚಾರ ಪ್ರವಾಸದಲ್ಲಿದ್ದ ಜಾರ್ಖಂಡ್‌ನ ರಾಂಚಿಯ ಬ್ರಹ್ಮಜ್ಞಾನ ಪ್ರಚಾರಕರಾದ ವಿಜಯ್ ಕುಮಾರ್ ಯಾದವ್ ಅವರ ಸಮ್ಮುಖದಲ್ಲಿ ನಿರಂಕಾರ ಪರಮಾತ್ಮನಪ್ರಾರ್ಥನೆಯೊಂದಿಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯಮುಖಿ ಮತ್ತುವಲಯ ಸಂಯೋಜಕರು, ಜ್ಞಾನ ವಿಕಾಸಸಂಸ್ಥೆಯ ನಿರ್ದೇಶಕ ಪ್ರಸಾದ್ ಪಾಟೀಲ್, ಮತ್ತುನಗರಸೇವಕರಾದ .ಆರ್. ಪಾಟೀಲ್, ನಗರಸೇವಕ ಶಿರೀಶ್‌ಪಾಟೀಲ್, ಸಮಾಜಸೇವಕ ಸುನಿಕೇತ್ ಹಂಡ ಮತ್ತು ಸಮಾಜಸೇವಕ ಮಯೂರ್ ಧುಮಾಲ್ ಉಪಸ್ಥಿತರಿದ್ದರು.

ಸ್ಥಳೀಯ ಸತ್ಸಂಗ, ಸೇವಾದಳ, ಸ್ವಯಂಸೇವಕರು ಮತ್ತು ಅಲ್ಲಿನ ನಾಗರಿಕರು, ಭಕ್ತರು ರಕ್ತದಾನಶಿಬಿರದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಹಾಜರಿದ್ದ ಗಣ್ಯರು ರಕ್ತದಾನಿಗಳನ್ನು ಭೇಟಿಯಾಗಿಅವರ ಉದಾತ್ತ ಕೊಡುಗೆಯನ್ನು ಶ್ಲಾಘಿಸಿದರು ಮತ್ತು ಮಾನವ ಸೇವೆಯ ಕ್ಷೇತ್ರದಲ್ಲಿ ಸಂತನಿರಂಕಾರಿ ಚಾರಿಟೇಬಲ್ ಫೌಂಡೇಶನ್‌ನ ನಿರಂತರ ಪ್ರಯತ್ನಗಳನ್ನು ಶ್ಲಾಘಿಸಿದರು.ರಕ್ತದಾನಕ್ಕಾಗಿ ಒಟ್ಟು 127 ಭಕ್ತರುನೋಂದಾಯಿಸಿ ಕೊಂಡಿದ್ದರು, ಇವರಲ್ಲಿ 109 ಯೂನಿಟ್‌ರಕ್ತವನ್ನು ಯಶಸ್ವಿಯಾಗಿ ಸಂಗ್ರಹಿಸಲಾಯಿತು. ರಕ್ತದಾನ ಮಾಡಿದವರಿಗೆ ನೋಂದಣಿ,ಹಿಮೋಗ್ಲೋಬಿನ್ ಪರೀಕ್ಷೆ , ಉಪಾಹಾರ ಮತ್ತು ರಕ್ತದಾನದ ನಂತರದ ವಿಶ್ರಾಂತಿಗಾಗಿ ಸಾಕಷ್ಟುವ್ಯವಸ್ಥೆಗಳನ್ನು ಮಾಡಲಾಯಿತು.

ಈ ರಕ್ತದಾನ ಶಿಬಿರವು ಸ್ಥಳೀಯ ಮುಖಿ ಮತ್ತು ಸೇವಾದಳ, ಘಟಕ ವಲಯದ ಸಂಯೋಜಕ ಮನೋಹರ್ ಸಾವಂತ್ ಅವರ ಸಮರ್ಪಿತ ಬೆಂಬಲ ಮತ್ತು ಸುಯೋಜಿತ ಪ್ರಯತ್ನಗಳೊಂದಿಗೆ ಯಶಸ್ವಿಯಾಗಿ ಪೂರ್ಣಗೊಂಡಿತು.

ಮಹಾರಾಷ್ಟ್ರ ಪ್ರಗತಿ ಪಥ: ವಿಶ್ವದರ್ಜೆಯ ರಸ್ತೆಗಳಲ್ಲಿ ಅಂತಾರಾಷ್ಟ್ರೀಯ ಸೈಕ್ಲಿಂಗ್ ಸ್ಪರ್ಧೆ

ಪುಣೆ,ಜೂ.30- ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದಲ್ಲಿ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದ್ದು, ಲೋಕೋಪಯೋಗಿ ಸಚಿವ ಶಿವೇಂದ್ರಸಿಂಹರಾಜೆ ಬೋಸ್ಲೆ ಅವರ ಮಾರ್ಗದರ್ಶನದಲ್ಲಿ ಪುಣೆ ಜಿಲ್ಲೆಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಇದರ ಫಲವಾಗಿ 2027ರ ಜ. 26 ರಿಂದ 31ರವರೆಗೆ ನಡೆಯಲಿರುವ 'ಪುಣೆ ಗ್ರ್ಯಾಂಡ್ ಟೂರ್2027'ಅಂತಾರಾಷ್ಟ್ರೀಯ ಸೈಕ್ಲಿಂಗ್ ಸ್ಪರ್ಧೆಗೆ ಪುಣೆ ಸಂಪೂರ್ಣವಾಗಿ ಸಜ್ಜಾಗಿದೆ.

ಕಳೆದ 2026ರ ಆವೃತ್ತಿಯ ಅಭೂತಪೂರ್ವ ಯಶಸ್ಸಿನ ಬಳಿಕ ಈ ಬಾರಿ 1,099 ಕಿಲೋಮೀಟರ್ ಉದ್ದದ ರಸ್ತೆಯಲ್ಲಿ ಆರು ಹಂತಗಳಲ್ಲಿ ಸ್ಪರ್ಧೆ ಆಯೋಜಿಸಲಾಗುತ್ತಿದ್ದು, ಇದಕ್ಕಾಗಿ ಲೋಕೋಪಯೋಗಿ ಇಲಾಖೆಯು 398.70 ಕಿಲೋಮೀಟರ್‌ರಸ್ತೆಗಳನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸುತ್ತಿದೆ. ಒಟ್ಟು52ಅಭಿವೃದ್ಧಿ ಕಾಮಗಾರಿಗಳಿಗಾಗಿ629.26ಕೋಟಿರೂಪಾಯಿಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ರಾಜ್ಯ ಸರಕಾರ, ಪಿಎಂಆರ್‌ಡಿಎ ಹಾಗೂ ಜಿಲ್ಲಾ ಯೋಜನಾ ಸಮಿತಿ ಜಂಟಿಯಾಗಿ ಅನುದಾನ ಒದಗಿಸಲಿವೆ. ದೇಶ-ವಿದೇಶಗಳ ಪ್ರಮುಖ ಸೈಕ್ಲಿಂಗ್ ಸಂಸ್ಥೆಗಳು ಮತ್ತು ವೃತ್ತಿಪರ ಆಟಗಾರರು ಈ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಈ ಯೋಜನೆಯಿಂದ ಕೇವಲ ಕ್ರೀಡಾ ಪ್ರವಾಸೋದ್ಯಮ ಮತ್ತು ಸ್ಥಳೀಯ ಆರ್ಥಿಕತೆಗೆ ಉತ್ತೇಜನ ಸಿಗುವುದಲ್ಲದೆ, ಅತ್ಯಾಧುನಿಕ ರಸ್ತೆಗಳು ಸಾರ್ವಜನಿಕರ ದೈನಂದಿನ ಸಂಚಾರಕ್ಕೂ ಸಹಕಾರಿಯಾಗಲಿವೆ.

ಷೇರು ಮಾರುಕಟ್ಟೆ

ಸೆನ್ಸೆಕ್ಸ್ : 76,478.67 - 249.70
ನಿಫ್ಟಿ : 23,865.75 - 80.50

ಚಿನ್ನ

22 ಕ್ಯಾರೆಟ್ : 1,28,450 ರೂ. (10 ಗ್ರಾಮ್‌ಗೆ)
24 ಕ್ಯಾರೆಟ್ : 1,40,130 ರೂ. (10 ಗ್ರಾಮ್‌ಗೆ)
ಬೆಳ್ಳಿ : 2,35,000 ರೂ. (ಒಂದು ಕೆಜಿಗೆ)

ನಿತ್ಯ ಚಿಂತನ

ಜೀವನದಲ್ಲಿ ಯಶಸ್ಸು ಸಿಗಬೇಕು ಎಂದರೆ ನಾವು ಸೋಮಾರಿತನದಿಂದ ದೂರವಿರಬೇಕು. ನಕಾರಾತ್ಮಕ ಚಿಂತನೆಗಳಿಂದ ದೂರವಿರಬೇಕು. ಸಮಯ ವ್ಯರ್ಥ ಮಾಡುವವರ ಸಂಘದಿಂದ ದೂರವಿರಬೇಕು. ಈ ಎಲ್ಲಾ ನಿಯಮಗಳನ್ನು ಜೀವನದಲ್ಲಿ ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದರೆ ಯಶಸ್ಸು ಖಂಡಿತವಾಗಿಯೂ ಹತ್ತಿರವಾಗಲು ಸಾಧ್ಯ. ಇಂದಿನ ನಮ್ಮ ಪ್ರಾಮಾಣಿಕ ಶ್ರಮಕ್ಕೆ ಮುಂದೆ ಕಾಲವೇ ಯೋಗ್ಯವಾದ ಉತ್ತರವನ್ನು ನೀಡುತ್ತದೆ ಎನ್ನುವ ಭರವಸೆಯನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯೆ ಕಡಿಮೆ ಇದ್ದರೂ ಪರವಾಗಿಲ್ಲ. ನಮ್ಮ ನಡತೆಯನ್ನು ಪರಿಶುದ್ಧವಾಗಿರಿಸಿಕೊಳ್ಳಬೇಕು. ಸಿಕ್ಕವರೆಲ್ಲರೂ ಸಕ್ಕರೆ ಎಂದು ತಿಳಿದುಕೊಳ್ಳಬಾರದು. ಯಾಕೆಂದರೆ ಅತಿಯಾದ ಸಕ್ಕರೆಯೂ ಒಂದು ದಿನ ದೊಡ್ಡ ರೋಗಕ್ಕೆ ಮೂಲ ಕಾರಣವಾಗುತ್ತದೆ ಎಂಬುವುದನ್ನು ಅರಿತುಕೊಳ್ಳಬೇಕು. ಕಾಲಿಗೆ ಸೆಗಣಿ ಮೆತ್ತಿಕೊಂಡಿದೆ ಎಂದಾದರೇಲ್ಲೆಲ್ಲ ಸೆಗಣಿ ಹಾಕಬಾರದು ಎಂದು ಎಮ್ಮೆಗಳಿಗೋ ದನಗಳಿಗೋ ಸಲಹೆ ಕೊಡುತ್ತಾ ಸಮಯ ವ್ಯರ್ಥಮಾಡಬಾರದು. ಬದಲಾಗಿ ಎಲ್ಲಿ ನೀರಿದೆಯೋ ಅಲ್ಲಿ ಕಾಲುತೊಳೆದುಕೊಂಡು ನಮ್ಮಷ್ಟಕ್ಕೆ ನಾವು ಮುಂದೆ ಸಾಗಬೇಕು. ಸಮಯ ಮತ್ತುಸಲಹೆ ಎಷ್ಟು ಕೊಡಬೇಕೋ ಅಷ್ಟೇ ಕೊಡಬೇಕು. ಯಾಕೆಂದರೆ ಸಲಹೆಯಜೊತೆಗೆ ಸಮಯಕ್ಕೂ ಬೆಲೆ ಇರುವುದಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಮನುಷ್ಯನ ಪಾಲಿಗೆ ನಂಬಿಕೆಯೇ ಬದುಕಿನ ಅಡಿಪಾಯದ ಕಲ್ಲು.ಸ್ವಯಂ ನಂಬಿಕೆಯಿಂದಲೇ ಸಾಧನೆ ಸಾಧ್ಯ ಎಂಬುವುದನ್ನು ಅರಿತು ಬಾಳುವ ಅಗತ್ಯವಿದೆ. ಜೀವನದಲ್ಲಿ ಎಷ್ಟೇ ಕಷ್ಟಗಳು ಎದುರಾದರೂ ಸಹ ಧೈರ್ಯವನ್ನುಕಳೆದುಕೊಳ್ಳಬಾರದು. ಯಾಕೆಂದರೆ ನಮ್ಮ ಧೈರ್ಯವೇ ನಮ್ಮ ಯಶಸ್ಸಿಗೆ ದಾರಿದೀಪವಾಗಿರುತ್ತದೆ ಎಂಬುವುದನ್ನು ತಿಳಿದುಕೊಂಡು ಬದುಕಿನ ಹಾದಿಯಲ್ಲಿ ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ. ನಮ್ಮತನಕ್ಕೆ ಯಾರು ಬೆಲೆ ಕೊಡುತ್ತಾರೋ ಅಂತವರಿಗೆ ಮಾತ್ರ ನಮ್ಮ ಮನಸ್ಸಿನಲ್ಲಿ ನೆಲೆ ಕೊಡುವ ಅಗತ್ಯವಿದೆ. - ಶ್ರೀಧರ್ ಉಚ್ಚಿಲ್ (99303 70553)

ಎಐ ಬಳಕೆಗಾಗಿ ಎಸ್‌ಒಪಿ ರೂಪಿಸಲು ಮಹಾರಾಷ್ಟ್ರ ಸರಕಾರದಿಂದ ತಜ್ಞರ ಸಮಿತಿ; ಸಚಿವ ಯೋಗೇಶ್ ಕದಂ

ಮುಂಬಯಿ, ಜೂ. 30 - ವಿರೋಧ ಪಕ್ಷದ ಶಾಸಕರು ವಿಧಾನ ಭವನದಲ್ಲಿ ತಮ್ಮ ಒಪ್ಪಿಗೆಯಿಲ್ಲದೆ ಸ್ಥಾಪಿಸಲಾದ ಮುಖ ಗುರುತಿಸುವಿಕೆ ವ್ಯವಸ್ಥೆಯ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದರೂ ಕೂಡ ಕೃತಕ ಬುದ್ಧಿಮತ್ತೆ (ಎಐ) ಬಳಕೆಗೆ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು (ಎಸ್‌ಒಪಿಗಳು) ತಯಾರಿಸಲು 30 ದಿನಗಳಲ್ಲಿ ತಜ್ಞರ ಸಮಿತಿಯನ್ನು ರಚಿಸುವುದಾಗಿ ಮಹಾರಾಷ್ಟ್ರ ಸರಕಾರ ಮಂಗಳವಾರ ತಿಳಿಸಿದೆ.

ಎಐ-ಸಕ್ರಿಯಗೊಳಿಸಿದ ಸ್ಮಾರ್ಟ್‌ಗ್ಲಾಸ್‌ಗಳು ಮತ್ತು ಕಣ್ಗಾವಲು ಸಾಧನಗಳ ದುರುಪಯೋಗದ ಕುರಿತು ಗಮನ ಸೆಳೆಯುವ ನಿರ್ಣಯಕ್ಕೆ ಉತ್ತರಿಸಿದ ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಂ ಅವರು,ಆಡಳಿತ ಮತ್ತು ಇತರ ಪ್ರಕ್ರಿಯೆಗಳನ್ನು ಸರಳೀಕರಿಸಲು ತಂತ್ರಜ್ಞಾನವನ್ನು ಹೆಚ್ಚಾಗಿ ಬಳಸಲಾಗುತ್ತಿದೆ, ಆದರೆ ಅದನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂದು ಹೇಳಿದರು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಈ ಕ್ಷೇತ್ರದಲ್ಲಿ ತಜ್ಞರನ್ನು ಒಳಗೊಂಡ ತಜ್ಞರ ಸಮಿತಿಯ ಮೂಲಕ ಎಐ ಬಳಕೆಯ ಕುರಿತು ಎಸ್‌ಒಪಿಗಳನ್ನು ಸಿದ್ಧಪಡಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಸಮಿತಿಯನ್ನು 30 ದಿನಗಳಲ್ಲಿ ರಚಿಸಲಾಗುವುದು ಮತ್ತು ನಾಲ್ಕರಿಂದ ಆರು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ. ರಾಷ್ಟ್ರೀಯ ಎಐ ನೀತಿ ಮತ್ತು ಕಾನೂನು ಚೌಕಟ್ಟನ್ನು ರೂಪಿಸುವಾಗ ಅದರ ಶಿಫಾರಸುಗಳನ್ನು ಪರಿಗಣಿಸಲು ವರದಿಯನ್ನು ಕೇಂದ್ರಕ್ಕೆ ಕಳುಹಿಸಲಾಗುವುದು ಎಂದು ಕದಂ ಹೇಳಿದರು.

ಸ್ಮಾರ್ಟ್ ಗ್ಲಾಸ್‌ಗಳಂತಹ ಎಐ-ಸಕ್ರಿಯಗೊಳಿಸಿದ ಸಾಧನಗಳನ್ನು ವ್ಯಕ್ತಿಗಳನ್ನು ರಹಸ್ಯವಾಗಿ ದಾಖಲಿಸಲು ಮತ್ತು ಅವರ ಗೌಪ್ಯತೆಯನ್ನು ಉಲ್ಲಂಘಿಸಲು ಬಳಸಿದರೆ ಕ್ರಮ ಕೈಗೊಳ್ಳಲು ಅಸ್ತಿತ್ವದಲ್ಲಿರುವ ಕಾನೂನುಗಳು ಈಗಾಗಲೇ ಅವಕಾಶ ನೀಡುತ್ತವೆ ಎಂದು ಅವರು ಗಮನಿಸಿದರು.

ಸೂಕ್ಷ್ಮ ಸರ್ಕಾರಿ ಸಂಸ್ಥೆಗಳ ಭದ್ರತಾ ಸಿಬ್ಬಂದಿಗೆ ಅಂತಹ ಎಐ-ಸಕ್ರಿಯಗೊಳಿಸಿದ ಸಾಧನಗಳನ್ನು ಪತ್ತೆಹಚ್ಚಲು ಮತ್ತು ವ್ಯವಹರಿಸಲು ತರಬೇತಿ ನೀಡಲಾಗುವುದು ಎಂದು ಅವರು ಹೇಳಿದರು.ಚರ್ಚೆಯ ಸಮಯದಲ್ಲಿ, ಶಿವಸೇನೆ (ಯುಬಿಟಿ) ಶಾಸಕ ಆದಿತ್ಯ ಠಾಕ್ರೆ ಅವರು ವಿಧಾನ ಭವನ ಸಂಕೀರ್ಣದಲ್ಲಿ ಮುಖ ಗುರುತಿಸುವಿಕೆ ವ್ಯವಸ್ಥೆಯನ್ನು ಶಾಸಕರು, ಸಚಿವರು ಮತ್ತು ಮಾಜಿ ಶಾಸಕರ ಒಪ್ಪಿಗೆಯನ್ನು ಪಡೆಯದೆ ಹೇಗೆ ರಚಿಸಲಾಗಿದೆ ಎಂದು ಪ್ರಶ್ನಿಸಿದರು.

ಮುಖ ಗುರುತಿಸುವಿಕೆ ಡೇಟಾವನ್ನು ಎಲ್ಲಿ ಸಂಗ್ರಹಿಸಲಾಗಿದೆ, ಯಾವ ಕಂಪನಿ ಅದನ್ನು ನಿರ್ವಹಿಸುತ್ತಿದೆ, ಯಾವ ಗೌಪ್ಯತೆ ಸುರಕ್ಷತೆಗಳು ಮತ್ತು ಫೈರ್‌ವಾಲ್‌ಗಳು ಜಾರಿಯಲ್ಲಿವೆ ಎಂಬುದರ ಕುರಿತು ಠಾಕ್ರೆ ವಿವರಗಳನ್ನು ಕೋರಿದರಲ್ಲದೆ, ಈ ವಿಷಯದ ಬಗ್ಗೆ ಸರಕಾರದಿಂದ ವಿವರವಾದ ಹೇಳಿಕೆಗಾಗಿ ಒತ್ತಾಯಿಸಿದರು.

ಶಾಸಕಾಂಗದೊಳಗೆ ಶಾಸಕರು ಎಂದಿಗೂ ಐರಿಸ್ ಸ್ಕ್ಯಾನಿಂಗ್ ಅಥವಾ ಬಯೋಮೆಟ್ರಿಕ್ ನೋಂದಣಿಗೆ ಒಳಗಾಗಿಲ್ಲ ಎಂದು ಕಾಂಗ್ರೆಸ್‌ನ ಅಸ್ಲಂ ಶೇಖ್ ಹೇಳಿದರಲ್ಲದೆ,ಮುಖ ಗುರುತಿಸುವಿಕೆ ಡೇಟಾಬೇಸ್‌ನ್ನು ಹೇಗೆ ರಚಿಸಲಾಗಿದೆ ಎಂದು ಪ್ರಶ್ನಿಸಿದರು. ಛಾಯಾಚಿತ್ರಗಳಿಂದ ಮುಖ ಗುರುತಿಸುವಿಕೆಯನ್ನು ಉತ್ಪಾದಿಸಲು ಸಾಧ್ಯವಾದರೆ, ಅದು ಸಾಮಾನ್ಯ ನಾಗರಿಕರಿಗೂ ವ್ಯಾಪಕವಾದ ಗೌಪ್ಯತೆ ಕಾಳಜಿಯನ್ನು ಹುಟ್ಟುಹಾಕುತ್ತದೆ ಎಂದು ಅವರು ಹೇಳಿದರು.

ಆಡಳಿತ ಪಕ್ಷದ ಶಾಸಕರಾದ ಸಿದ್ಧಾರ್ಥ್ ಶಿರೋಲೆ (ಬಿಜೆಪಿ), ಚೇತನ್ ತುಪೆ (ಎನ್‌ಸಿಪಿ), ಮತ್ತು ನಮಿತಾ ಮುಂಡಾಲ (ಬಿಜೆಪಿ) ಅವರು ಸರಕಾರವು ಎಐ ಬಳಕೆಗೆ ಒಂದು ಚೌಕಟ್ಟನ್ನು ರೂಪಿಸಬೇಕೆಂದು ಒತ್ತಾಯಿಸಿದರು.

ಶಾಸಕಾಂಗ ಸಚಿವಾಲಯವು ಸ್ಪೀಕರ್ ಅವರ ಅಧಿಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವುದರಿಂದ ಈ ವಿಷಯವು ರಾಜ್ಯ ಸರಕಾರದ ವ್ಯಾಪ್ತಿಗೆ ಬರುವುದಿಲ್ಲ ಎಂದು ಸಚಿವರು ಹೇಳಿದರು.

ಸುಡೊಕು 1839

4			9		6	1		8
6	8							
	1	7	3	8		4		
3	4		6		7			9
5		1	8			2		7
2			5		1		8	4
		3		7	5	8	6	
							9	5
7		6	2		8			1


MANGAL SENACHA, BANGALORE

1ರಿಂದ 9 ರ ವರೆಗಿನ ಸಂಖ್ಯೆಗಳನ್ನು ಪ್ರತಿ 3×3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1838

2	9	8	3	5	6	1	7	4
4	5	3	2	1	7	9	8	6
7	1	6	4	8	9	2	5	3
8	2	5	6	9	1	3	4	7
3	6	4	7	2	5	8	1	9
1	7	9	8	3	4	5	6	2
5	4	1	9	7	2	6	3	8
6	3	2	1	4	8	7	9	5
9	8	7	5	6	3	4	2	1

ಪದಬಂಧ - 1921



ಎಡದಿಂದ ಬಲಕ್ಕೆ


1.ಈ ದೇವ ಸಂಗೀತಮಯವೇ? -4
3.ಈತ ದಾರಿಯಲ್ಲಿ ಹೋಗುತ್ತಿದ್ದಾನ -4
5.ಈ ಜಮಾನಕ್ಕೇ ಸೇರಿದ ಮಾಲಿಕ -4
7.ನೆನೆಯುವ ಸ್ಮರಣೆ -3
9.ಬಂದು ನೆಲೆಸಿದವ -4
11.ಕಳಸದಲ್ಲಿ ಸೇರಿಕೊಂಡಿರುವ ಕೊಳೆ -2
13.ಗವಿಯೇ ಇದು? -2
15.ಆವಿಯಾಡುತ್ತಿರುವ ಹವೆ-2
17.ಸಜೆಯಿಂದ ದೊರಕಿದ ಬಿಡುವು -2
18.ಕೋಲಿನಂತೆ ಉದ್ದ ಬಂದೂಕು -2
20.ಅದೃಷ್ಟದ ದಿಕ್ಕೇ ಇದು?-2
22.ರುಚಿ ಸರಿಯಾಗಿದೆ -2
24.ಹಾಲಿನ ಗಿಣ್ಣಿನಂಶದಿಂದ ಕೇಳಿದ ಕುದುರೆಯ ಧ್ವನಿ-2
26.ಮಂದವಾದ ಸಂತೋಷದ ಮುಗುಳ್ನಗು -4
28.ಮಹತ್ತರವಾಗಿರುವ ಆನೆ-3
30.ರೌದ್ರರೂಪಿ ಶಿವನ ಮಹತ್ವಿಕೆ -4
32.ನಾಗನ ಹೆಡೆಯಲ್ಲಿನ ಹರಳಿನಿಂದ ಮಾಡಿದ ಹಾರ-4
33.ಇದು ವೈಯಕ್ತಿಕವಾಗಿ ಸಂಗತವಾದುದು -4

10.ನಮ್ಮ ಹಾಡಗಳಲ್ಲಿ ಇವರು, ಸಿನಿಮಾಗಳಲ್ಲಿ ಪರಭಾಷಾ ನಟ -3
12.ಜೊತೆಯಲ್ಲಿರುವುದು -2
14.ಬಿಲ್ಲಿನ ಹಗ್ಗ -2
16.ಇದು ಸರಿ ಸಂಖ್ಯೆಯಲ್ಲ -2
19.ವಿರಸಕ್ಕೆ ವಿರುದ್ಧವಾದುದು -3
21.ಬೇಸಗೆಯ ಧಗೆ -2
23.ವಿಷವಲ್ಲ, ತುಂಬಾ ಕಷ್ಟಕರವಾದ ಪರಿಸ್ಥಿತಿ -3
25.ನೆತ್ತಿಯಿಂದ ಸುರಿಯುತ್ತಿರುವ ರಕ್ತ -3
26.ಸ್ವರ್ಗಲೋಕದ ಕಲ್ಪವೃಕ್ಷ -3
27.ಮಹಾ ಯುದ್ಧ -3
29.ಇದು ಲೆಕ್ಕ -3
31.ದ್ರವ ರೂಪದ್ದಲ್ಲ, ಘನ ವಸ್ತು -2

ಮೇಲಿನಿಂದ ಕೆಳಕ್ಕೆ

1.ಇದು ಸಾಧಕನ ವಿಶೇಷತೆ -3
2.ದೇವರ ಕೃಪೆ -2
3.ಮಾನವನಲ್ಲ ಇವ -3
4.ಕಬ್ಬು ತಿನ್ನುತ್ತಿರುವ ಕವಿ -3
6.ಜನ್ಮ ನೀಡಿದಾತ -3
8.ಇದೊಂದು ಬಗೆಯ ಸುಗಂಧ ದ್ರವ್ಯ-3

ಉತ್ತರ - 1920



ಅಡುಗೆ ಸಿಬ್ಬಂದಿ ಮೇಲೆ ಹಲ್ಲೆ ಪ್ರಕರಣ: ಪಂಜಾಬ್ ಕಿಂಗ್ಸ್ ಸ್ಟಾರ್ ಬ್ಯಾಟರ್ ಶಶಾಂಕ್ ಸಿಂಗ್, ಕುಟುಂಬದ ವಿರುದ್ಧ ಎಫ್‌ಐಆರ್ ದಾಖಲು



ಭೋಪಾಲ್, ಜೂ. 30 - ನಿವಾಸದಲ್ಲಿ ಕೆಲಸ ಮಾಡುತ್ತಿದ್ದ ಅಡುಗೆಯವರ ಮೇಲೆ ಹಲ್ಲೆ, ನಿಂದನೆ ಮತ್ತು ಬಲವಂತವಾಗಿ ಅವರ ಮೊಬೈಲ್ ಫೋನ್ ಕಿತ್ತುಕೊಂಡ ಆರೋಪದ ಮೇಲೆ ಪಂಜಾಬ್ ಕಿಂಗ್ಸ್ ಸ್ಟಾರ್ ಬ್ಯಾಟರ್ ಶಶಾಂಕ್ ಸಿಂಗ್ ಮತ್ತು ಅವರ ತಂದೆ ಶೈಲೇಶ್ ಸಿಂಗ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಭೋಪಾಲ್‌ನ ರಾತಿಬಾದ್ ಪೊಲೀಸರು ಅವರ ವಿರುದ್ಧ ಪ್ರಕರಣ ದಾಖಲಿಸಿದ್ದು, ಎಫ್‌ಐಆರ್‌ನಲ್ಲಿ ಶೈಲೇಶ್ ಸಿಂಗ್, ಶಶಾಂಕ್ ಸಿಂಗ್ ಮತ್ತು ಮಿಶ್ರಾ ಎಂದು ಗುರುತಿಸಲಾದ ಅವರ ಚಾಲಕನನ್ನು ಆರೋಪಿಗಳೆಂದು ಹೆಸರಿಸಲಾಗಿದೆ. ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 296(ಬಿ), 115(2) ಮತ್ತು 3(5) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಆರಂಭಿಸಲಾಗಿದೆ.ರೇವಾ ಜಿಲ್ಲೆಯ ನಿವಾಸಿ ವಿಪೇಂದ್ರ ಸಿಂಗ್ ತೋಮರ್ ಎನ್ನುವವರು ದೂರು ನೀಡಿದ್ದು, ಜೂನ್ 25 ರಂದು ಅವರು ನೀಲ್ಬಾದ್‌ನಲ್ಲಿರುವ ಕುಟುಂಬದ ಬಂಗಲೆಯಲ್ಲಿ ಅಡುಗೆಯವರಾಗಿ ಕೆಲಸಕ್ಕೆ ಸೇರಿದ್ದರು. ಆಹಾರ ಮತ್ತು ವಸತಿಯೊಂದಿಗೆ ಮಾಸಿಕ ರೂ. 15,000 ಸಂಬಳ ನೀಡಲಾಗಿತ್ತು ಎಂದು ಅವರು ಆರೋಪಿಸಿದ್ದಾರೆ.

'ವೇತನ, ಊಟ ಮತ್ತು ವಸತಿಯ ಭರವಸೆ ಸಿಕ್ಕ ನಂತರ ನಾನು ಅಲ್ಲಿ ಕೆಲಸ ಮಾಡಲು ಒಪ್ಪಿಕೊಂಡೆ ಮತ್ತು ಅಲ್ಲಿನ ನಿವಾಸದಲ್ಲಿಯೇ ಉಳಿದುಕೊಂಡೆ. ನಂತರ ತಮ್ಮ ಕೆಲಸದಲ್ಲಿ ಲೋಪಗಳಿವೆ ಎಂದು ಹೇಳಿ ತಮ್ಮ ಮೊಬೈಲ್ ಫೋನ್ ಅನ್ನು ಕಸಿದುಕೊಳ್ಳಲಾಯಿತು' ಎಂದು ದೂರುದಾರರು ತಮ್ಮ ಲಿಖಿತ ದೂರಿನಲ್ಲಿ ತಿಳಿಸಿದ್ದಾರೆ.

'ಜೂನ್ 28 ರಂದು ಉಪಹಾರ ತಯಾರಿಸಿದ ನಂತರ, ನಾನು ಶೈಲೇಶ್ ಸಿಂಗ್ ಅವರಲ್ಲಿ ನನ್ನ ಮೊಬೈಲ್ ಫೋನ್ ಹಿಂತಿರುಗಿಸುವಂತೆ ಕೇಳಿದೆ. ಆದರೆ ಅವರು ನಿರಾಕರಿಸಿದರು. ಇದರಿಂದ ಬೇಸರಗೊಂಡು ನಾನು ನನ್ನ ಕೋಣೆಗೆ ಹೋದೆ' ಎಂದು ಅವರು ಪೊಲೀಸರಿಗೆ ತಿಳಿಸಿದ್ದಾರೆ.

'ಶೈಲೇಶ್ ಸಿಂಗ್, ಅವರ ಮಗ ಶಶಾಂಕ್ ಸಿಂಗ್ ಮತ್ತು ಅವರ ಚಾಲಕ ನನ್ನ ಕೋಣೆಗೆ ಪ್ರವೇಶಿಸಿ, ನನ್ನನ್ನು ನಿಂದಿಸಿ, ಕೈ ಮತ್ತು ಮುಷ್ಟಿಯಿಂದ ಹಲ್ಲೆ ಮಾಡಲು ಪ್ರಾರಂಭಿಸಿದರು. ನನ್ನನ್ನು ಹೊಡೆದ ನಂತರ, ಅವರು ನನ್ನನ್ನು ಮನೆಯಿಂದ ಹೊರಗೆ ಹಾಕಿದರು' ಎಂದು ಆರೋಪಿಸಿದ್ದಾರೆ.

'ಆಹಾರ ಮತ್ತು ವಸತಿ ವೆಚ್ಚಕ್ಕಾಗಿ ಎಂದು ಹೇಳಿಕೊಂಡು ತನ್ನ ಮೊಬೈಲ್ ಫೋನ್‌ನಿಂದ ರೂ. 1,000 ಗಳನ್ನು ವರ್ಗಾಯಿಸಿದ್ದಾರೆ. ಘಟನೆಯ ನಂತರ, ನಾನು ನನ್ನ ಸಂಬಂಧಿಕರೊಂದಿಗೆ ಪೊಲೀಸ್ ಠಾಣೆಗೆ ದೂರು ನೀಡಲು ಮತ್ತು ಕಾನೂನು ಕ್ರಮ ಕೈಗೊಳ್ಳಲು ಬಂದೆ' ಎಂದು ತೋಮರ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಶಾಂಕ್ ಸಿಂಗ್ ಇಂಡಿಯನ್ ಪ್ರೀಮಿಯರ್‌ಲೀಗ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದರೆ, ಅವರ ತಂದೆ ಶೈಲೇಶ್ ಸಿಂಗ್ ಮಧ್ಯಪ್ರದೇಶದಲ್ಲಿ ನಿವೃತ್ತ ವಿಶೇಷ ಡಿಜಿ ಆಫ್ ಪೊಲೀಸ್ ಆಗಿದ್ದಾರೆ. ಪೊಲೀಸರು ಈ ಆರೋಪಗಳ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಭೋಪಾಲ್‌ನ ನೀಲ್‌ಬಾದ್ ಪ್ರದೇಶದ ಡಿಪಿಎಸ್ ಸ್ಕ್ವೇರ್‌ಬಳಿಯ ಮೆಂಡೋರಿ ರಸ್ತೆಯಲ್ಲಿರುವ ತಮ್ಮ ಬಂಗಲೆಯಲ್ಲಿ ವಾಸಿಸುವ ನಿವೃತ್ತ ಐಪಿಎಸ್ ಅಧಿಕಾರಿ ಶೈಲೇಶ್ ಸಿಂಗ್ ಅವರಿಂದಲೂ ಪ್ರತಿಕ್ರಿಯೆ ಪಡೆಯಲು ಐಎಎನ್‌ಎಸ್ ಪ್ರಯತ್ನಿಸಿದೆ; ಆದಾಗ್ಯೂ, ಇಲ್ಲಿಯವರೆಗೆ ಯಾವುದೇ ಹೇಳಿಕೆ ಬಂದಿಲ್ಲ.

ಆರೋಪಗಳನ್ನು ತಳ್ಳಿಹಾಕಿದ ಶಶಾಂಕ್ ಸಿಂಗ್

ಮತ್ತೊಂದೆಡೆ, ಅಡುಗೆ ಸಿಬ್ಬಂದಿಯೊಬ್ಬರು ಮಾಡಿದ ಹಲ್ಲೆ ಮತ್ತು ಅಕ್ರಮ ಬಂಧನದ ಆರೋಪಗಳನ್ನು ಪಂಜಾಬ್ ಕಿಂಗ್ಸ್ ತಂಡದ ಕ್ರಿಕೆಟಿಗ ಶಶಾಂಕ್ ಸಿಂಗ್ ತಳ್ಳಿಹಾಕಿದ್ದಾರೆ. ಬದಲಾಗಿ, ಆ ಉದ್ಯೋಗಿಯು ಕುಟುಂಬದ ಮನೆಯ ಖಾಸಗಿ ಸ್ಥಳಗಳಿಗೆ ಅನುಮತಿಯಿಲ್ಲದೆ ಪ್ರವೇಶಿಸಿ, ವಿಡಿಯೋಗಳನ್ನು ಚಿತ್ರೀಕರಿಸಿದ್ದರಿಂದಲೇ ಅವರನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಆರೋಪಗಳಿಗೆ ಪ್ರತಿಕ್ರಿಯಿಸಿದ ಶಶಾಂಕ್, ಎಲ್ಲ ಆರೋಪಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದು, ದೂರಿನಲ್ಲಿ ಉಲ್ಲೇಖಿಸಲಾದ ಘಟನೆಗಳನ್ನು ಪ್ರಶ್ನಿಸಿದ್ದಾರೆ.

ಹಲ್ಲೆಯಂತಹ ಯಾವುದೇ ಘಟನೆಗಳು ನಡೆದಿಲ್ಲ. ಜೂನ್ 25ರ ಸಂಜೆ ನಮ್ಮ ಮನೆಗೆ ಬಂದು, ಜೂನ್ 28ರ ಬೆಳಿಗ್ಗೆ ಅಲ್ಲಿಂದ ಹೊರಟ ವ್ಯಕ್ತಿಯನ್ನು ಹೇಗೆ ಒತ್ತೆಯಾಳಾಗಿ ಇರಿಸಲಾಗಿದೆ? ಎಂದು ಶಶಾಂಕ್ ಅವರು ಮಂಗಳವಾರ (ಜೂನ್ 30) ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಪ್ರಶ್ನಿಸಿದರು. ಅಡುಗೆ ಮಾಡುವ ವ್ಯಕ್ತಿ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಶಶಾಂಕ್ ಆರೋಪಿಸಿದರು. ಆರಂಭದಲ್ಲಿ ವಿವಿಧ ರೀತಿಯ ಅಡುಗೆಗಳನ್ನು ಮಾಡಬಲ್ಲೆ ಎಂದು ಹೇಳಿದ್ದ ಆತ, ನಂತರ ತಾನೇ ಸರಿಯಾಗಿ ಅಡುಗೆ ಮಾಡಲು ಬರುವುದಿಲ್ಲ ಎಂದು ಒಪ್ಪಿಕೊಂಡಿದ್ದಾರೆ ಎಂದು ಅವರು ಹೇಳಿದರು.

ಆ ವ್ಯಕ್ತಿ ನಮ್ಮ ಬಳಿ ಬಂದು, ನನಗೆ ಅಡುಗೆ ಮಾಡಲು ಬರುತ್ತದೆ. ಎಲ್ಲ ರೀತಿಯ ಆಹಾರಗಳನ್ನು ತಯಾರಿಸಬಲ್ಲೆ ಎಂದು ಹೇಳಿದ್ದ. ಆದರೆ ನಂತರ ಆತನೇ ತನಗೆ ಸರಿಯಾಗಿ ಅಡುಗೆ ಮಾಡಲು ಬರುವುದಿಲ್ಲ ಎಂದು ಒಪ್ಪಿಕೊಂಡ. ಅಂತಹ ವ್ಯಕ್ತಿಯನ್ನು ಹೇಗೆ ನಂಬಲು ಸಾಧ್ಯ? ಎಂದು ಶಶಾಂಕ್ ಸಿಂಗ್ ಪ್ರಶ್ನೆ ಮಾಡಿದ್ದಾರೆ.

ಶಶಾಂಕ್ ಅವರು ದೂರುದಾರನ ವಿರುದ್ಧವೂ ಹಲವು ಆರೋಪಗಳನ್ನು ಮಾಡಿದ್ದು, ಆ ಉದ್ಯೋಗಿಯು ಕುಟುಂಬದ ಮನೆಯ ಖಾಸಗಿ ಭಾಗಗಳಲ್ಲಿ ಅನುಮತಿಯಿಲ್ಲದೆ ವಿಡಿಯೋಗಳನ್ನು ಚಿತ್ರೀಕರಿಸಿದ್ದಾನೆ ಎಂದು ಹೇಳಿದ್ದಾರೆ.

ಅವರು ಮನೆಗೆ ಬಂದು ಮರುದಿನದಿಂದಲೇ ವಿಡಿಯೋಗಳನ್ನು ಚಿತ್ರೀಕರಿಸಲು ಆರಂಭಿಸಿದ. ದುಬಾರಿ ಮತ್ತು ಐಷಾರಾಮಿ ವಸ್ತುಗಳನ್ನು ಇಟ್ಟಿದ್ದ ಮಲಗುವ ಕೋಣೆಗೂ ಪ್ರವೇಶಿಸಿ, ಅಲ್ಲಿಯೂ ವಿಡಿಯೋಗಳನ್ನು ಮಾಡಿ ಅವುಗಳನ್ನು ಇತರರಿಗೆ ಕಳುಹಿಸಿದ್ದ ಎಂದು ಶಶಾಂಕ್ ಸಿಂಗ್ ಆರೋಪಿಸಿದರು. ಪಂಜಾಬ್ ಕಿಂಗ್ಸ್ ಬ್ಯಾಟರ್ ಶಶಾಂಕ್ ಅವರ ಪ್ರಕಾರ, ಅಡುಗೆಗಾರರೊಂದಿಗೆ ತಮ್ಮ ಸಂಭಾಷಣೆ ತುಂಬಾ ಸೀಮಿತವಾಗಿದ್ದು, ಅದು ಹೆಚ್ಚಾಗಿ ಅವರ ಅಡುಗೆ ಅನುಭವದ ಬಗ್ಗೆ ಮಾತ್ರ ಇತ್ತು. ತಮ್ಮ ತಂದೆಯ ಸ್ನೇಹಿತರೊಬ್ಬರ ಶಿಫಾರಸಿನ ಮೇರೆಗೆ ಆತನನ್ನು ಕೆಲಸಕ್ಕೆ ಕರೆಸಲಾಗಿತ್ತು. ಆದರೆ ಮನೆಗೆ ಬಂದ ತಕ್ಷಣವೇ ಆತ ಮುಂಗಡ ಹಣವನ್ನು ಕೇಳಿದ್ದಾನೆ ಎಂದು ಶಶಾಂಕ್ ತಿಳಿಸಿದ್ದಾರೆ.

ನನ್ನ ತಂದೆಯ ಸ್ನೇಹಿತರೊಬ್ಬರು ಈ ವ್ಯಕ್ತಿಯನ್ನು ಶಿಫಾರಸು ಮಾಡಿದ್ದರು. ಅವರಿಗೆ ಎಲ್ಲ ರೀತಿಯ ಅಡುಗೆಗಳನ್ನು ಮಾಡಲು ಬರುತ್ತದೆ ಎಂದು ಹೇಳಿದ್ದರಿಂದಲೇ ಅವರನ್ನು ಮನೆಗೆ ಕರೆಸಿಕೊಂಡೆವು ಎಂದು ಶಶಾಂಕ್ ಹೇಳಿದರು. ಆದರೆ ಮನೆಗೆ ಬಂದ ತಕ್ಷಣವೇ ಅವರು 20,000 ಮುಂಗಡ ಹಣವನ್ನು ನೀಡುವಂತೆ ಬೇಡಿಕೆ ಇಟ್ಟರು ಎಂದು ಅವರು ತಿಳಿಸಿದ್ದಾರೆ.

ವಿಶ್ವಕಪ್‌ನಲ್ಲಿ ಭಾರತ ಪರ ಆರಂಭಿಕ ಆಟಗಾರನಾಗಿ ಆಡಲು ರೋಹಿತ್‌ಗೆ ಇಂಗ್ಲೆಂಡ್ ಸರಣಿ ಉತ್ತಮ ವೇದಿಕೆಯಾಗಲಿದೆ: ಗವಾಸ್ಕರ್



ಹೊಸದಿಲ್ಲಿ, ಜೂ.30 - ಮುಂದಿನ ತಿಂಗಳು ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಭಾರತದ ಏಕದಿನ ಸರಣಿಯು ರೋಹಿತ್ ಶರ್ಮಾ ಮುಂದಿನ ವರ್ಷ ನಡೆಯಲಿರುವ 50 ಓವರ್‌ಗಳ ವಿಶ್ವಕಪ್‌ನಲ್ಲಿ ಭಾರತ ಪರ ಆರಂಭಿಕ ಆಟಗಾರನಾಗಿ ಆಡಲಿದ್ದಾರೆ ಎಂಬುದನ್ನು ತೋರಿಸಲು ಉತ್ತಮ ವೇದಿಕೆಯಾಗಲಿದೆ ಎಂದು ಭಾರತದ ಲೆಜೆಂಡರಿ ಬ್ಯಾಟ್ಸ್‌ಮನ್ ಸುನೀಲ್ ಗವಾಸ್ಕರ್ ಸೋಮವಾರ ಹೇಳಿದ್ದಾರೆ.

ಭಾರತಕ್ಕಾಗಿ ಒಂದೇ ಸ್ವರೂಪದಲ್ಲಿ ಆಡುವ ರೋಹಿತ್ ಮತ್ತು ವಿರಾಟ್ ಕೊಹ್ಲಿ (ಲಭ್ಯತೆಗೆ ಒಳಪಟ್ಟಿರುತ್ತದೆ) ಜುಲೈ 14-19 ರಿಂದ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಮೈದಾನಕ್ಕಿಳಿಯಲಿದ್ದಾರೆ. ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಸ್ಥಾನ ಪಡೆಯಲು ರೋಹಿತ್ ತನ್ನ ಸ್ಥಾನ ಎಲ್ಲಿದೆ ಎಂಬುದನ್ನು ತಿಳಿದಿದ್ದಾರೆ. 'ರೋಹಿತ್ ಶರ್ಮಾ ಬಗ್ಗೆ ಯಾವಾಗ ಹೆಚ್ಚು ಚರ್ಚೆ ನಡೆದಿಲ್ಲ, ರೋಹಿತ್ ಶರ್ಮಾ ಬಗ್ಗೆ ಯಾವಾಗಲೂ ಸಾಕಷ್ಟು ಚರ್ಚೆ ನಡೆಯುತ್ತಿದೆ' ಎಂದು ಸೋನಿ ಸ್ಪೋರ್ಟ್ಸ್ ಆಯೋಜಿಸಿದ್ದ ಸಂವಾದದಲ್ಲಿ ಗವಾಸ್ಕರ್‌ಹೇಳಿದರು.

ತನ್ನ ಸ್ಥಾನಮಾನದ ಬಗ್ಗೆ ಅವರಿಗೆ ಸ್ಪಷ್ಟ ಅರಿವಿದೆ. ನಿರ್ಣಾಯಕ ಪಾತ್ರ ವಹಿಸುವವರಿಂದ ರೋಹಿತ್ ಶರ್ಮಾ ಅವರಿಗೆ ಮಾಹಿತಿಯ ಸ್ಪಷ್ಟ ವಿನಿಮಯ ನಡೆದಿದೆ ಎಂದೇ ನಾನು ಭಾವಿಸುತ್ತೇನೆ. ತಮ್ಮ ಸ್ಥಾನದ ಬಗ್ಗೆ ಅವರಿಗೆ ನಿಖರವಾದ ಅರಿವಿದ್ದು, ವಿಶ್ವಕಪ್‌ಗೆ ಮುನ್ನ ಮುಂದಿನ ಒಂದೂವರೆ ವರ್ಷಗಳ ಅವಧಿಯಲ್ಲಿ ಅವರು ಮಾಡಬೇಕಾದ್ದು ಒಂದೇ - ಅದು ನಿರಂತರವಾಗಿ ಉತ್ತಮ ಪ್ರದರ್ಶನ ನೀಡುವುದು ಎಂದರು.

ಅವರು ತಮ್ಮಲ್ಲಿರುವ ಪ್ರತಿಭೆ ಮತ್ತು ಸಾಮರ್ಥ್ಯದಿಂದ ಯಾವುದೇ ಒತ್ತಡವನ್ನು ಅನುಭವಿಸುವ ರೀತಿಯ ವ್ಯಕ್ತಿ ಎಂದು ನಾನು ಭಾವಿಸುವುದಿಲ್ಲ. ಇಂಗ್ಲೆಂಡ್ ಪ್ರವಾಸ ಅವರಿಗೆ ಒಂದು ಉತ್ತಮ ವೇದಿಕೆಯಾಗಿದ್ದು, ಮುಂದಿನ ಒಂದೂವರೆ ವರ್ಷಗಳ ಕಾಲ ಅವರು ಭಾರತ ತಂಡದ ಪರ ಆರಂಭಿಕ ಬ್ಯಾಟಿಂಗ್ ಮಾಡುವವರಾಗಿ ಇರುತ್ತಾರೆ ಎಂಬುದನ್ನು ತೋರಿಸಲು ಇದು ಉತ್ತಮ ವೇದಿಕೆಯಾಗಿದೆ' ಎಂದು ಹೇಳಿದರು.

ಯಾವುದೇ ಭಾರತೀಯ ಆಟಗಾರನ ಪರಿಶೀಲನೆ ಎಂದಿಗೂ ಮುಗಿಯುವುದಿಲ್ಲ ಮತ್ತು ಹಿರಿಯ ಬ್ಯಾಟ್ಸ್‌ಮನ್‌ಗಳು ತಾವು ನಿರಂತರವಾಗಿ ಪ್ರದರ್ಶನ ನೀಡಬೇಕೆಂದು ತಿಳಿದಿರುತ್ತಾರೆ. ನೀವು ಚೊಚ್ಚಲ ಪ್ರವೇಶ ಮಾಡುವ ಯುವ ಆಟಗಾರನಾಗಿದ್ದಾಗ, ನಿಮ್ಮ ಮೇಲೆ, ನೀವು ಅಂತಾರಾಷ್ಟ್ರೀಯ (ಕ್ರಿಕೆಟ್) ಒತ್ತಡವನ್ನು ಹೇಗೆ ನಿಭಾಯಿಸುತ್ತೀರಿ, ನಿಮಗೆ ಅಂತಾರಾಷ್ಟ್ರೀಯ ಸ್ಪರ್ಧೆಯ ಮನೋಧರ್ಮ ಮತ್ತು ಅಭಿರುಚಿ ಇದೆಯೇ ಎಂಬುದರ ಮೇಲೆ ಪರಿಶೀಲನೆ ಇರುತ್ತದೆ ಎಂದು ಗವಾಸ್ಕರ್‌ಹೇಳಿದರು.

'ಭಾರತೀಯ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಪರಿಶೀಲನೆ ಅಲ್ಲಿಂದ ಪ್ರಾರಂಭವಾಗುತ್ತದೆ ಮತ್ತು ಅದು ಎಂದಿಗೂ ಕೊನೆಗೊಳ್ಳುವುದಿಲ್ಲ, ಆದ್ದರಿಂದ ಅವರ ಮೇಲೆ ನಡೆಯುತ್ತಿರುವ ಪರಿಶೀಲನೆ ಅವರಿಗೆ ಹೊಸದೇನಲ್ಲ. ಒತ್ತಡವನ್ನು ಹೇಗೆ ನಿಭಾಯಿಸಬೇಕೆಂದು ಅವರಿಗೆ ತಿಳಿದಿದೆ ಮತ್ತು ಒಂದೇ ಮಾರ್ಗವೆಂದರೆ ರನ್ ಗಳಿಸುವುದನ್ನು ಮುಂದುವರಿಸುವುದು, ಬರುವ ಕ್ಯಾಚ್‌ಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುವುದು, ರನೌಟ್‌ಗಳ ಮೇಲೆ ಪರಿಣಾಮ ಬೀರುವುದು ಮತ್ತು ಅದೇ ಸಮಯದಲ್ಲಿ, ನಾಯಕನಾಗಿ ಅವರು ಹೊಂದಿರುವ ಅನುಭವದಿಂದಾಗಿ ಸಲಹೆ ನೀಡಲು ನಾಯಕನೊಂದಿಗೆ ಇರುವುದು ಎಂದು ಅವರಿಗೆ ತಿಳಿದಿದೆ' ಎಂದು ಹೇಳಿದರು.

ರೋಹಿತ್ ಮತ್ತು ಕೊಹ್ಲಿಯ ವಿಷಯದಲ್ಲಿ, ಅವರ ದೈಹಿಕ ಸಾಮರ್ಥ್ಯಗಳ ಮೇಲೆ ಹೆಚ್ಚಿನ ಪರಿಶೀಲನೆ ಇರುತ್ತದೆ. ಅದನ್ನು ಇಬ್ಬರೂ ಸುಲಭವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ವಯಸ್ಸು 35 ದಾಟಿದ ನಂತರ, ನಿಮ್ಮ ಸ್ವಭಾವ ಅಥವಾ ಮನಸ್ಥಿತಿಗಿಂತ ಹೆಚ್ಚಾಗಿ ನಿಮ್ಮ ದೈಹಿಕ ಕ್ಷಮತೆ ಮತ್ತು ಫಿಟ್‌ನೆಸ್‌ನತ್ತ ಹೆಚ್ಚಿನ ಗಮನಹರಿಸಲಾಗುತ್ತದೆ. ಅವರಿಗಿರುವ ಅನುಭವದೊಂದಿಗೆ, ಅವರು ಅದನ್ನು ಸುಲಭವಾಗಿಯೇ ನಿಭಾಯಿಸಬಲ್ಲರು ಎಂದು ಗವಾಸ್ಕರ್‌ಹೇಳಿದರು. 'ಖಂಡಿತವಾಗಿಯೂ ಇಲ್ಲಿ ಸ್ವಲ್ಪ ಬದಲಾವಣೆಗಳಾಗುತ್ತವೆ, ಆದರೆ ಮುಂದಿನ 8-10 ವರ್ಷಗಳ ಕಾಲ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ಇರಲಿರುವ ತಿರುಳನ್ನು ನೀವು ನೋಡಿದಾಗ, ಈ ತಂಡವು ತಮ್ಮ ಕ್ರಿಕೆಟ್ ಅನ್ನು ಮುಗಿಸಿದಾಗ ಬಹಳ ಶಾಶ್ವತವಾದ, ಅತ್ಯಂತ ಆನಂದದಾಯಕ ಪರಂಪರೆಯನ್ನು ಬಿಡುವ ಸಾಮರ್ಥ್ಯವನ್ನು ಹೊಂದಿದೆ ಎಂದು ನಾನು ನಂಬುತ್ತೇನೆ' ಎಂದು ಅವರು ಹೇಳಿದರು.

ಈಮಧ್ಯೆ, ಇಂಗ್ಲೆಂಡ್‌ನ ಆಲ್-ರೌಂಡರ್ ಬೆನ್ ಸ್ಟೋಕ್ಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ ಸಮಯದ ಬಗ್ಗೆ ಗವಾಸ್ಕರ್ ಆಶ್ಚರ್ಯ ವ್ಯಕ್ತಪಡಿಸಿದರು.

ಪೋರ್ಚುಗಲ್ ಪರ ಕಣಕ್ಕಿಳಿಯಲಿದ್ದಾರೆ ಆಸ್ಟ್ರೇಲಿಯಾ ಕ್ರಿಕೆಟಿಗ ಮೊಯ್ಸೆಸ್ ಹೆನ್ರಿಕ್ಸ್



ಸಿಡ್ನಿ , ಜೂ.30 - ಆಸ್ಟ್ರೇಲಿಯಾದ ಆಲ್-ರೌಂಡರ್ ಮೊಯ್ಸೆಸ್ ಹೆನ್ರಿಕ್ಸ್ ಪೋರ್ಚುಗಲ್ ಪರ ಹೊಸ ಇನಿಂಗ್ಸ್ ಆರಂಭಿಸಲು ನಿರ್ಧರಿಸಿದ್ದಾರೆ. ಅಂದರೆ ಆಸ್ಟ್ರೇಲಿಯಾ ಕ್ರಿಕೆಟ್ ತೊರೆದು, ಪೋರ್ಚುಗಲ್ ಪರ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಲು ಮುಂದಾಗಿದ್ದಾರೆ. ಅದರಂತೆ ಮುಂಬರುವ ಆಗಸ್ಟ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ಮೊಯ್ಸೆಸ್ ಹೆನ್ರಿಕ್ಸ್ ಪೋರ್ಚುಗಲ್ ಪರ ಕಣಕ್ಕಿಳಿಯಲಿದ್ದಾರೆ.

ಮೊಯ್ಸೆಸ್ ಹೆನ್ರಿಕ್ಸ್ ಅವರು ಫೆಬ್ರವರಿ 1, 1987ರಂದು ಪೋರ್ಚುಗಲ್‌ನ ಫಂಚಲ್‌ನಲ್ಲಿ ಜನಿಸಿದ್ದರು. ಆದರೆ ಅವರು ಚಿಕ್ಕ ಮಗುವಾಗಿದ್ದಾಗಲೇ ಅವರ ಕುಟುಂಬವು ಆಸ್ಟ್ರೇಲಿಯಾಕ್ಕೆ ವಲಸೆ ಹೋಗಿತ್ತು. ಹೀಗಾಗಿ ಅವರು ಆಸ್ಟ್ರೇಲಿಯಾ ಪರ ಅಂತಾರಾಷ್ಟ್ರೀಯ ಕ್ರಿಕೆಟ್ ಕೆರಿಯರ್ ಆರಂಭಿಸಿದ್ದರು.

ಇದೀಗ ಆಸ್ಟ್ರೇಲಿಯಾ ತಂಡದಿಂದ ಹೊರಬಿದ್ದಿರುವ ಮೊಯ್ಸೆಸ್ ಹೆನ್ರಿಕ್ಸ್ ತಮ್ಮ ಮೂಲ ದೇಶದ ಪರ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ. ಅದರಂತೆ 2028ರ ಐಸಿಸಿ ಪುರುಷರ ಟಿ20 ವಿಶ್ವಕಪ್‌ನ ಯುರೋಪ್ ಸಬ್-ರೀಜನಲ್ ಕ್ವಾಲಿಫೈಯರ್ಸ್ ಪಂದ್ಯಾವಳಿಯಲ್ಲಿ ಪೋರ್ಚುಗಲ್ ಪರ ಹೆನ್ರಿಕ್ ಕಣಕ್ಕಿಳಿಯಲಿದ್ದಾರೆ.

ಐಸಿಸಿ ನಿಯಮಾವಳಿಗಳ ಪ್ರಕಾರ, ಪೂರ್ಣ ಪ್ರಮಾಣದ ಸದಸ್ಯ ರಾಷ್ಟ್ರದಿಂದ ಅಸೋಸಿಯೇಟ್ ಸದಸ್ಯ ರಾಷ್ಟ್ರಕ್ಕೆ ಬದಲಾಗಲು ಬೇಕಾದ ಕಡ್ಡಾಯ 3 ವರ್ಷಗಳ 'ಸ್ಟ್ಯಾಂಡ್-ಡೌನ್' ಅವಧಿಯನ್ನು ಹೆನ್ರಿಕ್ಸ್ ಈಗಾಗಲೇ ಪೂರೈಸಿದ್ದಾರೆ. ಈ ಕಾರಣದಿಂದಾಗಿ ಅವರು ತಮ್ಮ ಜನ್ಮ ನೀಡಿದ ದೇಶದ ಪರವಾಗಿ ಆಡಲು ಈಗ ಸಂಪೂರ್ಣ ಅರ್ಹರಾಗಿದ್ದಾರೆ.

ಆಸ್ಟ್ರೇಲಿಯಾ ಪರವಾಗಿ ಮೊಯ್ಸೆಸ್ ಹೆನ್ರಿಕ್ಸ್ ಒಟ್ಟು 44 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 636 ರನ್ ಹಾಗೂ 17 ವಿಕೆಟ್‌ಗಳನ್ನು ಪಡೆದಿದ್ದಾರೆ. ಇನ್ನು ಕೊನೆಯ ಬಾರಿಗೆ ಅವರು ಆಸ್ಟ್ರೇಲಿಯಾ ತಂಡವನ್ನು ಪ್ರತಿನಿಧಿಸಿದ್ದು 2021 ರಲ್ಲಿ. ಇದೀಗ ದೇಶ ಬದಲಾವಣೆಯ 'ಸ್ಟ್ಯಾಂಡ್-ಡೌನ್' ಅವಧಿ ಮುಗಿಸಿರುವ ಮೊಯ್ಸೆಸ್ ಹೆನ್ರಿಕ್ಸ್ ಪೋರ್ಚುಗಲ್ ಪರ ಕಣಕ್ಕಿಳಿಯಲು ಅರ್ಹತೆ ಪಡೆದುಕೊಂಡಿದ್ದಾರೆ. ಅದರಂತೆ ಮುಂಬರುವ ಟಿ20 ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಹೆನ್ರಿಕ್ ಪೋರ್ಚುಗಲ್ ತಂಡದ ಪರ ಕಣಕ್ಕಿಳಿಯಲಿದ್ದಾರೆ.

ವಿಕಾಸ ಒಪ್ಪಂದ ರದ್ದಾದರೆ ಮುದ್ರಾಂಕ ಶುಲ್ಕ ಮರುಪಾವತಿ ಇಲ್ಲ: ಮಹಾರಾಷ್ಟ್ರ ಮುದ್ರಾಂಕ ಕಾಯ್ದೆ ತಿದ್ದುಪಡಿ ವಿಧೇಯಕ ವಿಧಾನಸಭೆಯಲ್ಲಿ ಮಂಡನೆ

ಮುಂಬಯಿ,ಜೂ.30- ಮುಂಬಯಿ ಸೇರಿದಂತೆ ಮಹಾರಾಷ್ಟ್ರ ರಾಜ್ಯಾದ್ಯಂತ ವಿಕಾಸ ಒಪ್ಪಂದಗಳು (ಡೆವಲಪ್‌ಮೆಂಟ್ ಅಗ್ರಿಮೆಂಟ್) ರದ್ದು ಅಥವಾ ಮುಕ್ತಾಯಗೊಂಡರೆ ಯಾವುದೇ ಪರಿಸ್ಥಿತಿಯಲ್ಲೂ ಮುದ್ರಾಂಕ ಶುಲ್ಕದ (ಸ್ಟ್ಯಾಂಪ್ ಡ್ಯೂಟಿ) ಮರುಪಾವತಿ ಅಥವಾ ರಿಯಾಯಿತಿ ನೀಡುವುದಿಲ್ಲ ಎಂಬ ಕಟ್ಟುನಿಟ್ಟಿನ ನಿಬಂಧನೆಯನ್ನು ಒಳಗೊಂಡ ಮಹಾರಾಷ್ಟ್ರ ಮುದ್ರಾಂಕ ಕಾಯ್ದೆಯ ಕಲಂ 48ರ ತಿದ್ದುಪಡಿ ವಿಧೇಯಕವನ್ನು ಕಂದಾಯ ಸಚಿವ ಚಂದ್ರಶೇಖರ್ ಬಾವಂಕುಲೆ ಅವರು ಇಂದು ವಿಧಾನಸಭೆಯಲ್ಲಿ ಮಂಡಿಸಿದರು. ರಾಜ್ಯ ಸರಕಾರದ ರಾಜಸ್ವ ಅಥವಾ ಆದಾಯವನ್ನು ರಕ್ಷಿಸುವುದು ಮತ್ತು ಕಾಯ್ದೆಯಲ್ಲಿನ ಲೋಪದೋಷಗಳ ದುರುಪಯೋಗವನ್ನು ತಡೆಯುವುದು ಈ ಮಹತ್ವದ ತಿದ್ದುಪಡಿಯ ಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ವಿಕಾಸ ಒಪ್ಪಂದಗಳ ಸಂದರ್ಭದಲ್ಲಿ ಭಾರಿ ಪ್ರಮಾಣದ ಮುದ್ರಾಂಕ ಶುಲ್ಕವನ್ನು ಪಾವತಿಸಲಾಗುತ್ತಿದೆ. ಆದರೆ, ನಂತರದ ದಿನಗಳಲ್ಲಿ ವಾಣಿಜ್ಯ ಕಾರಣಗಳಿಂದ ಅಥವಾ ಪರಸ್ಪರ ಭಿನ್ನಾಭಿಪ್ರಾಯಗಳಿಂದ ಈ ಒಪ್ಪಂದಗಳನ್ನು ರದ್ದುಗೊಳಿಸಿ, ಪಾವತಿಸಿದ ಶುಲ್ಕದ ಮರುಪಾವತಿಗಾಗಿ ಸರ್ಕಾರದ ಮುಂದೆ ಅರ್ಜಿ ಸಲ್ಲಿಸಲಾಗುತ್ತಿತ್ತು. ಇಂತಹ ಪ್ರಕರಣಗಳ ಸತ್ಯಾಸತ್ಯತೆ ಪರಿಶೀಲನೆಯು ಆಡಳಿತಾತ್ಮಕವಾಗಿ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಮುದ್ರಾಂಕ ಶುಲ್ಕವನ್ನು ಕೇವಲ ದಸ್ತಾವೇಜಿನ ಜಾರಿಯ ಆಧಾರದ ಮೇಲೆ ವಿಧಿಸಲಾಗುತ್ತದೆಯೇ ಹೊರತು, ಒಪ್ಪಂದದ ಪ್ರತ್ಯಕ್ಷ ಅನುಷ್ಠಾನದ ಮೇಲಲ್ಲ ಎಂಬ ನಿಯಮವಿದ್ದರೂ, ಹಿಂದಿನ ರಿಯಾಯಿತಿಗಳ ದುರುಪಯೋಗವಾಗುತ್ತಿತ್ತು. ಇದರಿಂದಾಗಿ ರಾಜ್ಯದ ಖಜಾನೆಗೆ ದೊಡ್ಡ ಮಟ್ಟದ ನಷ್ಟವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕಾಯ್ದೆಯ ಕಲಂ 47 ಮತ್ತು 48ಕ್ಕೆ ಹೊಸದಾಗಿ ಸ್ಪಷ್ಟೀಕರಣವನ್ನು ಸೇರ್ಪಡೆಗೊಳಿಸಲಾಗುತ್ತಿದ್ದು, ಇನ್ಮುಂದೆ ಇಂತಹ ಯಾವುದೇ ಒಪ್ಪಂದಗಳಿಗೆ ಮರುಪಾವತಿಯ ಸೌಲಭ್ಯ ಅನ್ವಯಿಸುವುದಿಲ್ಲ ಎಂದು ವಿಧೇಯಕದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ನೂತನ ಸುಧಾರಣೆಯು ರಿಯಲ್ ಎಸ್ಟೇಟ್ ವಲಯ ಮತ್ತು ಮುದ್ರಾಂಕ ಶುಲ್ಕ ಇಲಾಖೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲಿದೆ ಎಂದು ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

ವಿಮಾ ಸಾಕ್ಷರತೆ ಹೆಚ್ಚಿಸಲು ಕಾಮಿಕ್ ಪುಸ್ತಕ ಸರಣಿ ಬಿಡುಗಡೆ: ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರದಿಂದ ಮಹತ್ವದ ಹೆಜ್ಜೆ



ಮುಂಬಯಿ, ಜೂ.30 - ದೇಶದ ಪ್ರತಿಯೊಬ್ಬ ನಾಗರಿಕನಿಗೂ ವಿಮಾ ಸೌಲಭ್ಯವನ್ನು ತಲುಪಿಸುವ 'ಇನ್ಶೂರೆನ್ಸ್ ಫಾರ್ ಆಲ್' (ಎಲ್ಲರಿಗೂ ವಿಮೆ) ಪರಿಕಲ್ಪನೆಗೆ ಮತ್ತಷ್ಟು ಬಲ ನೀಡಲು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಮುಂದಾಗಿದೆ. ಗ್ರಾಹಕರಲ್ಲಿ ಜೀವನ ವಿಮೆಯ ಬಗ್ಗೆ ಜಾಗೃತಿ ಮತ್ತು ಸಾಕ್ಷರತೆಯನ್ನು ಮೂಡಿಸುವ ಉದ್ದೇಶದಿಂದ ಸಿದ್ಧಪಡಿಸಲಾದ ವಿಶೇಷ ಕಾಮಿಕ್ ಪುಸ್ತಕ ಸರಣಿಯನ್ನು ಐಆರ್‌ಡಿಎಐ ಅಧ್ಯಕ್ಷರಾದ ಅಜಯ್ ಸೇಠ್ ಅವರು ಅಧಿಕೃತವಾಗಿ ಬಿಡುಗಡೆ ಮಾಡಿದ್ದಾರೆ. ಜೀವನ ವಿಮಾ ಕ್ಷೇತ್ರದ ಪ್ರಮುಖ ಕಂಪನಿಗಳು ಈ ಮಹತ್ವದ ಜಾಗೃತಿ ಅಭಿಯಾನಕ್ಕಾಗಿ ಒಂದೇ ಸೂರಿನಡಿ ಕೈಜೋಡಿಸಿರುವುದು ವಿಶೇಷವಾಗಿದೆ.

ಸಾಮಾನ್ಯವಾಗಿ ಅನೇಕರು ಜೀವನ ವಿಮೆಗೆ ಸಂಬಂಧಿಸಿದ ಪ್ರಕ್ರಿಯೆ ಹಾಗೂ ನಿಯಮಗಳನ್ನು ಅತ್ಯಂತ ಜಟಿಲ ಎಂದು ಭಾವಿಸಿ, ವಿಮೆ ಪಡೆದುಕೊಳ್ಳಲು ಹಿಂಜರಿಯುತ್ತಾರೆ. ಈ ಸಮಸ್ಯೆಯನ್ನು ಮನಗಂಡು, ಅತ್ಯಂತ ಸುಲಭ ಹಾಗೂ ಆಕರ್ಷಕ ಶೈಲಿಯಲ್ಲಿ ವಿಮೆಯ ಮಹತ್ವವನ್ನು ಮನವರಿಕೆ ಮಾಡಿಕೊಡಲು ಈ ಕಾಮಿಕ್ ಸರಣಿಯನ್ನು ರೂಪಿಸಲಾಗಿದೆ. ಇದರಲ್ಲಿ ವಿವಾಹಿತ ಮಹಿಳೆಯರ ಆಸ್ತಿ ಹಕ್ಕು ಕಾಯ್ದೆ, ಪ್ರೀಮಿಯಂ ಮನ್ನಾ ಮತ್ತು ಗಂಭೀರ ಅನಾರೋಗ್ಯದ ರೈಡರ್‌ಗಳಂತಹ ಪ್ರಮುಖ ತಾಂತ್ರಿಕ ವಿಷಯಗಳನ್ನು ದಿನನಿತ್ಯದ ಸರಳ ಕಥೆಗಳ ಮೂಲಕ ವಿವರಿಸಲಾಗಿದೆ. ಸುಪ್ರಿಯಾ ಎಂಬ ಯುವ ವಿಮಾ ಸಲಹೆಗಾರ್ತಿಯ ಅನುಭವಗಳ ಆಧಾರಿತ ಕಥಾಹಂದರವು ಈ ಪುಸ್ತಕಗಳ ಕೇಂದ್ರಬಿಂದುವಾಗಿದ್ದು, ಭವಿಷ್ಯದ ಆರ್ಥಿಕ ಭದ್ರತೆಗೆ ಜೀವ ವಿಮೆ ಹೇಗೆ ನೆರವಾಗುತ್ತದೆ ಎಂಬುದನ್ನು ಇದು ಸಾರುತ್ತದೆ.

ರಾಷ್ಟ್ರೀಯ ವಿಮಾ ಜಾಗೃತಿ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಆದಿತ್ಯ ಬಿರ್ಲಾ ಸನ್ ಲೈಫ್ ಇನ್ಶೂರೆನ್ಸ್ ಅಧ್ಯಕ್ಷ ಕಮಲೇಶ್ ರಾವ್ ಮಾತನಾಡಿ, ಕೇವಲ ವಿಮೆದಾರರ ಸಂಖ್ಯೆಯನ್ನು ಹೆಚ್ಚಿಸುವುದು ನಮ್ಮ ಗುರಿಯಲ್ಲ, ಬದಲಿಗೆ ಪ್ರತಿಯೊಂದು ಭಾರತೀಯ ಕುಟುಂಬದ ಆರ್ಥಿಕ ಯೋಜನೆಯಲ್ಲಿ ವಿಮೆಯು ಅವಿಭಾಜ್ಯ ಅಂಗವಾಗಬೇಕು ಎಂದರು. ಲೈಫ್ ಇನ್ಶೂರೆನ್ಸ್ ಕೌನ್ಸಿಲ್ ಪ್ರಧಾನ ಕಾರ್ಯದರ್ಶಿ ಆದಿತ್ಯ ಗುಪ್ತಾ ಅವರು ಕಥೆಗಳ ಮೂಲಕ ಸಂವಹನ ನಡೆಸುವ ಈ ನೂತನ ಪ್ರಯತ್ನವನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಹಿರಿಯ ವಿಮಾ ತಜ್ಞರ ಸಮ್ಮುಖದಲ್ಲಿ ವಿಶೇಷ ಸಂವಾದ ಕಾರ್ಯಕ್ರಮವೂ ಜರುಗಿತು.

ಇಲಿ, ಜಿರಳೆ , ಅವಧಿ ಮೀರಿದ ಆಹಾರ:ಎಫ್‌ಡಿಎಯಿಂದ ದಕ್ಷಿಣ ಮುಂಬಯಿಯ 6 ರೆಸ್ಟೋರೆಂಟ್‌ಗಳ ಫುಡ್ ಲೈಸೆನ್ಸ್ ಅಮಾನತು

ಮುಂಬಯಿ, ಜೂ.30 - ಕಾರ್ಯಾಚರಣೆ ಸಮಯದಲ್ಲಿ ನೈರ್ಮಲ್ಯವಿಲ್ಲದ ಅಡುಗೆಮನೆ, ಅವಧಿ ಮೀರಿದ ಸ್ಟಾಕ್ ಮತ್ತು ತಪ್ಪಾಗಿ ಬ್ರ್ಯಾಂಡ್ ಮಾಡಲಾದ ಉತ್ಪನ್ನಗಳು ಪತ್ತೆಯಾದ ಬಳಿಕ ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ದಕ್ಷಿಣ ಮುಂಬಯಿನಲ್ಲಿರುವ ಐಷಾರಾಮಿ ಹೋಟೆಲ್ ಸೇರಿದಂತೆ ಆರು ರೆಸ್ಟೋರೆಂಟ್‌ಗಳು ಮತ್ತು ತಿನಿಸು ಅಂಗಡಿಗಳ ಆಹಾರ ವ್ಯಾಪಾರ ಪರವಾನಗಿಗಳನ್ನು ಅಮಾನತುಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶೇಷ ರಾಜ್ಯವ್ಯಾಪಿ ಜಾರಿ ಅಭಿಯಾನದ ಭಾಗವಾಗಿ, ಐಷಾರಾಮಿ ನಾರಿಮನ್ ಪಾಯಿಂಟ್ ಪ್ರದೇಶದಲ್ಲಿರುವ ಐಷಾರಾಮಿ ರೆಸ್ಟೋರೆಂಟ್ ಫ್ಲಿಂಟ್‌ಆ್ಯಂಡ್ ವಾರ್ಸಾ ಮತ್ತು ಪೂರ್ವ ಮತ್ತು ಪಶ್ಚಿಮ ಉಪನಗರಗಳಲ್ಲಿನ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಬೇಕರಿ ಸೇರಿದಂತೆ 5 ಇತರ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಅಧಿಕಾರಿಗಳು ಜೂ.27 ರಂದು ಫ್ಲಿಂಟ್ ಆ್ಯಂಡ್ ವಾರ್ಸಾವನ್ನು ಪರಿಶೀಲಿಸಿದರು ಮತ್ತು ತಪ್ಪಾಗಿ ಬ್ರ್ಯಾಂಡ್ ಮಾಡಲಾದ ಉತ್ಪನ್ನಗಳನ್ನು ಕಂಡುಕೊಂಡ ಬಳಿಕ ಪ್ರಯೋಗಾಲಯ ವಿಶ್ಲೇಷಣೆಗಾಗಿ ಐದು ಮಾದರಿಗಳನ್ನು ಸಂಗ್ರಹಿಸಿ 11,350 ರೂ. ಮೌಲ್ಯದ ಸ್ಟಾಕ್‌ನ್ನು ವಶಪಡಿಸಿಕೊಂಡರು. ಅವಧಿ ಮೀರಿ ಸಂಗ್ರಹಿಸಿಟ್ಟಿದ್ದ 16,201 ರೂ. ಮೌಲ್ಯದ ದಾಸ್ತಾನುಗಳನ್ನು ತಂಡವು ಪತ್ತೆಹಚ್ಚಿದ್ದು, ಅಲ್ಲಿಯೇ ವಿಲೇವಾರಿ ಮಾಡಲಾಗಿದೆ ಎಂದು ಎಫ್‌ಡಿಎ ಹೇಳಿಕೆ ತಿಳಿಸಿದೆ.

ಸೋಮವಾರ ಎಫ್‌ಡಿಎ ಬೊರಿವಲಿ, ಸಾಂತಾಕ್ರೂಜ್, ಅಂಧೇರಿ, ಬಾಂದ್ರಾ ಮತ್ತು ಭಾಂಡೂಪ್‌ಗಳಲ್ಲಿನ ಆವರಣಗಳ ಮೇಲೆ ದಾಳಿ ನಡೆಸಿತು, ಅಲ್ಲಿ ಅಧಿಕಾರಿಗಳು ಜಿರಳೆಗಳು, ಇಲಿಗಳು ಮತ್ತು ಕಚ್ಚಾ ಆಹಾರದ ಅನೈರ್ಮಲ್ಯ ಸಂಗ್ರಹಣೆಯನ್ನು ಪತ್ತೆ ಮಾಡಿದರು. ಇದಲ್ಲದೆ, ಸಂಸ್ಥೆಗಳು ಅಗತ್ಯ ದಾಖಲೆಗಳನ್ನು ಹೊಂದಿರಲಿಲ್ಲ ಮತ್ತು ಸಿಬ್ಬಂದಿ ಕಡ್ಡಾಯ ಆರೋಗ್ಯ ತಪಾಸಣೆಗೆ ಒಳಗಾಗಿರಲಿಲ್ಲ ಎಂದು ಕಂಡುಬಂದಿತು.

ಎಫ್‌ಡಿಎ ಪ್ರಕಟಣೆಯ ಪ್ರಕಾರ, ಸ್ವಚ್ಛತೆಯಲ್ಲಿನ ಗಂಭೀರ ನ್ಯೂನತೆಗಳು, ಕಳಪೆ ಶೈತ್ಯೀಕರಣ ಮತ್ತು ಗ್ರಾಹಕರ ಕುಂದುಕೊರತೆಗಳನ್ನು ಪರಿಹರಿಸಲು ಕಾರ್ಯವಿಧಾನದ ಕೊರತೆಯಿಂದಾಗಿ ಈ ಸಂಸ್ಥೆಗಳ ಆಹಾರ ವ್ಯಾಪಾರ ಪರವಾನಗಿಗಳನ್ನು ಅಮಾನತುಗೊಳಿಸಲಾಗಿದೆ.

ಎಫ್‌ಡಿಎ ಪ್ರಕಾರ, ಜೂ. 26 ಮತ್ತು ಜೂ.28 ರ ನಡುವೆ ಮಹಾರಾಷ್ಟ್ರದಾದ್ಯಂತ 31 ದಾಳಿಗಳನ್ನು ನಡೆಸಲಾಯಿತು, ಈ ಸಮಯದಲ್ಲಿ ಪಾನ್ ಮಸಾಲಾ ಮತ್ತು ಗುಟ್ಕಾ ಸೇರಿದಂತೆ 34.87 ಲಕ್ಷ ರೂ. ಮೌಲ್ಯದ ನಿಷೇಧಿತ ಆಹಾರ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ನಿಷೇಧಿತ ಆಹಾರ ಉತ್ಪನ್ನಗಳ ಮಾರಾಟ, ವಿತರಣೆ ಮತ್ತು ಸಾಗಣೆಗೆ ಸಂಬಂಧಿಸಿದಂತೆ 19 ಜನರನ್ನು ಬಂಧಿಸಲಾಯಿತು, ಒಂದು ಸಂಸ್ಥೆಗೆ ಸೀಲ್ ಹಾಕಲಾಯಿತು ಮತ್ತು ಮೂರು ವಾಹನಗಳನ್ನು ವಶಪಡಿಸಿಕೊಂಡರು.

ಮುಂಬಯಿನಲ್ಲಿ 2,257 ಅಕ್ರಮ ನೀರಿನ ಸಂಪರ್ಕ ಕಡಿತ;ಸಚಿವ ಉದಯ್ ಸಾಮಂತ್

ಮುಂಬಯಿ, ಜೂ.30 - ಕಳೆದ 6 ತಿಂಗಳಲ್ಲಿ ಮುಂಬಯಿನಲ್ಲಿ 2,257 ಅಕ್ರಮ ನೀರಿನ ಸಂಪರ್ಕ ಕಡಿತಗೊಳಿಸಲಾಗಿದೆ ಮತ್ತು ಮುಂಬರುವ ದಿನಗಳಲ್ಲಿ ಅಂತಹ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಸಚಿವ ಉದಯ್ ಸಾಮಂತ್ ಅವರು ಹೇಳಿದ್ದಾರೆ.

7 ಸರಬರಾಜು ಜಲಾಶಯಗಳಲ್ಲಿ ಕಡಿಮೆ ಮಟ್ಟದ ನೀರಿರುವ ಕಾರಣದಿಂದಾಗಿ ಮನೆಗಳು ನೀರಿನ ಕಡಿತವನ್ನು ಎದುರಿಸುತ್ತಿದ್ದು,ಮಹಾನಗರದಲ್ಲಿ ನೀರಿನ ಕಳ್ಳತನವನ್ನು ಎದುರಿಸಲು ಅನಧಿಕೃತ ಪೈಪ್‌ಲೈನ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಆದೇಶಗಳನ್ನು ನೀಡಲಾಗುವುದು ಎಂದು ಅವರು ಹೇಳಿದರು.ಮಹಾರಾಷ್ಟ್ರ ವಿಧಾನ ಪರಿಷತ್ತಿನಲ್ಲಿ ಗಮನ ಸೆಳೆಯುವ ಗೊತ್ತುವಳಿಗೆ ಪ್ರತಿಕ್ರಿಯಿಸಿದ ಸಾಮಂತ್, 2026ರ ಜನವರಿ ಮತ್ತು ಜೂನ್ ನಡುವೆ ಮುಂಬಯಿನಲ್ಲಿ 2,257 ಅಕ್ರಮ ನೀರಿನ ಸಂಪರ್ಕ ಕಡಿತಗೊಳಿಸಲಾಗಿದೆ ಎಂದು ತಿಳಿಸಿದರು.ಅಕ್ರಮ ನೀರಿನ ಸಂಪರ್ಕಗಳನ್ನು ಕಡಿತಗೊಳಿಸಲು ಆದೇಶಗಳನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ ಬಿಎಂಸಿ ಮೂಲಕ 90 ದಿನಗಳ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು. ನಗರಾಭಿವೃದ್ಧಿ ಖಾತೆಯನ್ನು ನಿರ್ವಹಿಸುವ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಪರವಾಗಿ ಸಾಮಂತ್ ಪ್ರತಿಕ್ರಿಯಿಸುತ್ತಿದ್ದರು.ಅಕ್ರಮ ನೀರಿನ ಸಂಪರ್ಕಗಳ ವಿಷಯವನ್ನು ಬಿಜೆಪಿ ಎಂಎಲ್‌ಸಿ ರಾಜಹಂಸ್ ಸಿಂಗ್ ಎತ್ತಿದ್ದರು.

ಗಮನ ಸೆಳೆಯುವ ಗೊತ್ತುವಳಿಗೆ ಲಿಖಿತ ಉತ್ತರದಲ್ಲಿ, ಬಿಎಂಸಿ ಕುರ್ಲಾದಲ್ಲಿ 14, ಮಾನ್‌ಖುರ್ದ್-ಗೋವಂಡಿಯಲ್ಲಿ 22, ಕಲೀನಾದಲ್ಲಿ ತಲಾ 5 ಮತ್ತು ಮಾಲ್ವಾನಿಯಲ್ಲಿ ಅನಧಿಕೃತ ನೀರಿನ ಸಂಪರ್ಕಗಳನ್ನು ಕಂಡುಕೊಂಡಿದೆ.ಈ ಅನಧಿಕೃತ ನೀರಿನ ಸಂಪರ್ಕಗಳನ್ನು ನಿರ್ಮಾಣ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ ಎಂದು ಅವರು ಹೇಳಿದರು.

ಅಪ್ರಾಪ್ತ ವಯಸ್ಕರನ್ನು ಬಳಸಿ ಅಪರಾಧ ಎಸಗುವ ಗ್ಯಾಂಗ್‌ಗಳ ವಿರುದ್ಧ ಮೋಕಾ ದಾಖಲು; ಮುಖ್ಯಮಂತ್ರಿ ಫಡ್ನವೀಸ್

ಮುಂಬಯಿ, ಜೂ.30 - ಅಪ್ರಾಪ್ತ ವಯಸ್ಕರನ್ನು ಬಳಸಿಕೊಂಡು ಅಪರಾಧಗಳನ್ನು ಎಸಗುವ ಗ್ಯಾಂಗ್‌ಗಳ ವಿರುದ್ಧ ಮೋಕಾ ನಿಬಂಧನೆಗಳನ್ನು ಅನ್ವಯಿಸಲಾಗುವುದು ಮತ್ತು ಬಾಲಾಪರಾಧಿಗಳಿಗೆ ಶಸ್ತ್ರಾಸ್ತ್ರ, ಹಣ ಅಥವಾ ಇತರ ಸಹಾಯವನ್ನು ಒದಗಿಸುವವರನ್ನು ಕೂಡ ಸಂಘಟಿತ ಅಪರಾಧದಲ್ಲಿ ಭಾಗವಹಿಸುವವರೆಂದು ಪರಿಗಣಿಸಲಾಗುತ್ತದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ರಾಜ್ಯ ಶಾಸಕಾಂಗ ಸಭೆಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಫಡ್ನವೀಸ್, ತನಿಖೆಗಳು ಗ್ಯಾಂಗ್ ಸಂಬಂಧವನ್ನು ಸ್ಥಾಪಿಸಿದರೆ, ಆರೋಪಿಗಳು ಅಪರಾಧ ಸ್ಥಳದಲ್ಲಿ ದೈಹಿಕವಾಗಿ ಇಲ್ಲದಿದ್ದರೂ ಕೂಡ ಅವರನ್ನು ಸಂಘಟಿತ ಅಪರಾಧ ಕಾನೂನಿನಡಿಯಲ್ಲಿ ದಾಖಲಿಸಲಾಗುವುದು ಎಂದು ಹೇಳಿದರು.

ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಮೋಕಾ) ಸಂಘಟಿತ ಅಪರಾಧ, ಗ್ಯಾಂಗ್‌ಗಳು, ಅವರ ಜಾಲಗಳು ಮತ್ತು ಭೂಗತ ಲೋಕದ ಜಾಲಗಳನ್ನು ಎದುರಿಸಲು 1999 ರಲ್ಲಿ ಜಾರಿಗೆ ತಂದ ಕಠಿಣ ಕಾನೂನಾಗಿದೆ. ಈ ಜಾಲಗಳನ್ನು ಕೆಡವಲು ಪೊಲೀಸ್ ಮತ್ತು ವಿಶೇಷ ನ್ಯಾಯಾಲಯಗಳಿಗೆ ವಿಶಾಲವಾದ, ಹೆಚ್ಚು ಆಕ್ರಮಣಕಾರಿ ಅಧಿಕಾರಗಳನ್ನು ಒದಗಿಸಲು ಈ ಕಾನೂನನ್ನು ವಿನ್ಯಾಸಗೊಳಿಸಲಾಗಿದೆ.

ಅಪ್ರಾಪ್ತ ವಯಸ್ಕರನ್ನು ನೇರವಾಗಿ ಅಥವಾ ಪರೋಕ್ಷವಾಗಿ ಅಪರಾಧಕ್ಕೆ ಪ್ರೇರೇಪಿಸುವವರ ವಿರುದ್ಧ ಕಾನೂನು ಕ್ರಮವನ್ನು ಬಲಪಡಿಸಲು ಸರಕಾರ ತಿದ್ದುಪಡಿಗಳನ್ನು ತಂದಿದೆ ಎಂದು ಫಡ್ನವೀಸ್ ಹೇಳಿದರು.

ಜಾಲ್ನಾ ಜಿಲ್ಲೆಯಲ್ಲಿ ನಡೆದ 8 ಕೊಲೆ ಘಟನೆಗಳಲ್ಲಿ ಅಪ್ರಾಪ್ತ ವಯಸ್ಕ ಆರೋಪಿಗಳು ಭಾಗಿಯಾಗಿದ್ದಾರೆಂದು ಹೇಳಲಾಗಿದ್ದು, ಅವು ಯಾವುದೇ ಸಂಘಟಿತ ಗ್ಯಾಂಗ್ ಸಂಪರ್ಕವನ್ನು ಬಹಿರಂಗಪಡಿಸಿಲ್ಲ ಮತ್ತು ಪ್ರಾಥಮಿಕವಾಗಿ ಕೌಟುಂಬಿಕ ಕಲಹಗಳ ಪರಿಣಾಮವಾಗಿದೆ ಎಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿ, ಅಪರಾಧ ಜಾಲಗಳು ಅಪ್ರಾಪ್ತ ವಯಸ್ಕರನ್ನು ಕಾನೂನುಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಬಾಲಾಪರಾಧಿ ಕಾನೂನುಗಳನ್ನು ಬಳಸಿಕೊಳ್ಳುವ ಬಗ್ಗೆ ಕಳವಳಗಳಿವೆ ಎಂದು ಹೇಳಿದರು.

ಮಕ್ಕಳನ್ನು ಹಣದಿಂದ ಪ್ರಚೋದಿಸಿ ಅಪರಾಧಗಳನ್ನು ಮಾಡಲು ಬಳಸಿಕೊಳ್ಳುವ ಸಂದರ್ಭಗಳಿವೆ. ನಾವು ಇದನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಅಪರಾಧದಲ್ಲಿ ಬಾಲಾಪರಾಧಿಗಳ ಹೆಚ್ಚುತ್ತಿರುವ ಪಾಲ್ಗೊಳ್ಳುವಿಕೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಮತ್ತು ಕೇಂದ್ರದ ಹಸ್ತಕ್ಷೇಪದ ಅಗತ್ಯವಿರುವ ಪ್ರಸ್ತಾಪಗಳು ಸೇರಿದಂತೆ ಕ್ರಮಗಳನ್ನು ಶಿಫಾರಸು ಮಾಡಲು ರಾಜ್ಯವು ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿಯೂ ಅವರು ಘೋಷಿಸಿದರು.

ವಿಧಾನಸಭೆ ಈ ಹಿಂದೆ ಅಂಗೀಕರಿಸಿದ ಮತಾಂತರ ವಿರೋಧಿ ಮಸೂದೆಯು ಮೀಸಲಾದ ಕಾನೂನು ಚೌಕಟ್ಟನ್ನು ಒದಗಿಸುತ್ತದೆ ಎಂದ ಅವರು, ಅಸ್ತಿತ್ವದಲ್ಲಿರುವ ಬಿಎನ್‌ಎಸ್ ನಿಬಂಧನೆಗಳು ಬಲವಂತದ ಧಾರ್ಮಿಕ ಮತಾಂತರದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಅಸಮರ್ಪಕವಾಗಿವೆ ಎಂದು ವಿವರಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಗೃಹ ಖಾತೆಯನ್ನು ನಿರ್ವಹಿಸುವ ಫಡ್ನವೀಸ್, ಕಾಯ್ದೆಯ ಅನುಷ್ಠಾನಕ್ಕೆ ಕೇಂದ್ರದ ಅನುಮೋದನೆಗಾಗಿ ಕಾಯಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಶಾಸಕಾಂಗವು ಅಂಗೀಕರಿಸಿದ ಮತಾಂತರ ವಿರೋಧಿ ಕಾನೂನು ಬಲವಂತದ ಧಾರ್ಮಿಕ ಮತಾಂತರದ ಪ್ರಕರಣಗಳನ್ನು ಎದುರಿಸಲು ನಿರ್ದಿಷ್ಟ ಕಾನೂನು ಚೌಕಟ್ಟನ್ನು ಒದಗಿಸುತ್ತದೆ, ಏಕೆಂದರೆ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಅಡಿಯಲ್ಲಿ ಅಸ್ತಿತ್ವದಲ್ಲಿರುವ ನಿಬಂಧನೆಗಳು ಅಂತಹ ಅಪರಾಧಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸಾಕಷ್ಟು ವಿವರವಾಗಿಲ್ಲ ಎಂದು ಮುಖ್ಯಮಂತ್ರಿ ತಿಳಿಸಿದರು.

Karnataka Malla, Kannada Daily, Mumbai
ಕರ್ನಾಟಕ ಮಲ್ಲ
01-07-2026 ಬುಧವಾರ

ಕನ್ನಡ ಚಿತ್ರರಂಗ

ಕನ್ನಡ ಸಿನಿ ಸುದ್ದಿ ಸಾರ

ಗಿಲ್ಲಿಗೆ ಶುಕ್ರದೆಸೆ:ಸಿನಿಮಾ ಅಪ್‌ಡೇಟ್ ಬೆನ್ನಲ್ಲೇ ಒಲಿದು ಬಂದ ಇನ್ನೊಂದು ಪ್ರಶಸ್ತಿ

ಬಿಗ್ ಬಾಸ್ ಸೀಸನ್ 12ರ ವಿಜೇತ ಗಿಲ್ಲಿ ನಟ ಅವರಿಗೆ ಕೆವಿಎನ್ ಪ್ರೊಡಕ್ಷನ್ ನಿರ್ಮಾಣದ ಸಿನಿಮಾದಲ್ಲಿ ನಾಯಕನಾಗಿ ನಟಿಸುವ ಅವಕಾಶ ಸಿಕ್ಕಿದೆ. ಇದರ ಜೊತೆಗೆ,ಅವರಿಗೆ 'ಚಿತ್ತಾರಾ ಅವಾರ್ಡ್ಸ್'ನಲ್ಲಿ 'ಎಂಟರ್‌ಟೇನ್‌ಮೆಂಟ್ ಆಫ್ ದಿ ಇಯರ್' ಪ್ರಶಸ್ತಿಯೂ ಲಭಿಸಿದ್ದು, ಅಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಬಿಗ್ ಬಾಸ್ ಸೀಸನ್ 12ರ ವಿಜೇತ ಹಾಸ್ಯನಟ ನಟರಾಜ್ ಅಲಿಯಾಸ್ ಗಿಲ್ಲಿ ನಟ ಅವರು ಇದೀಗ ತಾವು ಬೆಂಗಳೂರಿಗೆ ಬಂದಿದ್ದ ಕನಸನ್ನು ಈಡೇರಿಸಿಕೊಳ್ಳಲು ಮುಂದಾಗಿದ್ದಾರೆ. ಸಿನಿಮಾದಲ್ಲಿ ನಾಯಕ ನಟನಾಗಿ ಅವಕಾಶ ಸಿಕ್ಕಿದ್ದು, ಇದೇ ಜೂ.21ರಂದು ಗಿಲ್ಲಿ ಟವರ ಜನ್ಮ ದಿನದಂದೇ ಸಿನಿಮಾ ಮುಹೂರ್ತ ನೆರವೇರಿಸಿಕೊಳ್ಳಲಾಗಿದೆ.

ಯಶ್ ನಟನೆಯ ಟಾಕ್ಸಿಕ್ ಸಿನಿಮಾ ಪ್ರೊಡಕ್ಷನ್ ಸಂಸ್ಥೆಯಾದ ಹಾಗೂ ವಿವಿಧ ಭಾಷೆಗಳಲ್ಲಿ ನೂರಾರು ಕೋಟಿ ಬಜೆಟ್ ಹಾಕಿ ಸಿನಿಮಾ ನಿರ್ಮಾಣ ಮಾಡುವ ಕೆವಿಎನ್ ಪ್ರೊಡಕ್ಷನ್ ಗಿಲ್ಲಿ ನಟನೆಯ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ಗಿಲ್ಲಿ ನಟ ಸಿನಿಮಾಗೆ ನಾಯಕನಾಗಿ ಆಯ್ಕೆಯಾಗಿದ್ದು, ಸದ್ಯಕ್ಕೆ ಪ್ಯಾನ್ ಇಂಡಿಯಾ ನಟಿ ಶ್ರೀಲೀಲಾ ಅವರನ್ನು ಹೀರೋಯಿನ್ ಆಗಿ ಸೆಲೆಕ್ಟ್ ಮಾಡಲಾಗಿದೆ.

ಇದರ ಬೆನ್ನಲ್ಲೇ ಗಿಲ್ಲಿ ನಟನಿಗೆ ಈಗ ಇನ್ನೊಂದು ಪ್ರಶಸ್ತಿ ಒಲಿದು ಬಂದಿದೆ. ಅದು ಚಿತ್ತಾರಾ ಅವಾರ್ಡ್ಸ್. ಗಿಲ್ಲಿನಟ ಅವರಿಗೆ ಎಂಟರ್ಟೇನರ್ ಆಫ್ ದಿ ಇಯರ್‌ಅವಾರ್ಡ್ ಸಿಕ್ಕಿದೆ.



ಅಲ್ಲಿಯೂ ಗಿಲ್ಲಿ ಹಾಸ್ಯ ಮರೆತಿಲ್ಲ.ನನ್ನ ವಿಟಿಯನ್ನೇ ಹಾಕಿಲ್ಲ ಎಂದು ಆ್ಯಂಕರ್ ಅಕುಲ್ ಅವರನ್ನು ಕೇಳಿದ್ದಾರೆ. ಆಗ ಅಕುಲ್ ಅವರು, ನೀವೇ ಬಂದ ಮೇಲೆ ವಿಟಿ ಯಾಕೆ? ನಿಮ್ಮ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ ಎಂದಾಗ ನಾಚಿಕೊಂಡಿದ್ದಾರೆ ಗಿಲ್ಲಿ.

ಅಷ್ಟಕ್ಕೂ ಗಿಲ್ಲಿ ನಟ ಇದಾಗಲೇ ವೇದಿಕೆ ಮೇಲೆ ರಿಷಬ್ ಶೆಟ್ಟಿ ಅವರಿಗೆ ಸಿನಿಮಾದಲ್ಲಿ ಅವಕಾಶ ಕೇಳಿಯೂ ಸಕತ್ ಸೌಂಡ್ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಗಿಲ್ಲಿ ನಟನಿಗೆ ಒಂದರ ಮೇಲೊಂದರಂತೆ ಅವಕಾಶಗಳು ಸಿಗುತ್ತಿರುವುದು ಅಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಮೊದಲ ಸಿನಿಮಾಕ್ಕೆ ಒಂದು ಕೋಟಿ ರೂ. ಸಂಭಾವನೆ ಪಡೆದ್ರಾ ಗಿಲ್ಲಿ ನಟ?

ಬಿಗ್ ಬಾಸ್ ಸೀಸನ್ 12ರ ವಿಜೇತ ಗಿಲ್ಲಿ ನಟನ ಚೊಚ್ಚಲ ಸಿನಿಮಾಕ್ಕೆ ಕೆವಿಎನ್ ಪ್ರೊಡಕ್ಷನ್ ಸಂಸ್ಥೆ ಬಂಡವಾಳ ಹೂಡುತ್ತಿದೆ. ಪ್ಯಾನ್ ಇಂಡಿಯಾ ನಟಿ ಶ್ರೀಲೀಲಾ ನಾಯಕಿಯಾಗಿ ನಟಿಸುತ್ತಿದ್ದು,ಗಿಲ್ಲಿ ನಟನಿಗೆ ಒಂದು ಕೋಟಿ ಸಂಭಾವನೆ ಸಿಗುವ ಸುದ್ದಿ ಹರಿದಾಡುತ್ತಿದೆ.

ಗಿಲ್ಲಿ ನಟ ಈ ಸಿನಿಮಾಕ್ಕೆ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆಯಲಿದ್ದಾರೆ ಎನ್ನುವ ಸುದ್ದಿ ಸದ್ದು ಮಾಡಿತ್ತು. ಅದರ ಬಗ್ಗೆ ಇದೀಗ ಗಿಲ್ಲಿ ನಟ ಮಾತನಾಡಿದ್ದಾರೆ. ನೀವು ಒಂದು ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿರುವುದು ನಿಜನಾ ಎನ್ನುವ ಪ್ರಶ್ನೆ ಮಾಡಲಾಗಿದೆ.

ಅದಕ್ಕೆ ಗಿಲ್ಲಿ ನಟ, ಆ ಬಗ್ಗೆ ಮಾತನಾಡಿದ್ದೇವೆಯಷ್ಟೇ. ಇನ್ನೂ ಫೈನಲ್ ಆಗಿಲ್ಲ ಎನ್ನುವ ಮೂಲಕ ಒಂದು ಕೋಟಿ ರೂಪಾಯಿ ಸಂಭಾವನೆ ಬಹುತೇಕ ಖಚಿತವಾಗಿದೆ. ಬಿಗ್‌ಬಾಸ್‌ನಲ್ಲಿ 50 ಲಕ್ಷ ರೂಪಾಯಿ ಗೆದ್ದ ಬಳಿಕ (ತೆರಿಗೆ ಕಳೆದು ಸಿಕ್ಕಿದ್ದು 35 ಲಕ್ಷ ರೂ) ಈಗ ಒಂದು ಕೋಟಿಗೆ ಏರಿದ್ದಾರೆ ಗಿಲ್ಲಿ ನಟ.

ಮೊನ್ನೆ ತಮ್ಮ ಸಿನಿಮಾದ ಬಗ್ಗೆ ಹೇಳುವಾಗ, ಗಿಲ್ಲಿ ನಟ ಮತ್ತು ನಿರ್ದೇಶಕರ ನಡುವೆ ಸಂಭಾಷಣೆ ನಡೆದಿತ್ತು.ಆಗ ನಿರ್ದೇಶಕರು ನಾವು ಪ್ಯಾನ್ ಇಂಡಿಯಾ ಸಿನಿಮಾ ಮಾಡೋಣ ಎಂದು ಹೇಳಿದ್ದರು. ಆಗ ಗಿಲ್ಲಿ ನಟ ಪ್ಯಾನ್ ಇಂಡಿಯಾ ಸಿನಿಮಾ ಬೇಡ, ಪ್ಯಾನ್ ಕರ್ನಾಟಕ ಸಿನಿಮಾ ಮಾಡೋಣ 4 ಭಾಷೆಗಳಲ್ಲಿ ಎಂದು ಗಿಲ್ಲಿ ನಟ ನಿರ್ದೇಶಕರಿಗೆ ಸಲಹೆ ನೀಡುತ್ತಾರೆ.

ಆಗ ಕರ್ನಾಟಕದಲ್ಲಿ ಯಾವ ನಾಲ್ಕು ಭಾಷೆಗಳಿವೆ ಎಂದು ಕೇಳಿದಾಗ ಮಂಡ್ಯ, ಮಂಗಳೂರು,ಬೆಂಗಳೂರು ಮತ್ತು ಉತ್ತರ ಕರ್ನಾಟಕ ಭಾಷೆಗಳನ್ನು ಹೇಳುತ್ತಾರೆ.

ಶೂಟಿಂಗ್ ಎಲ್ಲಿ ಎಂದು ಕೇಳಿದಾಗ ನಿರ್ದೇಶಕರು, ರಾಮನಗರ, ಚನ್ನಪಟ್ಟಣದಲ್ಲಿ ಸಿನಿಮಾ ಶೂಟಿಂಗ್ ಮಾಡೋಣ ಎಂದು ಹೇಳುತ್ತಾರೆ. ಆಗ ಗಿಲ್ಲಿನಟ ಫಾರಿನ್‌ಗೆ ಹೋಗೋಣ ಎನ್ನುತ್ತಾರೆ. ಡೈರೆಕ್ಟರ್‌ಅವರು ಬೇರೆ ದೇಶದವರಿಗೆ ನಮ್ಮ ದೇಶ ಫಾರಿನ್ ಆಗುತ್ತಲ್ವಾ ಸರ್, ಇಲ್ಲಿಯೇ ಶೂಟಿಂಗ್ ಮಾಡೋಣ ಎಂದು ಗಿಲ್ಲಿ ಹೇಳಿದ ಪಾಯಿಂಟ್ ಅನ್ನು ವಾಪಸ್ ಹೇಳಿ ಟಾಂಗ್ ಕೊಡ್ತಾರೆ.

ತನಿಷಾ ಕುಪ್ಪಂಡ, ಎಟಿಎಂ ಮಂಜು, ಸೋನಿಯಾ ರಾವುತ್ ಹೊಸ ಸಿನಿಮಾ ಕೆಎ 18



ಎಟಿಎಂ ಮಂಜು, ತನಿಷಾ ಕುಪ್ಪಂಡ ಹಾಗೂ ಸೋನಿಯಾ ರಾವುತ್ ಅವರು ಮುಖ್ಯ ಪಾತ್ರದಲ್ಲಿ ನಟಿಸುತ್ತಿರುವ ಸಿನಿಮಾಗೆ 'ಕೆಎ 18'(KA 18) ಎಂದು ಡಿಫರೆಂಟ್ ಶೀರ್ಷಿಕೆ ಇಡಲಾಗಿದೆ. ಈ ಸಿನಿಮಾದ ಮುಹೂರ್ತ ಸಮಾರಂಭವು ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಇತ್ತೀಚೆಗೆ ನೆರವೇರಿತು. ವಿ. ನಾಗೇಂದ್ರ ಪ್ರಸಾದ್ ಅವರು ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನಟ ದರ್ಶನ್ ಅವರ ಅಳಿಯ ಮನೋಜ್ ಅವರು ಕ್ಯಾಮೆರಾ ಚಾಲನೆ ಮಾಡಿದರು. 'ಅಪ್ಪಾಜಿ ಪ್ರೊಡಕ್ಷನ್ಸ್' ಮೂಲಕ ಹಿರೇಮಗಳೂರು ಮೂಲದ ಎಟಿಎಂ ಮಂಜು ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ನಿರ್ಮಾಣ ಮಾಡುವುದರ ಜತೆಗೆ ನಾಯಕನಾಗಿಯೂ ಎಟಿಎಂ ಮಂಜು ಅವರು ನಟಿಸುತ್ತಿದ್ದಾರೆ. ನಟನಾಗಿ ಇದು ಅವರಿಗೆ ಮೊದಲ ಅನುಭವ. ಮೋಹನ್ ಚಿಕ್ಕಿ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆ್ಯಕ್ಷನ್-ಕಟ್ ಹೇಳುತ್ತಿದ್ದಾರೆ. ಉತ್ತರಕಾಂಡದ ಸೋನಿಯಾ ರಾವುತ್ ಅವರು ಸಹ-ನಿರ್ಮಾಪಕಿ ಆಗಿದ್ದಾರೆ. ಅಲ್ಲದೇ, ಒಂದು ಹಾಡಿಗೆ ಹೆಜ್ಜೆ ಹಾಕುತ್ತಿದ್ದಾರೆ.

ಎಟಿಎಂ ಮಂಜು,ತನಿಷಾ ಕುಪ್ಪಂಡ, ಸೋನಿಯಾ ರಾವುತ್ ಮಾತ್ರವಲ್ಲದೇ ದೀಪು, ವಿಜಿ, ಪೂಜಾ ಮುಂತಾದ ಕಲಾವಿದರ ಕೂಡ ಕೆಎ 18 ಚಿತ್ರದಲ್ಲಿ ನಟಿಸುತ್ತಿದ್ದಾರೆ. ಶಶಿಕುಮಾರ್‌ಜೆ.ಕೆ. ಅವರು ಸಾಹಿತ್ಯ ಬರೆದಿದ್ದಾರೆ, ಮುಂಜಾನೆ ಮಂಜು ಅವರ ಛಾಯಾಗ್ರಹಣ, ರಘು ಶಿವರಾಮ್ ಅವರ ಸಂಕಲನ, ವೈಲೆಂಟ್ ವೇಲು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕೆ ಇರಲಿದೆ. ಮಂಜುನಾಥ್ ದೈವಜ್ಞ ಅವರು ನಿರ್ಮಾಣ ನಿರ್ವಹಣೆ ಮಾಡುತ್ತಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕೆಎ 18 ಸಿನಿಮಾದ ಬಗ್ಗೆ ನಿರ್ದೇಶಕ ಮೋಹನ್ ಚಿಕ್ಕಿ ಅವರು ಮಾಹಿತಿ ನೀಡಿದರು.ನಿರ್ಮಾಪಕರು ಹೇಳಿದ ಒಂದು ಎಳೆಯನ್ನು ಬಳಸಿಕೊಂಡು ಅದನ್ನು ವಿಸ್ತಾರ ಮಾಡಿಕೊಳ್ಳಲಾಗಿದೆ.ಚಿತ್ರವು ಎರಡು ಪಾತ್ರಗಳ ಸುತ್ತ ನಡೆಯುತ್ತಿದೆ.ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆ ತನಕ ನಡೆಯುವ ಘಟನೆಯಲ್ಲಿ ನಾಲ್ಕೈದು ಅಂಶಗಳು ಬರುತ್ತದೆ. ಚಿಕ್ಕಮಗಳೂರು ಸುತ್ತಮುತ್ತ ಸಂಪೂರ್ಣ ಶೂಟಿಂಗ್ ಮಾಡಲಾಗುತ್ತದೆ ಎಂದು ಅವರು ಹೇಳಿದರು.ನಿರ್ಮಾಪಕ, ನಟ ಎಟಿಎಂ ಮಂಜು ಅವರು ಚಿತ್ರದ ಬಗ್ಗೆ ಮಾತನಾಡಿದರು. ಶಾಲೆ ಕಾಲೇಜು ದಿನಗಳಿಂದಲೂ ನಾಟಕ ಪ್ರೇಮಿ. ಅಂದಿನಿಂದಲೇ ಸಿನಿಮಾ ಮಾಡಬೇಕೆಂಬ ಆಸೆ ಇತ್ತು. ಅದಕ್ಕೆ ಈಗ ಕಾಲ ಕೂಡಿಬಂದಿದೆ. 2000ನೇ ಇಸವಿಯಲ್ಲಿ ಅಪ್ಪನೊಂದಿಗೆ ಕೆಮ್ಮಣ್ಣುಗುಂಡಿಗೆ ಹೋಗಿದ್ದಾಗ ಅಲ್ಲಿ ನೋಡಿದ ಘಟನೆಯನ್ನು ನಿರ್ದೇಶಕರಿಗೆ ಹೇಳಿದೆ. ಅದರ ಬಗ್ಗೆ ಕಥೆ ಇದೆ. ಅಲ್ಲದೇ ಮೂಢನಂಬಿಕೆ ಅಂಶವನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮತ್ತೊಮ್ಮೆ 'ಫ್ಲರ್ಟ್' ಮಾಡಲು ಪ್ಲಾನ್ ಮಾಡಿರೋ ಹ್ಯಾಂಡ್‌ಸಮ್ ಹುಡುಗ ಚಂದನ್ ಕುಮಾರ್!



ಸ್ಯಾಂಡಲ್‌ವುಡ್‌ನಲ್ಲಿ ತನ್ನ ಸೌಂದರ್ಯ ಮತ್ತು ನಟನೆಯ ಮೂಲಕ ಸಾವಿರಾರು ಅಭಿಮಾನಿಗಳ ಹೃದಯ ಗೆದ್ದಿರುವ 'ಸ್ಪುರದ್ರೂಪಿ' ನಟ ಚಂದನ್ ಕುಮಾರ್, ಈಗ ಕೇವಲ ನಟನಾಗಿ ಮಾತ್ರವಲ್ಲದೆ ಒಬ್ಬ ಸಮರ್ಥ ನಿರ್ದೇಶಕನಾಗಿಯೂ ಅಬ್ಬರಿಸಲು ಸಜ್ಜಾಗಿದ್ದಾರೆ. ಅವರು ಮೊದಲ ಬಾರಿಗೆ ಆ್ಯಕ್ಷನ್-ಕಟ್ ಹೇಳಿದ್ದ ಚಿತ್ರ ಫ್ಲರ್ಟ್ .ಇತ್ತೀಚೆಗಷ್ಟೇ ತೆರೆಕಂಡಿದ್ದ ಈ ಚಿತ್ರ ಪ್ರೇಕ್ಷಕರಿಂದ ಸಖತ್ ಮೆಚ್ಚುಗೆ ಹಾಗೂ ವಿಮರ್ಶಕರಿಂದ ಉತ್ತಮ ರೇಟಿಂಗ್ ಪಡೆದುಕೊಂಡಿತ್ತು.ಆದರೆ, ಇಲ್ಲೊಂದು ಸಣ್ಣ ಟ್ವಿಸ್ಟ್ ಇದೆ!

ಸಿನಿಮಾ ಬಿಡುಗಡೆಯಾದ ಸಮಯದಲ್ಲಿ ಸಾಲು ಸಾಲು ಚಿತ್ರಗಳು ಸಾಲಾಗಿ ನಿಂತಿದ್ದವು. ತಮ್ಮ ಶ್ರಮದ ಫಲವಾದ ಈ 'ಫ್ಲರ್ಟ್' ಸಿನಿಮಾ ಪ್ರತಿಯೊಬ್ಬ ಪ್ರೇಕ್ಷಕನಿಗೂ ತಲುಪಬೇಕು, ಇದು ಕೇವಲ ಒಂದು ಚಿತ್ರಮಂದಿರಕ್ಕೆ ಸೀಮಿತವಾಗಬಾರದು ಎಂಬ ದೊಡ್ಡ ಉದ್ದೇಶದಿಂದ ಚಂದನ್ ಒಂದು ಸಾಹಸಮಯ ನಿರ್ಧಾರ ಕೈಗೊಂಡರು. ಚಿತ್ರಮಂದಿರಗಳಲ್ಲಿ ಸಿನಿಮಾ ಯಶಸ್ವಿಯಾಗಿ ಓಡುತ್ತಿದ್ದರೂ, ಅದನ್ನು ಹಿಂಪಡೆದರು! ಯಾಕೆ ಗೊತ್ತಾ? ಪ್ರೇಕ್ಷಕರಿಗೆ ಮತ್ತಷ್ಟು 'ಶಾರ್ಪ್' ಮತ್ತು 'ಎಂಟರ್ಟೈನಿಂಗ್' ಅನುಭವ ನೀಡಲು ಚಿತ್ರವನ್ನು ಟ್ರಿಮ್ ಮಾಡಿ,ಹೊಸ ಕಳೆ ನೀಡಿ ಈಗ ರೀ-ರಿಲೀಸ್‌ಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ.

ಈ ಚಿತ್ರಕ್ಕೆ ಸ್ಯಾಂಡಲ್‌ವುಡ್ ಬಾದ್‌ಷಾ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅವರ ಬೆಂಬಲ ದೊಡ್ಡ ಆನೆಯ ಬಲದಂತಿದೆ. ಚಂದನ್ ಅವರನ್ನು 'ನಮ್ಮನೆ ಹುಡುಗ' ಎಂದೇ ಪ್ರೀತಿಸುವ ಸುದೀಪ್, ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದಲ್ಲದೆ, ಫ್ರೆಂಡ್‌ಶಿಪ್ ಕುರಿತಾದ ನೀ ನನ್ನ ಜೀವ... ಎಂಬ ಅದ್ಭುತ ಹಾಡನ್ನು ಹಾಡಿದ್ದಾರೆ. ಈ ಹಾಡು ಈಗಾಗಲೆ ಸೋಶಿಯಲ್ ಮೀಡಿಯಾದಲ್ಲಿ ಧೂಳೆಬ್ಬಿಸುತ್ತಿದ್ದು, ಯೂಟ್ಯೂಬ್‌ನಲ್ಲಿ ಟ್ರೆಂಡಿಂಗ್ ಲಿಸ್ಟ್ ಸೇರಿದೆ. ಕಿಚ್ಚನ ಕಂಠಸಿರಿ ಮತ್ತು ಚಂದನ್ ಅವರ ಮೇಕಿಂಗ್ ಚಿತ್ರದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ. ಜೊತೆಗೆ,ಈ ಚಿತ್ರದ ಹಾಡುಗಳನ್ನು ಕೇಳಿದ ಲಹರಿ ವೇಲು ಅವರು ತುಂಬಾ ಇಷ್ಟಪಟ್ಟು ಆಡಿಯೋ ರೈಟ್ಸ್ ಪಡೆದುಕೊಂಡಿದ್ದಾರೆ.

ಚಿತ್ರದ ಶೀರ್ಷಿಕೆ ಕೇಳಿದ ತಕ್ಷಣ ಇದೊಂದು ತರ್ಲೆ-ತಮಾಷೆಯ ಸಿನಿಮಾ ಅಂದುಕೊಂಡರೆ ನಿಮ್ಮ ಊಹೆ ತಪ್ಪು! ಚಂದನ್ ಕುಮಾರ್‌ಅವರ ಪ್ರಕಾರ, ಫ್ಲರ್ಟ್ ಎಂದರೆ ಕೇವಲ ಹುಡುಗಿಯರನ್ನು ಚುಡಾಯಿಸುವುದಲ್ಲ,ಅದರ ಹಿಂದೆ ಗಾಢವಾದ ಪ್ರೀತಿಯೂ ಅಡಗಿರುತ್ತದೆ.ಪ್ರತಿ 'ಡವ್' ಹಿಂದೆ ಒಂದು ಸತ್ಯವಾದ ಲವ್ ಇರುತ್ತದೆ.ಇದೊಂದು ಪಕ್ಕಾ ರೊಮ್ಯಾಂಟಿಕ್ ಕಾಮಿಡಿ ಸಿನಿಮಾ ಆದರೂ, ಇದರಲ್ಲಿ ಸೈಕೋ ಕ್ಯಾರೆಕ್ಟರ್‌ಗಳ ಟ್ವಿಸ್ಟ್ ಹಾಗೂ ಎಮೋಷನಲ್ ಜರ್ನಿ ಕೂಡ ಇದೆ.ಚಿತ್ರದಲ್ಲಿ ಚಂದನ್ ಅವರಿಗೆ ಜೋಡಿಯಾಗಿ ನಿಮಿಕಾ ರತ್ನಾಕರ್ ಮತ್ತು ಅಕ್ಷತಾ ಬೋಪಣ್ಣ ಮಿಂಚಿದ್ದಾರೆ.ಇನ್ನು ಪೋಷಕ ಪಾತ್ರಗಳಲ್ಲಿ ಚಿತ್ರರಂಗದ ದಿಗ್ಗಜರ ದಂಡೇ ಇದೆ. ಹಿರಿಯ ನಟ ಅವಿನಾಶ್ ಜಡ್ಜ್ ಪಾತ್ರದಲ್ಲಿ ಗತ್ತು ತೋರಿಸಿದರೆ, ಶೃತಿ ಮತ್ತು ಸಾಧು ಕೋಕಿಲ ಅವರು ಚಿತ್ರಕ್ಕೆ ಮತ್ತಷ್ಟು ಮೆರುಗು ನೀಡಿದ್ದಾರೆ. ಗಿರೀಶ್ ಶಿವಣ್ಣ ಅವರ ಕಾಮಿಡಿ ಟೈಮಿಂಗ್ ಮತ್ತು ವಿನಯ್ ಗೌಡ ಅವರ ನಟನೆ ಚಿತ್ರದ ಪ್ಲಸ್ ಪಾಯಿಂಟ್.ಸಂಗೀತದ ವಿಷಯಕ್ಕೆ ಬಂದರೆ, ಜಸ್ಸಿ ಗಿಫ್ಟ್ ಅವರ ಹಿನ್ನೆಲೆ ಸಂಗೀತ ಮತ್ತು ಹಾಡುಗಳು ಕಿವಿಗೆ ಇಂಪಾಗಿದ್ದರೆ, ನಕುಲ್ ಅಭಯಂಕರ್‌ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಸುದೀಪ್ ಅವರ ಹಾಡು ಹೈಲೈಟ್.

ಶ್ರೀನಿವಾಸ್ ಜಯರಾಮ್ ನಿರ್ದೇಶನದ 'ಪತ್ತೇದಾರಿ' ಚಿತ್ರದ ಪೋಸ್ಟರ್ ಬಿಡುಗಡೆ



ಎ.ಕೆ ಪ್ರೊಡಕ್ಷನ್ಸ್ ಲಾಂಛನದಲ್ಲಿ ಮೊಹಮ್ಮದ್ ಅತೀಕ್ ನಿರ್ಮಾಣ ಮಾಡುತ್ತಿರುವ, ಶ್ರೀನಿವಾಸ್ ಜಯರಾಮ್ ರಚನೆ & ನಿರ್ದೇಶ ನದ ಹಾಗೂ ಕಿರ್ಝಾರ್‌ಎಂಬ ನೂತನ ಪ್ರತಿಭೆ ನಾಯಕ ನಾಗಿ ನಟಿಸುತ್ತಿರುವ 'ಪತ್ತೇದಾರಿ' ಚಿತ್ರದ ಪೋಸ್ಟರ್ ಅನಾವರಣ ಸಮಾರಂಭ ಇತ್ತೀಚೆಗೆ ಕಲಾವಿದರ ಸಂಘದಲ್ಲಿ ಅದ್ದೂರಿಯಾಗಿ ನೆರವೇರಿತು. ಕಲಾವಿದರಾದ ಮಯೂರ್‌ಪಟೇಲ್, ಶಿಷ್ಯದೀಪಕ್, ಕಾಕ್ರೋಚ್ ಸುಧೀ, ಚೆಲುವರಾಜ್, ಅರವಿಂದ್, ಗಿರೀಶ್ ಜತ್ತಿ, ನಟಿ ಭೀಮ ಖ್ಯಾತಿಯ ಪ್ರಿಯ, ಕೆ.ಜಿ.ಎಫ್ ರೆಡ್ಡಿ,ವಿಕ್ಟರಿ ವಾಸು,ನಿರ್ದೇಶಕ ಸಹನಮೂರ್ತಿ,ಪತ್ರಕರ್ತ ಹಾಗೂ ನಿರೂಪಕ ಹರೀಶ್ ನಾಗರಾಜ್ ಮುಂತಾದ ಗಣ್ಯರು ಸಮಾರಂಭಕ್ಕೆ ಆಗಮಿಸಿ ಪತ್ತೇದಾರಿ ಚಿತ್ರದ ಪೋಸ್ಟರ್ ಅನಾವರಣ ಮಾಡಿ ಚಿತ್ರ ಯಶಸ್ವಿಯಾಗಲೆಂದು ಹಾರೈಸಿದರು. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.

ಗಜಪಡೆ ಚಿತ್ರದ ನಂತರ ನಾನು ನಿರ್ದೇಶಿಸುತ್ತಿರುವ ಎರಡನೇ ಚಿತ್ರ ಪತ್ತೇದಾರಿ. ಶೀರ್ಷಿಕೆಯೇ ತಿಳಿಸುವಂತೆ ಇದೊಂದು ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಕ್ರೈಮ್ ಥ್ರಿಲ್ಲರ್ ಚಿತ್ರಗಳು ಸಾಕಷ್ಟು ಬಂದಿದೆಯಾದರೂ, ಚಿತ್ರಕಥೆ ಬೇರೆ ರೀತಿಯಲ್ಲಿರುತ್ತದೆ. ಸಾಕಷ್ಟು ಈ ರೀತಿಯ ಸಿನಿಮಾಗಳನ್ನು ನೋಡಿ,ಆ ಸ್ಪೂರ್ತಿಯಿಂದ ಈ ಚಿತ್ರದ ಕಥೆ, ಚಿತ್ರಕಥೆ ಬರೆದಿದ್ದೇನೆ.ಇನ್ನೂ ಕಿರ್ಝಾರ್ ಅವರು ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಉತ್ತಮ ಕಲಾವಿದರು ಅವರು. ಈ ಮುಂಚೆ ನಾನು ಅವರ ಜೊತೆಗೆ ಹತ್ತು ದಿನಗಳ ಕಾಲ ಬೇರೊಂದು ಚಿತ್ರಕ್ಕಾಗಿ ಕೆಲಸ ಮಾಡಿದ್ದೆ.

ಆ ಸಂದರ್ಭದಲ್ಲಿ ಕಿರ್ಝಾರ್ ಅವರಿಗೆ ಈ ಚಿತ್ರದ ಕಥೆ ಹೇಳಿದೆ.ಅವರು ಇಷ್ಟಪಟ್ಟರು. ಇದು ನಾಲ್ಕು ಪ್ರಮುಖಪಾತ್ರಗಳ ಸುತ್ತ ನಡೆಯುವ ಕಥೆ. ಕಿರ್ಝಾರ್ ಅವರ ಜೊತೆಗೆ ಗಿರಿ,ರೂಪ ಹಾಗೂ ಸಿದ್ದೇಶ್ ಅವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಈ ತಿಂಗಳು ಚಿತ್ರೀಕರಣ ಆರಂಭವಾಗಲಿದೆ. ಬೆಂಗಳೂರಿನಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕ ಶ್ರೀನಿವಾಸ್ ಜಯರಾಮ್ ತಿಳಿಸಿದರು.

ಸಮಾರಂಭಕ್ಕೆ ಆಗ ಮಿಸಿದ ಗಣ್ಯರಿಗೆ ಧನ್ಯವಾದ ತಿಳಿಸಿ ಮಾತನಾಡಿದ ನಾಯಕ ಕಿರ್ಝಾರ್, ನಿರ್ದೇಶಕರು ಹೇಳಿದ ಕಥೆ ಇಷ್ಟವಾಯಿತು. ನನ್ನ ಪಾತ್ರ ಕೂಡ ಚೆನ್ನಾಗಿದೆ.ನಾನು ಯಾವುದೇ ನಟನಾ ಶಾಲೆಯಲ್ಲಿ ಕಲಿತಿಲ್ಲ.ರಾಜಕುಮಾರ್, ವಿಷ್ಣುವರ್ಧನ್,ಶಿವರಾಜಕುಮಾರ್,ಪುನೀತ್ ರಾಜಕುಮಾರ್ ಮುಂತಾದ ಕನ್ನಡ ನಟರ ಚಿತ್ರಗಳನ್ನು ನೋಡಿ ನಟನೆ ಕಲಿತಿದ್ದೇನೆ. ಅವರೆ ನನಗೆ ಸ್ಫೂರ್ತಿ ಎಂದರು

ಪ್ರಮುಖಪಾತ್ರದಲ್ಲಿ ಅಭಿನಯಿಸುತ್ತಿರುವ ನಟ ಸಿದ್ದೇಶ್ ಮಾತನಾಡಿ, ನಿರ್ದೇಶಕರು ಒಂದೊಳ್ಳೆ ಕಥೆ ಬರೆದಿದ್ದಾರೆ. ಎ.ಕೆ. ಪ್ರೊಡಕ್ಷನ್ಸ್ ಅದ್ದೂರಿಯಾಗಿ ಈ ಸಿನಿಮಾ ನಿರ್ಮಾಣ ಮಾಡುತ್ತಿದೆ. ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದರು.

ಚಿತ್ರದ ಶೀರ್ಷಿಕೆಯೇ ತಿಳಿಸುವಂತೆ ಇದೊಂದು ಕ್ರೈಮ್ ಥ್ರಿಲ್ಲರ್‌ಕಥೆ. ಕಥೆ ಹಾಗೂ ನನ್ನ ಪಾತ್ರ ಎರಡು ಚೆನ್ನಾಗಿದೆ ಎಂದು ನಟಿ ರೂಪ ಹೇಳಿದರು. ಈ ಹಿಂದೆ ನಿರ್ದೇಶಕರು ಹಾಗೂ ನಾಯಕರ ಜೊತೆಗೆ ಒಂದು ಚಿತ್ರದಲ್ಲಿ ಅಭಿನಯಿಸಿದ್ದೆ. ಈ ಚಿತ್ರದಲ್ಲೂ ನಟಿಸುತ್ತಿದ್ದೇನೆ ಎಂದು ನಟ ಕಾಕ್ರೋಚ್ ಸುಧೀ ತಿಳಿಸಿದರು.

ರಾಜಕೀಯ ಪಕ್ಷ ಕಟ್ಟುವುದಾಗಿ ಘೋಷಿಸಿದ ನಟ ಚೇತನ್ ಅಹಿಂಸ



ಚೇತನ್ ಅಹಿಂಸ ಸಿನಿಮಾಗಳಿಗಿಂತಲೂ ತಮ್ಮ ರಾಜಕೀಯ ಹೇಳಿಕೆಗಳು, ವಿವಾದಗಳಿಂದಲೇ ಹೆಚ್ಚು ಸುದ್ದಿಯಲ್ಲಿರುತ್ತಾರೆ. ರಾಜಕೀಯ, ಜಾಗೃತಿ ಕಾರ್ಯಕ್ರಮಗಳು, ಪ್ರತಿಭಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಟ ಚೇತನ್ ಅಹಿಂಸ ಇದೀಗ ತಮ್ಮದೇ ಆದ ರಾಜಕೀಯ ಪಕ್ಷ ಕಟ್ಟುವುದಾಗಿ ಘೋಷಿಸಿದ್ದಾರೆ.ತಮ್ಮ ಪಕ್ಷದ ಬಗ್ಗೆ ಹಲವು ವಿವರಗಳನ್ನು ಚೇತನ್ ಅಹಿಂಸ ಹಂಚಿಕೊಂಡಿದ್ದು, ಪಕ್ಷದ ಧ್ಯೇಯ, ಉದ್ದೇಶ, ಗುರಿ, ಸದಸ್ಯತ್ವ ಇನ್ನೂ ಹಲವು ವಿಷಯಗಳ ಕುರಿತಾಗಿ ವಿಡಿಯೋಗಳನ್ನು ಸಹ ಹಂಚಿಕೊಂಡಿದ್ದಾರೆ.

ವಿವಿಧ ಸಮಾಜ ಪರ ಕೆಲಸ ಮಾಡುವ ಸಂಘಟನೆಗಳು, ದಲಿತ ಸಂಘಟನೆಗಳು, ಬಹುಜನ ಸಂಘಟನೆಗಳು ಸೇರಿದಂತೆ ಎಲ್ಲ ಸಂಘಟನೆಗಳನ್ನು ಒಗ್ಗಟ್ಟಾಗಿಸಿ ಹೊಸ ಪಕ್ಷ ಕಟ್ಟುತ್ತೇವೆ. ಅದಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇವೆ.224 ಕ್ಷೇತ್ರದಲ್ಲೂ ಪಕ್ಷ ಸಂಘಟನೆ ಮಾಡುತ್ತೇವೆ. 2027ರ ಜನವರಿ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಪಕ್ಷದ ಹೆಸರು, ಪಕ್ಷದ ಚಿನ್ಹೆ ಪಕ್ಷದ ಪ್ರಣಾಳಿಕೆ,ಪಕ್ಷದ ಧ್ವಜ ರಾಜ್ಯ ಸಮಿತಿ ರಚನೆ, ಇನ್ನಿತರೆ ವಿಚಾರಗಳ ಘೋಷಣೆ ಮಾಡಲಿದ್ದೇವೆ ಎಂದು ಚೇತನ್ ಅಹಿಂಸ ಹೇಳಿದ್ದಾರೆ.ಸಮ ಸಮಾಜ ಕಟ್ಟುವುದು ನಮ್ಮ ಮುಖ್ಯ ಉದ್ದೇಶ.ಅದಕ್ಕಾಗಿಯೇ ಪಕ್ಷದ ಹೆಸರಿನಲ್ಲಿ ಸಂವಿಧಾನದ ಪದಗಳಿರಲಿವೆ.ನಾವು ಪಕ್ಷವನ್ನು ರಿಜಿಸ್ಟರ್ ಮಾಡುವ ಪ್ರಕ್ರಿಯೆಯಲ್ಲಿದ್ದೇವೆ ಮತ್ತು ಅದನ್ನು ಮುಂದುವರಿಸುತ್ತೇವೆ ಎಂದ ಚೇತನ್ ಅಹಿಂಸ, ಪಕ್ಷದ ಪ್ರಣಾಳಿಕೆಯ 10 ಅಂಶಗಳನ್ನು ಸಹ ಹೇಳಿದ್ದು, ಅವು ಇಂತಿವೆ; ಲಿಂಗ ಸಮಾನತೆ ,ಜಾತಿಯ ಸಮಾನತೆ ,ಆರ್ಥಿಕ ಸಮಾನತೆ , ಭದ್ರತೆ , ಧರ್ಮ ನಿರಪೇಕ್ಷತೆ, ಪ್ರಾದೇಶಿಕತೆ ಮತ್ತು ಭಾಷೆ-ಸಾಂಸ್ಕೃತಿಕ ಸಮಾನತೆ,ಪರಿವರ್ತನಾ ಪರಿಸರವಾದ , ಭ್ರಷ್ಟಾಚಾರ ವಿರೋಧಿ, ಅಭಿವ್ಯಕ್ತಿ ಸ್ವಾತಂತ್ರ್ಯ,ಮಾಧ್ಯಮದ ಸ್ವಾತಂತ್ರ್ಯ,ಶಿಕ್ಷಣ ಮತ್ತು ಆರೋಗ್ಯದಲ್ಲಿ ಪರಿವರ್ತನೆ.ಇದರ ಜೊತೆಗೆ ಪೊಲೀಸ್ ಮತ್ತು ಜೈಲು ಸುಧಾರಣೆ,ನ್ಯಾಯ ಮತ್ತು ಮೂಲಸೌಕರ್ಯ,ತಂತ್ರಜ್ಞಾನ ಬಳಕೆ ಇನ್ನಿತರೆಗಳು ನಮ್ಮ ಉದ್ದೇಶ ಎಂದು ಚೇತನ್ ಹೇಳಿದ್ದಾರೆ.

ಡಾಲಿ ಧನಂಜಯ್ ಸಿನಿಮಾ 'ಮದರ್ ಪ್ರಾಮಿಸ್' ಬಿಡುಗಡೆಗೆ ದಿನಾಂಕ ನಿಗದಿ

ಡಾಲಿ ಧನಂಜಯ್ ಮತ್ತು ಅವರ ಹಲವು ಗೆಳೆಯರು ಒಟ್ಟಿಗೆ ಸೇರಿ ನಟಿಸಿರುವ ಸಿನಿಮಾ 'ಮದರ್‌ಪ್ರಾಮಿಸ್' ಪೋಸ್ಟರ್,ಹಾಡು ಮತ್ತು ಹೆಸರಿನಿಂದ ಈಗಾಗಲೇ ಸಾಕಷ್ಟು ಗಮನ ಸೆಳೆದಿದೆ. ಸಿನಿಮಾದ'ವೇನಿ ವೀಡಿ ವೀಚಿ' ಹಾಡು,'ನೀನೇ ಬೇಕು ಅಮ್ಮ'ಹಾಡು ಇತ್ತೀಚೆಗೆ ಬಿಡುಗಡೆ ಆದ 'ರಗಸದಅ' ಹಾಡುಗಳು ಸಖತ್ ವೈರಲ್ ಆಗಿವೆ. ಸಿನಿಮಾದ ಪೋಸ್ಟರ್ ಸಹ ಸಖತ್ ಭಿನ್ನವಾಗಿತ್ತು. ಸಿನಿಮಾದಲ್ಲಿ ಡಾಲಿಯ ಕ್ಯಾರೆಕ್ಟರ್ ಸಹ ಬಹಳ ಭಿನ್ನವಾಗಿದೆ.ಹೀಗಾಗಿ ಸಿನಿಮಾ ಸಾಕಷ್ಟು ಕುತೂಹಲ ಮೂಡಿಸಿದೆ.ಇದೀಗ ಸಿನಿಮಾದ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಣೆ ಮಾಡಿದೆ.

'ಮದರ್ ಪ್ರಾಮಿಸ್' ಸಿನಿಮಾವು ಜುಲೈ 10 ರಂದು ಬಿಡುಗಡೆ ಆಗಲಿದೆ.ಸಿನಿಮಾವು ಹಾಸ್ಯಮಯ ಆಕ್ಷನ್ ಸಿನಿಮಾ ಆಗಿದ್ದು,ಸಿನಿಮಾದಲ್ಲಿ ಸೆಂಟಿಮೆಂಟ್ ಅಂಶಗಳು ಸಹ ಇರಲಿವೆ.ಸಿನಿಮಾವನ್ನು ನಟ ಮೈಸೂರು ಪೂರ್ಣ ಅವರು ನಿರ್ದೇಶನ ಮಾಡುತ್ತಿದ್ದಾರೆ.ಅವರ ನಿರ್ದೇಶನದ ಮೊದಲ ಸಿನಿಮಾ ಇದಾಗಿದೆ.ಸಿನಿಮಾನಲ್ಲಿ ಡಾಲಿ ಧನಂಜಯ್,ಮೈಸೂರು ಪೂರ್ಣ ಸೇರಿದಂತೆ ಹಲವಾರು ಕಲಾವಿದರಿದ್ದಾರೆ.ವಿನಯಾ ಪ್ರಸಾದ್ ಅಮ್ಮನ ಪಾತ್ರದಲ್ಲಿ ನಟಿಸಿದ್ದಾರೆ. ಜೊತೆಗೆ ಗೀತಾ ಅವರು ಸಹ ತಾಯಿಯ ಪಾತ್ರದಲ್ಲಿ ನಟಿಸಿದ್ದಾರೆ.





ಸಿನಿಮಾದ ಪೋಸ್ಟರ್ ಹಂಚಿಕೊಂಡಿರುವ ಡಾಲಿ ಧನಂಜಯ್, 'ಡಿಸ್ಟ್ರಿಬ್ಯೂಟರ್ ಲಾಕ್ ಆಗಿದ್ದಾರೆ.ಡೇಟ್ ಫಿಕ್ಸ್ ಆಗಿದೆ.ಹತ್ತಿರದ ಥಿಯೇಟರ್‌ಗಳಲ್ಲಿ ಜುಲೈ 10ರಿಂದ ಆಟ ಶುರು' ಎಂದಿದ್ದಾರೆ. ಡಾಲಿ ಅವರ ಪೋಸ್ಟ್‌ಗೆ ಸಾಕಷ್ಟು ಅಭಿಮಾನಿಗಳು ಕಮೆಂಟ್ ಮಾಡಿ ಸಿನಿಮಾಕ್ಕಾಗಿ ಕಾಯುತ್ತಿರುವುದಾಗಿ ಹೇಳಿದ್ದಾರೆ.ಪೋಸ್ಟರ್ ಚೆನ್ನಾಗಿದೆ ಎಂದು ಸಹ ಪ್ರಶಂಸಿಸಿದ್ದಾರೆ.'ಮದರ್ ಪ್ರಾಮಿಸ್' ಸಿನಿಮಾ ಹಾಸ್ಯ ಪ್ರಧಾನ ರೌಡಿಗಳ ಕತೆಯನ್ನು ಒಳಗೊಂಡಿದೆ ಎನ್ನಲಾಗುತ್ತಿದೆ.'ರೋಸಿ','ದೊನ್ನೆ ಬಿರಿಯಾನಿ','ಯಾರ್ಂಡಿ', 'ಕ್ಯಾಂಡಿ','ಮ್ಯಾಗಿ','7 ಅಪ್','ಜಿಲೇಬಿ', 'ಬ್ಯಾಂಡೆಡ್' ಇನ್ನೂ ಹಲವು ಭಿನ್ನ ಹಾಗೂ ವಿಚಿತ್ರ ಹೆಸರುಗಳ ಪಾತ್ರಗಳು ಸಿನಿಮಾನಲ್ಲಿವೆ. ಸೀಮಿತ ಅವಧಿಯಲ್ಲಿ ನಡೆಯುವ ಕತೆಯನ್ನು ಈ ಸಿನಿಮಾ ಒಳಗೊಂಡಿದೆ ಎನ್ನಲಾಗುತ್ತಿದೆ.ಸಿನಿಮಾ ಬಿಡುಗಡೆ ಆದ ಬಳಿಕವಷ್ಟೆ ಎಲ್ಲದಕ್ಕೂ ಉತ್ತರ ಸಿಗಲಿದೆ. 'ಮದರ್ ಪ್ರಾಮಿಸ್' ಸಿನಿಮಾ ಅನ್ನು ಮೈಸೂರು ಪೂರ್ಣ ನಿರ್ದೇಶಿಸಿದ್ದು,ಸಿನಿಮಾಕ್ಕೆ ನವನೀತ್ ಶ್ಯಾಮ್ ಸಂಗೀತ ನೀಡಿದ್ದಾರೆ. ಧನಂಜಯ್ ಜೊತೆಗೆ ಹರ್ಷ ಅವರು ಸಹ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಸಿನಿಮಾಕ್ಕೆ ಪ್ರದೀಪ್ ರಾವ್ ಸಂಕಲನವಿದೆ.ಡಾಲಿ ಧನಂಜಯ್ ಹಲವು ಸಿನಿಮಾಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.'ಹಲಗಲಿ', 'ಉತ್ತರಕಾಂಡ','ಅಣ್ಣಾ ಫ್ರಂ ಮೆಕ್ಸಿಕೊ' ಸೇರಿದಂತೆ ಒಂದು ಪರಭಾಷೆ ಸಿನಿಮಾದಲ್ಲಿಯೂ ಡಾಲಿ ನಟಿಸುತ್ತಿದ್ದಾರೆ. ಇದರ ಜೊತೆಗೆ ಒಟ್ಟಿಗೆ 3 ಸಿನಿಮಾಗಳ ಮೇಲೆ ಹೂಡಿಕೆಯನ್ನು ಸಹ ಡಾಲಿ ಮಾಡಿದ್ದಾರೆ.

ಮತ್ತೊಬ್ಬ ರಾಜಕೀಯ ಮುಖಂಡನ ಪುತ್ರ ಸಿನಿಮಾಗೆ ಎಂಟ್ರಿ; ಸಿಪಿ ಯೋಗೇಶ್ವರ್ ಪುತ್ರನ 'ಸೈನಿಕ 2' ಯಾವಾಗ?

ರಾಜಕೀಯ ಮುಖಂಡರ ಪುತ್ರರು ಚಿತ್ರರಂಗಕ್ಕೆ ಎಂಟ್ರಿ ಕೊಡುವುದು ಹೊಸದೇನು ಅಲ್ಲ. ರಾಜಕೀಯಕ್ಕೆ ಅಧಿಕೃತವಾಗಿ ಎಂಟ್ರಿ ಕೊಡುವುದಕ್ಕೂ ಮುನ್ನ ಸಿನಿಮಾದಲ್ಲಿ ಮಿಂಚಬೇಕು ಅನ್ನೋದು ಲೆಕ್ಕಾಚಾರ. ಹಾಗಂತ ಇದು ಒಂದೆರಡು ಸಿನಿಮಾಗಳಿಗೆ ಮೀಸಲು ಅಂದುಕೊಳ್ಳುವ ಹಾಗಿಲ್ಲ.ಒಂದಿಷ್ಟು ವರ್ಷ ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿ, ಹೆಸರು ಗಳಿಸಿ ಬಳಿಕ ರಾಜಕೀಯ ಎಂಟ್ರಿ ಕೊಡುವುದು ವಾಡಿಕೆ.

ಈ ಸಾಲಿಗೆ ಕೇಂದ್ರ ಸಚಿವ ಎಚ್‌ಡಿ ಕುಮಾರ ಸ್ವಾಮಿ ಪುತ್ರ ನಿಖಿಲ್,ರೆಬೆಲ್ ಸ್ಟಾರ್ ಅಂಬರೀಷ್ ಪುತ್ರ ಅಭಿಷೇಕ್, ಗುಬ್ಬಿ ಶಾಸಕ ಎಸ್‌ಆರ್‌ಶ್ರೀನಿವಾಸ್ ಪುತ್ರ ದುಷ್ಯಂತ್,ಜಮೀರ್ ಪುತ್ರ ಝೈದ್ ಖಾನ್ ಸೇರಿದಂತೆ ಹಲವು ರಾಜಕಾರಣಿಗಳ ಪುತ್ರರು ಚಿತ್ರರಂಗದಲ್ಲಿ ನೆಲೆಯೂರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.ಈ ಮೂಲಕ ಜನಪ್ರಿಯತೆಯನ್ನು ಗಿಟ್ಟಿಸಿಕೊಳ್ಳುವುದಕ್ಕೆ ಮುಂದಾಗಿದ್ದಾರೆ.

ಈಗ ಮತ್ತೊಬ್ಬ ರಾಜಕೀಯ ಮುಖಂಡನ ಪುತ್ರನ ಎಂಟ್ರಿಗೆ ವೇದಿಕೆ ಸಜ್ಜಾಗಿದೆ.ಚನ್ನಪಟ್ಟಣದ ಶಾಸಕ ಸಿಪಿ ಯೋಗೇಶ್ವರ್‌ಹಾಗೂ ಪತ್ನಿ ಶಾಲಿನಿ ಅವರ ಪುತ್ರ ಧ್ಯಾನ್ ಯೋಗೇಶ್ವರ್ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿರುವ ವಿಷಯ ಕಳೆದ ಕೆಲವು ದಿನಗಳಿಂದ ಹರಿದಾಡುತ್ತಿದೆ.ಅದುವೇ 'ಸೈನಿಕ 2'.ಈ ಸಿನಿಮಾ ಬಗ್ಗೆ ಈಗ ಮತ್ತೊಂದು ಅಪ್‌ಡೇಟ್ ಸಿಕ್ಕಿದೆ.

ಸಿ ಪಿ ಯೋಗೇಶ್ವರ್ ಸಿನಿಮಾದಲ್ಲಿ ಹೀರೋ ಆಗಿ ಗುರುತಿಸಿಕೊಂಡಿದ್ದರು.ಅವರು ನಟಿಸಿದ ಸೂಪರ್ ಹಿಟ್ ಸಿನಿಮಾ ಸೈನಿಕ'.ಈ ಸಿನಿಮಾ ಸಿಪಿ ಯೋಗೇಶ್ವರ್ ಅವರ ಸಿನಿಮಾ ಬದುಕನ್ನೇ ಬದಲಿಸಿತ್ತು.ಇಲ್ಲಿಂದ ಅವರ ವೃತ್ತಿ ಬದುಕು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತಾ ಮುಂದಕ್ಕೆ ಹೋಗಿತ್ತು.ಈಗ ತಮ್ಮ ಪುತ್ರ ಧ್ಯಾನ್ ಯೋಗೇಶ್ವರ್ ಅವರನ್ನು ಚಿತ್ರರಂಗಕ್ಕೆ ಪರಿಚಯಿಸುವುದಕ್ಕೆ ಮುಂದಾಗಿದ್ದಾರೆ.ಅದಕ್ಕೆ ಈಗಾಗಲೇ ವೇದಿಕೆನೂ ರೆಡಿಯಾಗಿದೆ.





'ಸೈನಿಕ 2'ನಿಂದಲೇ ಎಂಟ್ರಿ

ಚನ್ನಪಟ್ಟಣದ ಶಾಸಕ ಸಿಪಿ ಯೋಗೇಶ್ವರ್‌ಗೆ ಸಕ್ಸಸ್ ಕೊಟ್ಟ ಸಿನಿಮಾ 'ಸೈನಿಕ'. ಈ ಸಿನಿಮಾದ ಸೀಕ್ವೆಲ್‌ನಿಂದಲೇ ಪುತ್ರ ಧ್ಯಾನ್ ಅನ್ನು ಚಿತ್ರರಂಗಕ್ಕೆ ಪರಿಚಯಿಸುವುದು ಯೋಗೇಶ್ವರ್‌ಅವರ ಆಸೆ. ಹೀಗಾಗಿ ಸಿನಿಮಾಗೆ 'ಸೈನಿಕ 2' ಅಂತ ಟೈಟಲ್ ಇಡಲಾಗಿದ್ದು,ಇದೇ ಟೈಟಲ್ ಮೂಲಕವೇ ಮಗನ ಇಂಟ್ರಡಕ್ಷನ್‌ಗೆ ವೇದಿಕೆ ಸಿದ್ಧವಾಗಿದೆ ಎನ್ನಲಾಗುತ್ತಿದೆ.

'ಸೈನಿಕ 2' ಸಿನಿಮಾದಲ್ಲಿ ಪುತ್ರ ಧ್ಯಾನ್ ಜೊತೆ ಸಿಪಿ ಯೋಗೇಶ್ವರ್ ಕೂಡ ನಟಿಸುತ್ತಿದ್ದಾರೆ ಅನ್ನೋ ಸುದ್ದಿನೂ ಹರಿದಾಡುತ್ತಿದೆ.ಈ ಸಿನಿಮಾವನ್ನು ನಿರ್ಮಾಪಕ ಕೆಪಿ ಶ್ರೀಕಾಂತ್ ಬ್ಯಾನರ್‌ನಲ್ಲಿ ಸೆಟ್ಟೇರಲಿದ್ದು,ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶನ ಮಾಡಿರುವ ನಾಗಣ್ಣ ಆಕ್ಷನ್ ಕಟ್ ಹೇಳುತ್ತಿದ್ದಾರೆ.ಹೀಗಾಗಿ ಬಹಳ ದಿನಗಳ ಬಳಿಕ ಸಿಪಿ ಯೋಗೇಶ್ವರ್‌ಮತ್ತೆ ಬಣ್ಣ ಹಚ್ಚಲಿದ್ದು, ಮಗನೊಂದಿಗೆ ನಟಿಸಲಿದ್ದಾರೆ ಎಂದು ವರದಿಯಾಗಿವೆ.

ಸ್ಯಾಂಡಲ್‌ವುಡ್ ಮೂಲಗಳಿಂದ ಸಿಕ್ಕಿರುವ ಮಾಹಿತಿ ಪ್ರಕಾರ,ನಾಗಣ್ಣ ಮತ್ತು ಅವರ ತಂಡ ಲೋಕೇಶನ್ ಹಂಟ್ ಮಾಡುತ್ತಿದೆ.ಬೀದರ್, ಗುಲ್ಬರ್ಗ ಭಾಗಗಳಲ್ಲಿ ಸಿನಿಮಾದ ಶೂಟಿಂಗ್ ನಡೆಯಲಿದ್ದು,ಅಲ್ಲಿ ಲೊಕೇಶನ್‌ಗಳನ್ನು ಹುಡುಕುತ್ತಿದ್ದಾರೆ.ಇದೇ ಜುಲೈ 5ರಂದು 'ಸೈನಿಕ 2' ಅದ್ದೂರಿಯಾಗಿ ಸೆಟ್ಟೇರಲಿದೆ ಅನ್ನೋ ಸುದ್ದಿ ಓಡಾಡುತ್ತಿದೆ.ಆದರೆ,ಈ ಬಗ್ಗೆ ಇನ್ನೂ ಸಿಪಿ ಯೋಗೇಶ್ವರ್ ಹಾಗೂ ಅವರ ಕುಟುಂಬ ಅಧಿಕೃತವಾಗಿ ಎಲ್ಲೂ ಹೇಳಿಕೆ ಕೊಟ್ಟಿಲ್ಲ.

ಕನ್ನಡ ಚಿತ್ರರಂಗಕ್ಕೆ ಲಕ್ಕಿ ಡೇಟ್ ಆಗುತ್ತಾ 'ಜುಲೈ 24'; 'ಕರಾವಳಿ'ಗೆ ಸಿಗುತ್ತಾ 'ಸು ಫ್ರಂ ಸೋ' ಸಕ್ಸಸ್

ಒಂದೊಂದು ಚಿತ್ರರಂಗದಲ್ಲೂ ಒಂದೊಂದು ನಂಬಿಕೆಯಿದೆ. ಕೆಲವು ಫಿಲ್ಮ್ ಇಂಡಸ್ಟ್ರಿಗೆ ಕೆಲವೊಂದು ಡೇಟ್ ಲಕ್ಕಿ. ಹೀಗಾಗಿ ಫಿಲ್ಮ್ ಮೇಕರ್ಸ್ ಅದೇ ದಿನ ಸಿನಿಮಾ ರಿಲೀಸ್ ಮಾಡುವುದಕ್ಕೆ ಸ್ಕೆಚ್ ಹಾಕಿ ನಿಂತಿರುತ್ತಾರೆ.ಇದರ ಹಿಂದೆ ಕೇವಲ ನಂಬಿಕೆ ಅಷ್ಟೇ ಅಲ್ಲ, ಲೆಕ್ಕಾಚಾರವೂ ಇರಬಹುದು. ಇನ್ನು ಕೆಲ ಮಂದಿಗೆ ಅವರು ರಿಲೀಸ್ ಮಾಡಿದ ದಿನವೇ ಲಕ್ಕಿ ಡೇಟ್ ಆಗಿರುತ್ತೆ. ಕೊನೆಗೆ ಅದೇ ದಿನವೇ ರಿಲೀಸ್ ಮಾಡುವುದು ಅಭ್ಯಾಸ ಆಗಿ ಹೋಗುತ್ತೆ.

ಸದ್ಯಕ್ಕೆ ಇಂತಹದ್ದೇ ಒಂದು ಉದಾಹರಣೆಯನ್ನು ಇನ್ನು ಕೆಲವು ದಿನಗಳಲ್ಲಿ ನೋಡಬಹುದು. ಕಳೆದ ವರ್ಷ ಸೋಲಿನಿಂದ ಕಂಗೆಟ್ಟಿ ಹೋಗಿದ್ದ ಕನ್ನಡ ಚಿತ್ರರಂಗಕ್ಕೆ ಬೂಸ್ಟ್‌ನಂತೆ ಬಂದು ಎನರ್ಜಿ ಕೊಟ್ಟಿದ್ದು 'ಸು ಫ್ರಂ ಸೋ'.ರಾಜ್ ಬಿ ಶೆಟ್ಟಿ ಹಾಗೂ ಅವರ ಸ್ನೇಹಿತರು ನಿರ್ಮಾಣ ಮಾಡಿದ್ದ ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ 100 ಕೋಟಿ ರೂಪಾಯಿಗೂ ಅಧಿಕ ಕಲೆಕ್ಷನ್ ಆಗಿತ್ತು. ಈಗ ಇದೇ ಲಕ್ಕಿ ಡೇಟ್‌ಗೆ ಅಲ್ಲಿನ ಭಾಗದ ಕಥೆಯನ್ನೇ ಹೊತ್ತು ಬಂದಿರುವ ಮತ್ತೊಂದು ಸಿನಿಮಾ ರಿಲೀಸ್ ಆಗುತ್ತಿದೆ.

ಪ್ರಜ್ವಲ್ ದೇವರಾಜ್,ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಕರಾವಳಿ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಬಹಳ ದಿನಗಳಿಂದ ರಿಲೀಸ್‌ಗಾಗಿ ಎದುರು ನೋಡುತ್ತಿದ್ದ ಈ ಸಿನಿಮಾ ಜೂನ್ 19ರಂದು ರಿಲೀಸ್ ಡೇಟ್ ಅನ್ನು ಅನೌನ್ಸ್ ಮಾಡಿದೆ. 'ಸು ಫ್ರಂ ಸೋ' ತೆರೆಕಂಡ ದಿನಾಂಕದಂದೇ ಥಿಯೇಟರ್‌ಗೆ 'ಕರಾವಳಿ' ಲಗ್ಗೆ ಇಡುತ್ತಿದೆ. ಈ ಕಾರಣಕ್ಕೆ ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಚರಿತ್ರೆ ಸೃಷ್ಟಿಸಬಹುದೇ ಎಂದು ಈಗಿಂದಲೇ ಲೆಕ್ಕಾಚಾರಗಳನ್ನು ಹಾಕುವುದಕ್ಕೆ ಶುರು ಮಾಡಿದ್ದಾರೆ.

ಈ ವರ್ಷವಂತೂ ಕನ್ನಡ ಚಿತ್ರರಂಗದಲ್ಲಿ ಯಾವುದೇ ಸಿನಿಮಾಗೂ ಬಿಗ್ ಸಕ್ಸಸ್ ಅಂತ ಸಿಕ್ಕಿಲ್ಲ.ಹಾಗಂತ ಸಿನಿಮಾ ರಿಲೀಸ್ ಆಗೋದು ಕಮ್ಮಿ ಆಗಿಲ್ಲ.ಪ್ರತಿ ವಾರ ಒಂದಲ್ಲ ಎರಡು ಸಿನಿಮಾಗಳು ಥಿಯೇಟರ್‌ಗೆ ಲಗ್ಗೆ ಇಡುತ್ತಲೇ ಇವೆ. ಕಳೆದ ವರ್ಷ ಚಿತ್ರರಂಗದ ಪರಿಸ್ಥಿತಿ ಏನು ಭಿನ್ನವಾಗಿರಲಿಲ್ಲ. ಆ ವೇಳೆ ರಾಜ್ ಬಿ ಶೆಟ್ಟಿ ನಿರ್ಮಿಸಿ, ನಟಿಸಿದ್ದ 'ಸು ಫ್ರಂ ಸೋ' ಕನ್ನಡ ಚಿತ್ರರಂಗದ ಗತಿಯನ್ನೇ ಬದಲಿಸಿತ್ತು.

ಈ ವರ್ಷನೂ ಅದೇ ಪರಿಸ್ಥಿತಿ ಇದೆ. 'ಸು ಫ್ರಂ ಸೋ' ರಿಲೀಸ್ ಆಗಿದ್ದ ದಿನವೇ (ಜುಲೈ 24)'ಕರಾವಳಿ' ಸಿನಿಮಾ ರಿಲೀಸ್ ಆಗುತ್ತಿದೆ. ವಿಶೇಷ ಅಂದರೆ, ಈ ಸಿನಿಮಾದಲ್ಲೂ ರಾಜ್ ಬಿ ಶೆಟ್ಟಿ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ಅಲ್ಲದೇ, ಎರಡೂ ಸಿನಿಮಾಗಳೂ ಕರಾವಳಿ ಭಾಗದ ಕಥೆಗಳೇ ಆಗಿವೆ.ಹೀಗಾಗಿ ಈ ಎರಡೂ ಸಿನಿಮಾಗಳಿಗೂ ಸಾಕಷ್ಟು ಸಾಮ್ಯತೆಯಿದೆ.ಈ ಕಾರಣಕ್ಕೆ ಕಳೆದ ವರ್ಷದಂತೆ ಈ ವರ್ಷವೂ ಕೂಡ ಅಂತಹದ್ದೊಂದು ಮ್ಯಾಜಿಕ್ ನಡೆಯುತ್ತಾ? ಅಂತ ಸಿನಿಮಾ ಮಂದಿ ಲೆಕ್ಕಾಚಾರ ಹಾಕುತ್ತಿದ್ದಾರೆ.

ಅಂದ್ಹಾಗೆ, 'ಕರಾವಳಿ' ಈಗಾಗಲೇ ಪೋಸ್ಟರ್ ಹಾಗೂ ಟೀಸರ್ ಮೂಲಕ ಗಮನ ಸೆಳೆದಿದೆ. ಪ್ರಜ್ವಲ್ ದೇವರಾಜ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾ ಜುಲೈ 24ರಂದು ರಾಜ್ಯಾದ್ಯಂತ ರಿಲೀಸ್ ಆಗಿದೆ.ಗುರುದತ್ ಗಾಣಿಗ ಆಕ್ಷನ್ ಕಟ್ ಹೇಳಿದ್ದು, ಸಿನಿಮಾ ಮಂದಿಯ ಕಣ್ಣು ಈ ಸಿನಿಮಾ ಮೇಲಿದೆ.'ಸು ಫ್ರಂ ಸೋ' ಹಾಗೆಯೇ 'ಕರಾವಳಿ' ಸಿನಿಮಾ ಕೂಡ ಚಿತ್ರರಂಗಕ್ಕೆ ಗೇಮ್ ಚೇಂಜರ್ ಆಗಬಹುದೇ? ಲೆಕ್ಕಾಚಾರ ಶುರುವಾಗಿದೆ.

'ಕರಾವಳಿ' ಸಿನಿಮಾದ ಹೆಸರೇ ಹೇಳುವ ಹಾಗೆ ಆ ಭಾಗದ ಸಂಸ್ಕೃತಿ ಹಾಗೂ ಸೊಗಡು ಇದೆ. ಈ ಕಥೆಯಲ್ಲಿ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸಿದ್ದರೆ, ಇವರಿಗೆ ನಾಯಕಿಯಾಗಿ ಸಂಪದಾ ಇದ್ದಾರೆ. ರಾಜ್ ಬಿ ಶೆಟ್ಟಿ ವಿಶೇಷ ಪಾತ್ರದಲ್ಲಿ ನೋಡಬಹುದು. ಹಾಗೇ ಪವರ್‌ಫುಲ್ ಪಾತ್ರದಲ್ಲಿ ನಟ ಮಿತ್ರ, ರಮೇಶ್ ಇಂದಿರ, ಶ್ರೀಧರ್ ಸೇರಿದಂತೆ ಬಿಗ್ ಸ್ಟಾರ್ ಕಾಸ್ಟ್ ಇದೆ.'ಕರಾವಳಿ' ಮನುಷ್ಯ ಹಾಗೂ ಪ್ರಾಣಿಯ ಮಧ್ಯೆ ನಡೆಯುವ ಸಂಘರ್ಷದ ಕಥೆ. ಪಕ್ಕಾ ಹಳ್ಳಿ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಈ ಸಿನಿಮಾಗೆ ಸಚಿನ್ ಬಸ್ರೂರು ಸಂಗೀತ ನೀಡಿದ್ದಾರೆ.



ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ : ಎಲ್. ವಿ. ಅಮೀನ್ ಗೌರವ ಗ್ರಂಥ ಲೋಕಾರ್ಪಣೆ ; ಪೂರ್ವಭಾವಿ ಸಭೆ

ಮುಂಬಯಿ, ಜೂ. 30- ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಆಯೋಜನೆಯಲ್ಲಿ ಹಿರಿಯ ಸಂಘಟಕ, ತುಳು ಕನ್ನಡಿಗರ ಕಣ್ಮಣಿ ಎಲ್. ವಿ. ಅಮೀನ್ ಅವರಿಗೆ ಗೌರವ ಗ್ರಂಥ ಸಮರ್ಪಣೆ ಕಾರ್ಯಕ್ರಮದ ಪೂರ್ವಭಾವಿ ಸಭೆಯು ಜೂನ್ 30ರ ಮಂಗಳವಾರದಂದು ಪೂರ್ವಾಹ್ನ ಮುಂಬಯಿ ವಿಶ್ವವಿದ್ಯಾಲಯದ ರಾನಡೆ ಭವನದಲ್ಲಿ ಜರುಗಿತು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಮಾತನಾಡಿ, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಕಳೆದ ಅನೇಕ ದಶಕಗಳಿಂದ ಕನ್ನಡ ಸಾಧಕರ ಸಾಧನೆಯನ್ನು ದಾಖಲಿಸಿ ಲೋಕ ಸಮ್ಮುಖ ಗೊಳಿಸುತ್ತಾ ಬಂದಿದೆ. ಸಾಂತಾಕ್ರೂಜ್ ಕನ್ನಡದ ಅಧ್ಯಕ್ಷರಾಗಿ, ಬಿಲ್ಲವರ ಎಸೋಸಿಯೇಶನಿನ ಅಧ್ಯಕ್ಷರಾಗಿ ಹೀಗೆ ಹತ್ತು ಹಲವು ಸಂಸ್ಥೆಗಳ ಕರ್ಣಧಾರತ್ವವನ್ನು ವಹಿಸಿ ಮುಂಬಯಿನ ತುಳು-ಕನ್ನಡಿಗರ ಹಿತ ಕಾಯುವ ಕಾಯಕವನ್ನು ಮಾಡಿದವರು ಎಲ್. ವಿ. ಅಮೀನ್.

ಅವರು ಕನ್ನಡ ವಿಭಾಗದ ಉನ್ನತಿಗೂ ಅನೇಕ ವರ್ಷಗಳಿಂದ ಸಹಾಯ ಸಹಕಾರವನ್ನು ನೀಡುತ್ತಾ ಬರುತ್ತಿದ್ದಾರೆ. ಈಗ ಅವರಿಗೆ ಎಪ್ಪತ್ತೈದರ ಸಂಭ್ರಮ. ಈ ಹಿನ್ನೆಲೆಯಲ್ಲಿ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಮೂಲಕ ಗೌರವ ಗ್ರಂಥವೊಂದನ್ನು ತರಲು ನಿರ್ಧರಿಸಲಾಗಿದ್ದು, ಈ ಪುಸ್ತಕದ ಕೆಲಸವನ್ನು ಡಾ. ಪೂರ್ಣಿಮಾ ಶೆಟ್ಟಿ ಹಾಗೂ





ಆಶಾ ಸುವರ್ಣ ಮಾಡುತ್ತಿದ್ದಾರೆ. ಎಲ್. ವಿ. ಅಮೀನ್ ಜೀವನ ಯಾನ ಈ ಮೂಲಕ ಒಂದು ಕಡೆ ದಾಖಲಾಗಿ ಉಳಿಯಲಿದೆ. ಈ ಕಾರ್ಯಕ್ರಮವು ಜುಲೈ 8ರ ಬುಧವಾರದಂದು ಮಧ್ಯಾಹ್ನ ಕವಿ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ನಡೆಯಲಿದ್ದು, ಈ ಕುರಿತು ವಿಚಾರ ವಿಮರ್ಶೆಯನ್ನು ಇದೇ ಸಂದರ್ಭದಲ್ಲಿ ನಡೆಸಲಾಯಿತು.

ಹಿರಿಯ ಸಂಘಟಕ, ಉದ್ಯಮಿ ಧರ್ಮಪಾಲ ದೇವಾಡಿಗ ಮಾತನಾಡುತ್ತಾ, ಎಲ್. ವಿ. ಅಮೀನ್ ಮುಂಬಯಿ ಕನ್ನಡಿಗರ ಪ್ರೀತಿ ಆದರಗಳಿಗೆ ಪಾತ್ರರಾದವರು. ಅವರ ಕುರಿತು ವಿಶ್ವವಿದ್ಯಾಲಯದಲ್ಲಿ ಒಂದು ಕಾರ್ಯಕ್ರಮ ನಡೆಯುತಿರುವುದು ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮದ ಯಶಸ್ಸಿಗೆ ಎಲ್ಲ ಮುಂಬಯಿ ಕನ್ನಡಿಗರು ಸಹಕರಿಸಬೇಕು. ಸಾಧಕರನ್ನು ಗೌರವಿಸುವ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಈ ಒಂದು ಉಪಕ್ರಮ ಶ್ಲಾಘನೀಯ ಎಂದು ಕಾರ್ಯಕ್ರಮದ ಕುರಿತು ಸಲಹೆ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಸಂಘಟಕ ಎಲ್. ವಿ. ಅಮೀನ್ ಮಾತನಾಡುತ್ತಾ, ನಾನು ಯಾವುದೇ ಪ್ರಚಾರ, ಪುರಸ್ಕಾರವನ್ನು ಬಯಸಿದವನಲ್ಲ. ಪ್ರೊ. ಜಿ. ಎನ್. ಉಪಾಧ್ಯ ಮಾರ್ಗದರ್ಶನದಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಹಾಗೂ ಆಶಾ ಸುವರ್ಣ ಪುಸ್ತಕದ ಕೆಲಸವನ್ನು ಮಾಡುತ್ತಿರುವುದು ನನಗೆ ತುಂಬಾ ಸಂತೋಷ ಕೊಟ್ಟಿದೆ. ಕನ್ನಡ ವಿಭಾಗದ ಜೊತೆಗೆ ನನಗೆ ಅನೇಕ ವರ್ಷಗಳ ಆತ್ಮೀಯ ಒಡನಾಟವಿದೆ. ವಿಭಾಗ ನೀಡಿದ ಈ ಗೌರವಕ್ಕೆ ನಾನು ಚಿರಋಣಿಯಾಗಿದ್ದೇನೆ. ಕನ್ನಡ ವಿಭಾಗದ ನನ್ನ ಸದಾ ಬೆಂಬಲವಿದೆ ಎಂಬುದಾಗಿ ಕೃತಜ್ಞತೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ಅದೇ ರೀತಿ ಎಂ.ಎ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಗ್ರಂಥ ಗೌರವ ನೀಡಿ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಎಂ. ಎ ವಿದ್ಯಾರ್ಥಿಗಳಾದ ಶಾರದಾ ವಳದ್, ಭಾರತಿ ಸುರೇಂದ್ರ ಆಚಾರ್ಯ, ಶಕುಂತಳಾ ಸತೀಶ್ ಆಚಾರ್ಯ, ಗಾಯತ್ರಿ ದೇವಾಡಿಗ, ಕುಸುಮಾ ಬಂಗೇರ ಉಪಸ್ಥಿತರಿದ್ದರು. ಡಾ. ಪೂರ್ಣಿಮಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಆಶಾ ಸುವರ್ಣ ಧನ್ಯವಾದ ಸಮರ್ಪಿಸಿದರು.

ಕರ್ನಾಟಕ ಸಂಘ ಡೊಂಬಿವಲಿ : ಮಹಿಳಾ ವಿಭಾಗದ ವತಿಯಿಂದ ವಿಶ್ವ ಯೋಗ ದಿನಾಚರಣೆ

ಉತ್ತಮ ಶಾರೀರಿಕ ಹಾಗೂ ಮಾನಸಿಕ ಆರೋಗ್ಯಕ್ಕಾಗಿ ಯೋಗಾಭ್ಯಾಸವೇ ದಿವ್ಯೌಷಧಿ - ಪದ್ಮಪ್ರಿಯಾ ಬಲ್ಲಾಳ



ಡೊಂಬಿವಲಿ, ಜೂ. 30- ನಮ್ಮೆಲ್ಲರ ಉತ್ತಮ ಶಾರೀರಿಕ ಹಾಗೂ ಮಾನಸಿಕ ಆರೋಗ್ಯಕ್ಕಾಗಿ ಯೋಗಾಭ್ಯಾಸ ದಿವ್ಯೌಷಧಿಯಾಗಿದೆ ಎಂದು ಖ್ಯಾತ ಯೋಗ ಗುರು ಪದ್ಮಪ್ರಿಯಾ ಬಲ್ಲಾಳ ಹೇಳಿದ್ದಾರೆ. ಅವರು ಜೂ. 22ರ ಸೋಮವಾರದಂದು ಸಂಜೆ ಡೊಂಬಿವಲಿ ಪೂರ್ವದ ಮಂಜುನಾಥ ವಿದ್ಯಾಲಯದ ಸಭಾಗೃಹದಲ್ಲಿ ಸ್ಥಳೀಯ ಪ್ರತಿಷ್ಠಿತ ಕರ್ನಾಟಕ ಸಂಘ ಡೊಂಬಿವಲಿ ಮಹಿಳಾ ವಿಭಾಗದ ಉಪ ಕಾರ್ಯಾಧ್ಯಕ್ಷೆ ಯೋಗಿನಿ ಶೆಟ್ಟಿ ಹಾಗೂ ಕಾರ್ಯದರ್ಶಿ ಮಾಧುರಿಕಾ ಬಂಗೇರ ಸಾರಥ್ಯದಲ್ಲಿ ನಡೆದ 'ವಿಶ್ವ ಯೋಗ ದಿನ'ದ ಯೋಗ ಗುರುವಾಗಿ ಆಗಮಿಸಿ ಮಾತನಾಡುತ್ತಿದ್ದರು.

ಯೋಗಾಭ್ಯಾಸವು ನಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಗಳ ನಡುವಿನ ಸಮತೋಲನದ ಜೊತೆಗೆ ಆರೋಗ್ಯ ಹಾಗೂ ಪರಿಸರದ ಸಾಮರಸ್ಯದ ನಡುವಿನ ನಿಕಟ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದ ಪದ್ಮಪ್ರಿಯಾ ಬಲ್ಲಾಳ ಅವರು ಗಡಿಯಾರದ ಅಣತಿಯಂತೆ ಬದುಕು ಸಾಗಿಸುವ ನಾವು ನಮ್ಮ ಹಿತಕ್ಕಾಗಿ ದಿನದ ಒಂದು ಗಂಟೆ ಯೋಗಾಭ್ಯಾಸಕ್ಕಾಗಿ ಮೀಸಲಿಡಬೇಕು ಎಂದು



ಕರೆ ನೀಡಿ, ಕರ್ನಾಟಕ ಸಂಘ ಡೊಂಬಿವಲಿ ಮಹಿಳಾ ವಿಭಾಗದ ಕಾರ್ಯವನ್ನು ಶ್ಲಾಘಿಸಿ ಶುಭ ಕೋರಿದರು.

ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಯೋಗಿನಿ ಶೆಟ್ಟಿ, ಯೋಗವು ನಮ್ಮ ಪ್ರಾಚೀನ ಭಾರತದಲ್ಲಿ ಹುಟ್ಟಿ ಕೊಂಡ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಅಭ್ಯಾಸವಾಗಿದ್ದು, ಇಂದು ಭಾರತ ಅಷ್ಟೇ, ವಿಶ್ವದಾದ್ಯಂತ ಕೋಟ್ಯಾವಧಿ ಜನರು ಯೋಗಾಭ್ಯಾಸವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದು, ಜೂ. 21ರ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದ್ದು, ಈ ನಿಟ್ಟಿನಲ್ಲಿ ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ ಅನನ್ಯವಾಗಿದೆ ಎಂದು ಹೇಳಿದ ಯೋಗಿನಿ ಶೆಟ್ಟಿ ನಮ್ಮ ಪ್ರಾಚೀನ ಪರಂಪರೆಯ ಯೋಗಾಭ್ಯಾಸ ವಿಶ್ವದ ಪ್ರತಿಯೊಬ್ಬರ ಮನೆ ಹಾಗೂ ಮನದಾಳದವರೆಗೂ ತಲುಪಲಿ ಎಂದು ಹಾರೈಸಿ ಶುಭ ಕೋರಿದರು. ಸುಮಾರು ಒಂದೂವರೆ ಗಂಟೆಗಳ ನಡೆದ ಯೋಗಾಭ್ಯಾಸದ ಕಾರ್ಯಕ್ರಮದಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಯೋಗ ಗುರು ಪದ್ಮಪ್ರಿಯಾ ಬಲ್ಲಾಳ ಅವರನ್ನು ಸಂಘದ ಮಹಿಳಾ ವಿಭಾಗದ ಯೋಗಿನಿ ಶೆಟ್ಟಿ, ಮಾಧುರಿಕ ಬಂಗೇರ ಹಾಗೂ ದೇವಿಕಾ ಸಾಲಾನ್ ಶಾಲು ಶ್ರೀಫಲ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಮಹಿಳಾ ವಿಭಾಗದ ಕಾರ್ಯದರ್ಶಿ ಮಾಧುರಿಕಾ ಬಂಗೇರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಬಂಟರ ಸಂಘ ಕುರ್ಲಾ- ಭಾಂಡುಪ್ ಪ್ರಾದೇಶಿಕ ಸಮಿತಿಯಿಂದ ಯಕ್ಷಗುರು ಅಜೆಕಾರು ಬಾಲಕೃಷ್ಣ ಶೆಟ್ಟಿಯವರಿಗೆ ಗುರುವಂದನೆ

ಸಮರ್ಥ ನಿರ್ದೇಶನದಿಂದ ಯಕ್ಷಗಾನ ಅತ್ಯಂತ ಯಶಸ್ವಿಯಾಗಿದ್ದು ಎಲ್ಲರ ಹೆಗ್ಗಳಿಕೆಗೆ ಪಾತ್ರವಾಗಿದೆ : ಗಿರೀಶ್ ಶೆಟ್ಟಿ ಇನ್ನ



(ಚಿತ್ರ, ವರದಿ: ದಿನೇಶ್ ಕುಲಾಲ್)

ಮುಂಬಯಿ, ಜೂ.30- ಬಂಟರ ಸಂಘ ಮುಂಬೈ ಇದರ ಕುರ್ಲಾ -ಭಾಂಡುಪ್ ಪ್ರಾದೇಶಿಕ ಸಮಿತಿಯ ವತಿಯಿಂದ ಯಕ್ಷಗುರು ಅಜೆಕಾರು ಬಾಲಕೃಷ್ಣ ಶೆಟ್ಟಿಯವರಿಗೆ ಗುರುವಂದನೆಯನ್ನು ಜೂ. 28 ರಂದು ಬಂಟರ ಭವನದ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಬಂಟರ ಸಂಘ ಮುಂಬೈಯ ಕುರ್ಲಾ-ಭಾಂಡುಪ್ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಗಿರೀಶ್ ಶೆಟ್ಟಿ ಇನ್ನ ರವರು ಮಾತನಾಡುತ್ತಾ, ಗುರುವಿನ ಗುರುವಂದನೆ ಶಿಷ್ಯನಿಗೆ ಸಾವಿರ ಯಶಸ್ಸಿನ ಮಾರ್ಗವನ್ನು ತೋರಿಸುತ್ತದೆ. ಆದ್ದರಿಂದ ಇವತ್ತಿನ ದಿವಸ ಕುರ್ಲಾ- ಭಾಂಡುಪ್ ಪ್ರಾದೇಶಿಕ ಸಮಿತಿಯ 15ನೇ ವರ್ಷದ ವಾರ್ಷಿಕೋತ್ಸವದ ಪರವಾಗಿ ಹಮ್ಮಿಕೊಳ್ಳಲಾದ 'ಅಮರಶಿಲ್ಪಿ ವೀರ ಶಂಭು ಕಲ್ಕುಡ' ಅನ್ನುವ ಯಕ್ಷಗಾನದ ನಿರ್ದೇಶನ ಮಾಡಿ ,ಎಲ್ಲಾ ಕುರ್ಲಾ -ಭಾಂಡೂಪ್‌ನ ಹವ್ಯಾಸಿ ಕಲಾವಿದರಿಗೆ ಈ ಪ್ರಸಂಗವನ್ನು ಕಲಿಸಿ, ಯಶಸ್ವಿಯಾಗಿ ಯಕ್ಷಗಾನ ಪ್ರದರ್ಶನವನ್ನು ಮಾಡಿಸಿದ್ದಾರೆ. ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿದ್ದು, ಎಲ್ಲರ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದೆಷ್ಟೋ ಕಲಾವಿದರು ಮೊದಲಿಗೆ ವೇಷ ಹಾಕಿದರೂ ಕೂಡ ಅವರನ್ನು ಸಮರ್ಪಕವಾಗಿ ತಯಾರು ಮಾಡಿದಂತಹ ಹೆಗ್ಗಳಿಕೆ ಗುರುವಿಗೆ ಸಲ್ಲುತ್ತದೆ. ಅದಕ್ಕಾಗಿ ವಿಶೇಷವಾಗಿ ಈ ಗುರುವಂದನೆಯನ್ನು ಹಮ್ಮಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಕಾರ್ಯಕ್ರಮಗಳನ್ನು ಮಾಡುವಂತಹ ಶಕ್ತಿ ನಮಗೂ ಮತ್ತು ನಿರ್ದೇಶಿಸುವಂತಹ ಶಕ್ತಿ ಗುರುವಿಗೂ ಕೊಡಲಿ ಅನ್ನುವ ವಿಶೇಷವಾದ ಆಶಯ ನಮ್ಮದು ಎಂದರು.

ಗುರುಗಳಿಗೆ ಫಲ -ಪುಷ್ಪ ಮತ್ತು ಶಾಲು ಹೊದಿಸಿ ಗುರುವಂದನೆಯನ್ನು ಮಾಡಲಾಯಿತು.

ಗುರುವಂದನೆಗೆ ಉತ್ತರವಾಗಿ ಯಕ್ಷಗುರು ಅಜೆಕಾರು ಬಾಲಕೃಷ್ಣ ಶೆಟ್ಟಿ ಯವರು ಮಾತನಾಡುತ್ತಾ, ಮೊಟ್ಟಮೊದಲ ಬಾರಿಗೆ ಈ ರೀತಿಯ ಗುರುವಂದನೆಯನ್ನು ಸ್ವೀಕರಿಸುತ್ತಾ ಇದ್ದೇನೆ. ನನಗೆ ಇದು ಭಾವನಾತ್ಮಕ ಕ್ಷಣ. ಬಂಟರ ಸಂಘ ಕುರ್ಲಾ-ಭಾಂಡುಪ್ ಪ್ರಾದೇಶಿಕ ಸಮಿತಿಯಲ್ಲಿ ಯಕ್ಷಗಾನ ಪ್ರದರ್ಶನ ನೀಡಲು ಅವಕಾಶ ಮಾಡಿಕೊಟ್ಟು, ನನ್ನಿಂದ ನಿರ್ದೇಶಿಸಲ್ಪಟ್ಟಂತಹ 'ವೀರ ಶಂಭು ಕಲ್ಕುಡ' ಅನ್ನುವ ಪ್ರಸಂಗವನ್ನು ಪ್ರಸ್ತುತಪಡಿಸಿದ ತೃಪ್ತಿ ನನಗಿದೆ .ಇದಕ್ಕೆ ಕಾರಣರಾದವರಿಗೆಲ್ಲರಿಗೂ ಕೃತಜ್ಞತೆಗಳು. ನನ್ನ ಅಕ್ಟೋಬರ್ 3 ಮತ್ತು 4ನೇ ತಾರೀಕಿಗೆ ನಡೆಯುವ ಯಕ್ಷಗಾನ ಸಮ್ಮೇಳನದಲ್ಲಿಯೂ ನನ್ನ ಶಿಷ್ಯರೆಲ್ಲರೂ ಭಾಗವಹಿಸಿ, ಆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರೆ ಅದು ನನಗೆ ನಿಜವಾದ ಗುರುದಕ್ಷಿಣೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುರ್ಲಾ -ಭಾಂಡುಪ್ ಪ್ರಾದೇಶಿಕ ಸಮಿತಿಯ ಮಹಿಳಾ ಕಾರ್ಯಾಧ್ಯಕ್ಷೆ ಅಮೃತ ಅಜಯ್ ಶೆಟ್ಟಿ, ಪ್ರಾದೇಶಿಕ ಸಮಿತಿಯ ಉಪಕಾರ್ಯಾಧ್ಯಕ್ಷರಾಗಿರುವ ನಂದಳಿಕೆ ನಾರಾಯಣ ಶೆಟ್ಟಿ, ಕಾರ್ಯದರ್ಶಿಯಾದ ಸಂತೋಷ್ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯದರ್ಶಿ ವಿನುತಾ ಶೆಟ್ಟಿ , ಜೊತೆ ಕಾರ್ಯದರ್ಶಿ ನಂದ ಶೆಟ್ಟಿ, ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷೆ ಶಾಂತಾ ನಾರಾಯಣ್ ಶೆಟ್ಟಿ, ಸಮಿತಿಯ ಜೊತೆ ಕೋಶಾಧಿಕಾರಿ ಸುರೇಶ್ ಶೆಟ್ಟಿ, ರತ್ನಾಕರ ಶೆಟ್ಟಿ ,ಯುವ ವಿಭಾಗದ ಉಪಕಾರ್ಯಾಧ್ಯಕ್ಷ ಅಕ್ಷಯ್ ಟಿ ಶೆಟ್ಟಿ ಮತ್ತು ಶಿಷ್ಯರು ಮತ್ತು ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಥಾಣೆ ಬಂಟ್ಸ್‌ನ ಸ್ಥಾಪಕರಲ್ಲೋರ್ವರಾದ ಎನ್. ಶೇಖರ್ ಶೆಟ್ಟಿಯವರ 83ನೇ ಹುಟ್ಟುಹಬ್ಬ ಆಚರಣೆ



ಥಾಣೆ, ಜೂ. 30- ಇಲ್ಲಿಯ ಪರಿಸರದ ಪ್ರತಿಷ್ಠಿತ ಹಿರಿಯ ಹೋಟೇಲು ಉದ್ಯಮಿ, ಥಾಣೆ ಬಂಟ್ಸ್‌ನ ಸ್ಥಾಪಕ ಸದಸ್ಯರಲ್ಲೋರ್ವರಾದ ಹಾಗೂ ನಿಸರ್ಗ ನೀರೆಗುತ್ತು ಮನೆತನದ ಎನ್. ಶೇಖರ್ ಶೆಟ್ಟಿಯವರ 83ನೇ ವರ್ಷದ ಹುಟ್ಟುಹಬ್ಬದ ಸಮಾರಂಭವನ್ನು ಇತ್ತೀಚೆಗೆ ಪರಿವಾರದ ಮತ್ತು ಕುಟುಂಬ ಸದಸ್ಯರ ಉಪಸ್ಥಿತಿಯಲ್ಲಿ ನವಿಮುಂಬಯಿಯ ದಿಘಾದಲ್ಲಿನ ಮಿಲೇನಿಯರ್ ಇನ್ ಹೊಟೇಲ್‌ನಲ್ಲಿ ಕೇಕ್ ಕತ್ತರಿಸುವುದರೊಂದಿಗೆ ಅರ್ಥಪೂರ್ಣ ಕಾರ್ಯಕ್ರಮದ ಮೂಲಕ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಕುಟುಂಬ ಸದಸ್ಯರು ಸೇರಿ ದೀಪ ಬೆಳಗಿಸಿ ಉದ್ಘಾಟಿಸಿ ಚಾಲನೆ ನೀಡಲಾಯಿತು. ಇದೇ ವೇಳೆ ಕುಟುಂಬದ ಮೂವರು ಸಾಧಕರಲ್ಲಿ ರೋಟರಿ ಕ್ಲಬ್‌ನ ಗೌವರ್ನರ್ ಆಗಿ ಆಯ್ಕೆಯಾದ ಥಾಣೆ ಬಂಟ್ಸ್‌ನ ಮಾಜಿ ಅಧ್ಯಕ್ಷ ಚಂದ್ರಹಾಸ್ ಶೆಟ್ಟಿ, ಸೋನಿ ಟಿ.ವಿ.ಯ ಕಾರ್ಯಕ್ರಮ ನಿರೂಪಕಿ ದಿಶಾ ಶೆಟ್ಟಿ, ಪಿ.ಎಚ್.ಡಿ. ಪದವಿಯನ್ನು ಪಡೆದ ವೇಣಿಶ್ರೀ ಅವರನ್ನು ಕುಟುಂಬದ ಸದಸ್ಯರ ವತಿಯಿಂದ ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಎನ್. ಶೇಖರ್ ಶೆಟ್ಟಿಯವರ ಸಹೋದರಿಯರಾದ ಲಲಿತಾ ಹೆಗ್ಡೆ, ಪ್ರೇಮಾ ಶೆಟ್ಟಿ ಮತ್ತು ನಿಸರ್ಗ ನೀರೆಗುತ್ತು ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ಹಾಗೇ ಕಾರ್ಯಕ್ರಮದಲ್ಲಿ ಅಡ್ವಕೇಟ್ ಪ್ರಭಾಕರ್ ಶೆಟ್ಟಿ, ಥಾಣೆ ಹೋಟೇಲ್ ಓನರ್ ಎಸೋಸಿಯೇಶನ್‌ನ ಅಧ್ಯಕ್ಷ ಪೊಲ್ಯ ಉಮೇಶ್ ಶೆಟ್ಟಿ ಮತ್ತು ಪದಾಧಿಕಾರಿಗಳು, ಥಾಣೆ ಬಂಟ್ಸ್‌ನ ಅಧ್ಯಕ್ಷ ಅಶೋಕ್ ಎಂ. ಶೆಟ್ಟಿ, ಪದಾಧಿಕಾರಿಗಳಾದ ಚಂದ್ರಶೇಖರ್ ಶೆಟ್ಟಿ, ಸುರೇಶ್ ಎನ್. ಶೆಟ್ಟಿ, ಶಶಿ ಶೆಟ್ಟಿ, ಮಾಜಿ ಅಧ್ಯಕ್ಷರುಗಳಾದ ಭಾಸ್ಕರ್ ಎಂ. ಶೆಟ್ಟಿ, ಸಿಎ. ಕರುಣಾಕರ್ ಶೆಟ್ಟಿ, ಕುಶಲ್ ಸಿ. ಭಂಡಾರಿ, ಹಾಗೇ ಉದ್ಯಮಿಗಳಾದ ಕಡಂದಲೆ ಸುರೇಶ್ ಶೆಟ್ಟಿ, ಯೋಗೇಶ್ ಶೆಟ್ಟಿ,



ಹರೀಶ್ ಸಾಲ್ಯಾನ್ ಬಜಗೋಳಿ, ರತ್ನಾಕರ್ ಶೆಟ್ಟಿ ವಿಹಾಂಗ್, ಥಾಣೆ ಬಂಟ್ಸ್ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಮೋಹಿನಿ ಆರ್. ಶೆಟ್ಟಿ ಮತ್ತು ಮಾಜಿ ಕಾರ್ಯಾಧ್ಯಕ್ಷೆಯರು, ಪದಾಧಿಕಾರಿಗಳು ಸೇರಿದಂತೆ ಎನ್. ಶೇಖರ್ ಶೆಟ್ಟಿಯವರ ಆತ್ಮೀಯ ಮಿತ್ರ ವರ್ಗದವರು ಉಪಸ್ಥಿತರಿದ್ದು ಎನ್. ಶೇಖರ್ ಶೆಟ್ಟಿಯವರನ್ನು ಶಾಲು ಹೊದಿಸಿ, ಹೂಗುಚ್ಛ ನೀಡಿ ಅಭಿನಂದಿಸಿ ಶುಭ ಹಾರೈಸಿದರು. ಕಾರ್ಯಕ್ರಮವನ್ನು ಪರಿವಾರದ ಸದಸ್ಯ ಸಿಎ. ಭಾಸ್ಕರ್ ಶೆಟ್ಟಿ ನಿರೂಪಿಸಿದರು. ಮನೋರಂಜನಾರ್ಥವಾಗಿ ಸಂಗೀತ ರಸಮಂಜರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಪ್ರೀತಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಸಿಕೊಳ್ಳುವಂತೆ ಎಚ್ಚರವಹಿಸಲು ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಕರೆ

ಮುಲ್ಕಿ, ಜೂ.30- ಜೂನ್ 30ರಿಂದ ಜುಲೈ 29ರವರೆಗೆ ರಾಜ್ಯದಲ್ಲಿ ನಡೆಯಲಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಮನೆಗಳಿಗೆ ಭೇಟಿ ನೀಡುವ ಬಿಎಲ್‌ಒಗಳಿಗೆ ಅಗತ್ಯ ಮಾಹಿತಿಯನ್ನು ಒದಗಿಸುವುದರೊಂದಿಗೆ ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳಬೇಕು ಎಂದು ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಮನವಿ ಮಾಡಿದೆ.



ಸೂರ್ಯಕಾಂತ್ ಜೆ. ಸುವರ್ಣ

ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಯಾಗದಿದ್ದಲ್ಲಿ ಭವಿಷ್ಯ ದಲ್ಲಿ ವಿವಿಧ ಸರ್ಕಾರಿ ಸೇವೆಗಳು ಹಾಗೂ ಯಾವುದೇ ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ಸಂದರ್ಭದಲ್ಲಿ ಅವಕಾಶ ವಂಚಿತರಾಗಿ ತೊಂದರೆಗಳು ಉಂಟಾಗುವ ಸಾಧ್ಯತೆ ಇರುವುದು. ಬಡತನ, ದಾಖಲೆಗಳ ಕೊರತೆ, ಸ್ಥಳಾಂತರ, ಅಂಗವೈಕಲ್ಯ ಅಥವಾ ಮಾಹಿತಿಯ ಕೊರತೆಯಿಂದ ಯಾವುದೇ ಅರ್ಹ ನಾಗರಿಕರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಇದು ಚುನಾವಣಾ ಆಯೋಗ, ರಾಜಕೀಯ ಪಕ್ಷಗಳು ಮತ್ತು ಪ್ರತಿಯೊಬ್ಬ ಜಾಗೃತ ನಾಗರಿಕನ ಜವಾಬ್ದಾರಿಯಾಗಿದೆ ಎಂದು ರಾಷ್ಟ್ರೀಯ ಬಿಲ್ಲವ ಮಹಾಮಂಡಲ ತಿಳಿಸಿದೆ. ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಯಶಸ್ವಿಯಾಗಲು ಮನೆ ಮನೆಗಳಿಗೆ ಭೇಟಿ ನೀಡುವ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಸಾರ್ವಜನಿಕರು ಸಂಪೂರ್ಣ ದಾಖಲೆ ಸಹಿತ ಸಹಕಾರ ನೀಡುವಂತೆ ರಾಷ್ಟ್ರೀಯ ಬಿಲ್ಲವರ ಮಹಾಮಂಡಲದ ಅಧ್ಯಕ್ಷರಾದ ಸೂರ್ಯಕಾಂತ್ ಜೆ. ಸುವರ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್: ಜುಲೈ 5ರಂದು ವಿಶ್ವ ಬ್ಯಾಡ್ಮಿಂಟನ್ ದಿನ ಆಚರಣೆ ಮತ್ತು ಸ್ಪರ್ಧಾಕೂಟ

ಮುಂಬಯಿ, ಜೂ. 30- ಬ್ಯಾಡ್ಮಿಂಟನ್ ಜನಪ್ರಿಯ ಆಟವಾಗಿದ್ದು ವಿಶ್ವದೆಲ್ಲೆಡೆ ಜುಲೈ 5ರಂದು ವಿಶ್ವ ಬ್ಯಾಡ್ಮಿಂಟನ್ ದಿನವಾಗಿ ಆಚರಿಸಲಾಗುತ್ತಿದೆ. ಕರ್ನಾಟಕ ವಿಶ್ವ ಕರ್ಮ ಅಸೋಸಿಯೇಷನ್‌ನ ಯುವ ವಿಭಾಗವು ಈ ವರ್ಷ ಸಂಘದ ಇತಿಹಾಸದಲ್ಲಿ ಮೊದಲ ಬಾರಿಗೆ ಬ್ಯಾಡ್ಮಿಂಟನ್ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ವಿಶ್ವ ಬ್ಯಾಡ್ಮಿಂಟನ್ ದಿನವನ್ನು ಆಚರಿಸುವ ಯೋಜನೆ ಹಾಕಿಕೊಂಡಿದೆ.

ಸಂಘದ ಸದಸ್ಯರು ಮತ್ತು ಪರಿವಾರದವರಿಗಾಗಿ ಆಯೋಜಿಸಿರುವ ಈ ಬ್ಯಾಡ್ಮಿಂಟನ್ ಸ್ಪರ್ಧೆ ಜುಲೈ 5ರಂದು ಬೆಳಿಗ್ಗೆ 9:00ರಿಂದ ಬೊರಿವಲಿ ಪಶ್ಚಿಮದ ಟಿಎಸ್‌ಜಿ ಸ್ಪೋರ್ಟ್ಸ್ ಅರೆನಾದಲ್ಲಿ ನಡೆಯಲಿದೆ.

ಬೆಳಿಗ್ಗೆ 9:00ಗೆ ವಿಶ್ವ ಬ್ಯಾಡ್ಮಿಂಟನ್ ದಿನದ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದ್ದು ಮುಂಬಯಿಯ ಗಾರ್ವಾರೆ ಕ್ಲಬ್ಬಿನ ಆಡಳಿತ ನಿರ್ವಹಣಾಧಿಕಾರಿ ಭವಾನಿ ಶಂಕರ ವಿ. ಆಚಾರ್ಯ ಉದ್ಘಾಟಿಸಲಿದ್ದಾರೆ. ರಿತೇಶ್ ಆಚಾರ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಘದ ಅಧ್ಯಕ್ಷ ರವೀಶ್ ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ.

ಬ್ಯಾಡ್ಮಿಂಟನ್‌ನಲ್ಲಿ 19 ವರ್ಷದ ಕೆಳಗಿನವರಿಗೆ, 20 ರಿಂದ 39 ವರ್ಷದವರಿಗೆ ಹಾಗೂ 40ಕ್ಕಿಂತ ಮೇಲ್ಪಟ್ಟವರಿಗೆ, ಸ್ತ್ರೀ ಮತ್ತು ಪುರುಷರಿಗೆ, ಸಿಂಗಲ್ಸ್, ಡಬ್ಬಲ್ಸ್ ಮತ್ತು ಮಿಕ್ಸ್ ಡಬಲ್ಸ್ ಎಂಬ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಅದೇ ದಿನ ಸಂಜೆ ಬಹುಮಾನ ವಿತರಣೆ ನಡೆಯಲಿದೆ.

ಸ್ಪರ್ಧೆಗಳಲ್ಲಿ ಭಾಗವಹಿಸುವರು ಮುಂಚಿತವಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವ ಅಗತ್ಯವಿದ್ದು ವಿವರಗಳಿಗಾಗಿ ಸುಧೀರ್ ಆಚಾರ್ಯ (98332 26415), ಅಶ್ವಥ್ ಆಚಾರ್ಯ (95942 01406) ಮತ್ತು ಸಾಗರ್ ಆಚಾರ್ಯ (79774 46427) ಅವರನ್ನು ಸಂಪರ್ಕಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯ ಬಂಧುಗಳು ಭಾಗವಹಿಸಿ ಸಂಘವು ಪ್ರಥಮ ಬಾರಿಗೆ ಆಯೋಜಿಸುತ್ತಿರುವ ವಿಶ್ವ ಬ್ಯಾಡ್ಮಿಂಟನ್ ದಿನದ ಯಶಸ್ಸಿಗೆ ಕಾರಣರಾಗಬೇಕೆಂದು ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್‌ನ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಣೆ ಬಿಲ್ಲವ ಸಮಾಜ ಸೇವಾ ಸಂಘ : ರಕ್ತದಾನ ಶಿಬಿರ

ರಕ್ತದಾನದ ಮಹತ್ವದ ಬಗ್ಗೆ ಜನ ಜಾಗೃತಿ ಮೂಡಿಸಿ - ಡಾ. ಅರವಿಂದ್ ಮೊಗೇರ್



(ಚಿತ್ರ, ವರದಿ : ಹರೀಶ್ ಮೂಡುಬಿದ್ರಿ)

ಪುಣೆ, ಜೂ.30 - ರಕ್ತವನ್ನು ಯಾವುದೇ ಕಾರ್ಖಾನೆಯಲ್ಲಿ ಅಥವಾ ಪ್ರಯೋಗಾಲಯದಲ್ಲಿ ತಯಾರಿಸಲು ಸಾಧ್ಯವಿಲ್ಲ. ಆರೋಗ್ಯವಂತ ವ್ಯಕ್ತಿಯ ಸ್ವಯಂಪ್ರೇರಿತ ರಕ್ತದಾನವೇ ಮತ್ತೊಬ್ಬರ ಜೀವ ಉಳಿಸುವ ಏಕೈಕ ಮಾರ್ಗವಾಗಿದೆ. ಅಪಘಾತಕ್ಕೊಳಗಾದವರು, ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾಗುವ ರೋಗಿಗಳು, ಹೆರಿಗೆ ಸಂದರ್ಭದ ತಾಯಂದಿರು, ಥಲಸ್ಸೇಮಿಯಾ ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಪ್ರತಿದಿನ ಸುರಕ್ಷಿತ ರಕ್ತದ ಅವಶ್ಯಕತೆ ಇರುತ್ತದೆ. ಸಮಾಜದಲ್ಲಿ ಇನ್ನೂ ಕೆಲವು ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳು ರಕ್ತದಾನದ ಬಗ್ಗೆ ಇವೆ. ಅವುಗಳನ್ನು ದೂರ ಮಾಡಿ ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯೂ ವರ್ಷಕ್ಕೊಮ್ಮೆಯಾದರೂ ರಕ್ತದಾನ ಮಾಡುವ ಸಂಕಲ್ಪ ಮಾಡಬೇಕು. ಒಬ್ಬ ವ್ಯಕ್ತಿಯ ಒಂದು ಯೂನಿಟ್ ರಕ್ತದಿಂದ ಹಲವಾರು ಜೀವಗಳಿಗೆ ಹೊಸ ಆಶಾಕಿರಣ ದೊರೆಯುತ್ತದೆ. 18 ರಿಂದ 65 ವರ್ಷದೊಳಗಿನ ಆರೋಗ್ಯವಂತ ವ್ಯಕ್ತಿಗಳು ವೈದ್ಯಕೀಯ ಪರೀಕ್ಷೆಯ ನಂತರ ಸುರಕ್ಷಿತವಾಗಿ ರಕ್ತದಾನ ಮಾಡಬಹುದು. ಪುರುಷರು ಮೂರು ತಿಂಗಳಿಗೊಮ್ಮೆ ಹಾಗೂ ಮಹಿಳೆಯರು ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ರಕ್ತದಾನದಿಂದ ಯಾವುದೇ ರೀತಿಯ ದೌರ್ಬಲ್ಯ ಅಥವಾ ಆರೋಗ್ಯ ಸಮಸ್ಯೆಗಳು ಉಂಟಾಗುವುದಿಲ್ಲ. ಬದಲಾಗಿ ದೇಹದಲ್ಲಿ ಹೊಸ ರಕ್ತಕಣಗಳ ಉತ್ಪತ್ತಿಗೆ ಇದು ಸಹಕಾರಿಯಾಗುತ್ತದೆ. ರಕ್ತದಾನದ ಮಹತ್ವದ ಬಗ್ಗೆ ಜನ ಜಾಗೃತಿ ಮೂಡಿಸುವುದು ಅಗತ್ಯ ಎಂದು ಪುಣೆ ಕಾತ್ರಜ್ ಭಾರತಿ ಅಸ್ಪತ್ರೆಯ ಡಾ| ಅರವಿಂದ್ ಮೋಗೆರ್ ನುಡಿದರು.

ಬಿಲ್ಲವ ಸಮಾಜ ಸೇವಾ ಸಂಘ ಪುಣೆ ಇದರ ವತಿಯಿಂದ ರಕ್ತದಾನ ಶಿಬಿರವು ಪುಣೆ ಬಿಲ್ಲವ ಸಂಘ ಮತ್ತು ಭಾರತಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಕಾತ್ರಜ್ ಇದರ ರಕ್ತನಿಧಿ ವಿಭಾಗದ ಸಹಯೋಗದೊಂದಿಗೆ ಜೂನ್ 28ರ ಆದಿತ್ಯವಾರದಂದು ಬೆಳಿಗ್ಗೆಯಿಂದ ಅಪರಾಹ್ನದವರೆಗೆ, ಪುಣೆಯ ಎರಂಡವನ ಕೆತ್ಕರ್ ರೋಡ್‌ನಲ್ಲಿಯ ಶಾಮರಾವ್ ಕಲ್ಮಾಡಿ ಹೈಸ್ಕೂಲ್ ಸಭಾ ಪ್ರಾಂಗಣದಲ್ಲಿ ಜರಗಿತು.

ಪುಣೆ ಬಿಲ್ಲವ ಸಂಘದ ಅಧ್ಯಕ್ಷ ವಿಶ್ವನಾಥ್ ಪೂಜಾರಿ ಕಡ್ತಲ ಅಧ್ಯಕ್ಷತೆಯಲ್ಲಿ ಜರಗಿದ ರಕ್ತದಾನ ಶಿಬಿರದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾರತಿ ಆಸ್ಪತ್ರೆಯ ಡಾ| ಅರವಿಂದ್ ಮೊಗೇರ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ, ಕಟ್ಟಡ ಸಮಿತಿಯ ಅಧ್ಯಕ್ಷ ಸಂದೇಶ್ ಪೂಜಾರಿ, ಉಪಾಧ್ಯಕ್ಷ ಪ್ರಕಾಶ್ ಪೂಜಾರಿ, ಮಹಿಳಾ ವಿಭಾಗದ ಅಧ್ಯಕ್ಷೆ ಉಮಾ ಕೆ. ಪೂಜಾರಿ ಮತ್ತು ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಮುಖ್ಯ ಅತಿಥಿಗಳು ರಕ್ತದಾನ ಶಿಬಿರವನ್ನು ದೀಪ ಬೆಳಗಿಸಿ ಚಾಲನೆ ನೀಡಿದರು. ಡಾ| ಅರವಿಂದ್ ಮುಗೇರ್‌ರವರನ್ನು ಬಿಲ್ಲವ ಸಂಘದ ಸಂಘದ ವತಿಯಿಂದ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಭಾರತಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ,




> ರಕ್ತ ಮನುಷ್ಯನ ದೇಹದ ಅತ್ಯಮೂಲ್ಯವಾದ ಜೀವ ದ್ರವ ಹಾಗೂ ಮನುಷ್ಯನ ರಕ್ತಕ್ಕೆ ಯಾವದೇ ಪರ್ಯಾಯವಿಲ್ಲದಿರುವುದರಿಂದ ರಕ್ತದಾನವೇ ಜೀವ ದಾನವಾಗಿದೆ. ಸ್ವಯಂಪ್ರೇರಿತ ರಕ್ತದಾನವು ಸಮಾಜದಲ್ಲಿನ ಮಾನವೀಯತೆಯ ಸಂಕೇತವಾಗಿದೆ. ಯಾವುದೇ ಜಾತಿ ಧರ್ಮ ಅಥವಾ ವರ್ಗದ ಬೇಧವಿಲ್ಲದೆ ಅಗತ್ಯವಿರುವ ಎಲ್ಲರಿಗೂ ರಕ್ತ ಸಿಗುವಂತಾಗಲು ಎಲ್ಲರೂ ರಕ್ತದಾನ ಮಾಡುವುದು ನಮ್ಮ ಕರ್ತವ್ಯ ಎಂದರಿತು ದಾನದಲ್ಲಿ ಅತ್ಯಂತ ಶ್ರೇಷ್ಠವಾದ ರಕ್ತದಾನವನ್ನು ಮಾಡಬೇಕು ಹಾಗೂ ಇನ್ನೊಬ್ಬರ ಜೀವ ಉಳಿಸುವ ಮೂಲಕ ತಮ್ಮ ದಾನದಿಂದ ತೃಪ್ತಿ ಮತ್ತು ಮಾನಸಿಕ ನೆಮ್ಮದಿಯನ್ನು ಪಡೆಯಬಹುದು. ಆರೋಗ್ಯವಂತ ಎಲ್ಲರೂ ರಕ್ತದಾನ ಮಾಡುವ ಮೂಲಕ ಸಮಾಜ ಸೇವೆಯಲ್ಲಿ ಕೈಜೋಡಿಸಬೇಕು. ನಮ್ಮ ಸಂಘದ ಮುಖಾಂತರ ಪ್ರತಿ ವರ್ಷವೂ ರಕ್ತದಾನ ಶಿಬಿರವನ್ನು ಆಯೋಜಿಸುತ್ತಾ ಬರುತಿದೆ. ಸಮಾಜ ಬಾಂಧವರು, ಎಲ್ಲಾ ಸಮಾಜದ ಬಾಂಧವರು, ಹಿತೈಷಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಕ್ತದಾನ ಮಾಡಿದ್ದಾರೆ. ಹಾಗೆಯೇ ಭಾರತಿ ಆಸ್ಪತ್ರೆಯ ವೈದ್ಯರು ಸಿಬ್ಬಂದಿಗಳು ಈ ಕಾರ್ಯವನ್ನು ಉತ್ತಮವಾಗಿ ನಡೆಸಿಕೊಟ್ಟಿದ್ದಾರೆ. ಎಲ್ಲರಿಗೂ ಅಭಿನಂದನೆಗಳನ್ನು ಹಾಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.
>
> - ವಿಶ್ವನಾಥ್ ಪೂಜಾರಿ ಕಡ್ತಲ (ಅಧ್ಯಕ್ಷ : ಬಿಲ್ಲವ ಸಂಘ ಪುಣೆ)

ಕಾತ್ರಜ್‌ನ ರಕ್ತನಿಧಿ ವಿಭಾಗದ ಡಾ| ಅರವಿಂದ್ ಮೊಗೇರ್ ರಕ್ತದಾನದ ಮಹತ್ವದ ಕುರಿತು ಅತ್ಯಂತ ಮಾಹಿತಿಪೂರ್ಣ ಹಾಗೂ ಪ್ರೇರಣಾದಾಯಕ ಉಪನ್ಯಾಸ ನೀಡಿದರು.

ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರು ಹಾಗೂ ಇತರೆ ಸಮಾಜ ಬಾಂಧವರು ಸಾರ್ವಜನಿಕರು ಈ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಿದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಭಾರತಿ ಆಸ್ಪತ್ರೆಯ ರಕ್ತನಿಧಿ ವಿಭಾಗದ ವೈದ್ಯರು, ಸಿಬ್ಬಂದಿ, ಸ್ವಯಂಸೇವಕರು, ರಕ್ತದಾನಿಗಳು ಹಾಗೂ ಎಲ್ಲ ಸಮಾಜ ಬಂಧುಗಳಿಗೆ ಸಂಘದ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು.

ವಸ್ಸಾರೋಡ್ : ಜಿ.ಎಸ್.ಬಿ ಬಾಲಾಜಿ ಮಂದಿರದಲ್ಲಿ ಶ್ರೀ ರಾಮಾಯಣ ಸಪ್ತಾಹ







ವಸ್ಸಾರೋಡ್, ಜೂ. 30- ಪರಾಭವ ನಾಮ ಸಂವತ್ಸರದ ಅಧಿಕ ಜ್ಯೇಷ್ಠ ಮಾಸದಲ್ಲಿ ಜೂ. 1ರ ಸೋಮವಾರದಿಂದ ಜೂ. 7ರ ರವಿವಾರದವರೆಗೆ ವಸ್ಸಾರೋಡ್ ಜಿ.ಎಸ್.ಬಿ ಬಾಲಾಜಿ ಮಂದಿರದಲ್ಲಿ ವಸ್ಸಾರೋಡ್ ಜಿ.ಎಸ್.ಬಿ ಬಾಲಾಜಿ ಸೇವಾ ಸಮಿತಿ ಹಾಗೂ ಶ್ರೀ ಗುರುರಾಜ ಮಾನವ ಜಾಗೃತಿ ಕೇಂದ್ರ ವಸ್ಸಾ ಜಂಟಿ ಪ್ರಾಯೋಜಕತ್ವದಲ್ಲಿ 'ಶ್ರೀ ರಾಮಾಯಣ' ಸಪ್ತಾಹ ಜರುಗಿತು.

ವಿರಾರ್‌ನಲ್ಲಿಯ ಸರ್ವಜ್ಞ ಪೀಠ ವಿದ್ಯಾಲಯ ಹಾಗೂ ಶ್ರೀ ಬಾಲಾಜಿ ಮತ್ತು ರಾಘವೇಂದ್ರ ಸ್ವಾಮಿಜಿ ಮಂದಿರದ ವಿಶ್ವಸ್ಥ ಮೇಧಾವಿ ಗುರೂಜಿ ವಿದ್ವಾನ್ ಶ್ರೀ ಪ್ರಹ್ಲಾದ ಆಚಾರ್ಯ ನಾಗರಹಳ್ಳಿ ಎಲ್ಲರಿಗೆ ಅರ್ಥವಾಗುವ ರೀತಿಯಲ್ಲಿ ಅತೀ ಸರಳವಾಗಿ ಹಿಂದಿ ಭಾಷೆಯಲ್ಲಿ ಈ ಸಪ್ತಾಹದಲ್ಲಿ ರಾಮಾಯಣದ ಬಗ್ಗೆ ಸವಿಸ್ತಾರವಾಗಿ ಪ್ರವಚನ ನೀಡಿ ಎಲ್ಲರನ್ನು ಸಂತುಷ್ಟಗೊಳಿಸಿದರು. ಭಜಕರೆಲ್ಲರು ಭಗವಾನ್ ಶ್ರೀ ರಾಮನ ಕೃಪೆಗೆ ಪಾತ್ರರಾದ ಅನುಭವ ಪಡೆದರು.

ಮೊದಲ ದಿನ ಶ್ರೀ ರಾಮಾಯಣದ ಗ್ರಂಥವನ್ನು ಮೆರವಣಿಗೆಯ ಮೂಲಕ ಬಾಲಾಜಿ ಮಂದಿರಕ್ಕೆ ತರಲಾಯಿತು. ಸಪ್ತಾಹದ ಏಳೂ ದಿನಗಳಲ್ಲಿ ಪ್ರವಚನದ ಬಳಿಕ ಗುರೂಜಿಯವರಿಂದ ಆರಾಧ್ಯ ದೇವರಾದ ಬಾಲಾಜಿ, ಪ್ರಭು ಶ್ರೀ ರಾಮ ಹಾಗೂ ಇತರ ಪರಿವಾರ ದೇವರಿಗೆ ಆರತಿ ಬೆಳಗಿದ ನಂತರ ನೆರೆದ ಭಜಕರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಲಾಯಿತು.

ಸಪ್ತಾಹದ ಮಂಗಳವು ಜೂ. 7ರ ಆದಿತ್ಯವಾರದಂದು ವಿಜೃಂಭಣೆಯಿಂದ ನಡೆಯಿತು. ರಾಮಾಯಣ ಸಪ್ತಾಹದ ಪ್ರವಚನವನ್ನು ಭಜಕರೆಲ್ಲರು ಅತಿ ಉತ್ಸಾಹ ದಿಂದ ಭಕ್ತಿ ಭಾವದಿಂದ ಆಲಿಸಿದ್ದಕ್ಕಾಗಿ ಹಾಗೂ ಶಿಸ್ತುಬದ್ಧವಾಗಿ ನಡೆಸಿಕೊಂಡ ಬಗ್ಗೆ ಗುರೂಜಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಪ್ರಭು ಶ್ರೀ ರಾಮಚಂದ್ರನ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಅಪೇಕ್ಷಿಸಿ ಆಶೀರ್ವಚನ ಮಾಡಿದರು. ಗುರು ಮಾತಾ ತೇಜಸ್ವಿ ಪ್ರಹ್ಲಾದ ನಾಗರಹಳ್ಳಿ ಕೂಡ ಪ್ರವಚನ ನೀಡಿ



ಆಶೀರ್ವದಿಸಿದರು. ಮಂಗಳಾರತಿಯ ಬಳಿಕ ಬಾಲಾಜಿ ಸೇವಾ ಸಮಿತಿ ಹಾಗೂ ಶ್ರೀ ಗುರುರಾಜ ಮಾನವ ಜಾಗೃತಿ ಕೇಂದ್ರದ ವತಿಯಿಂದ ಗುರೂಜಿ ಹಾಗೂ ಗುರು ಮಾತಾರವರಿಗೆ ಸ್ಮರಣಿಕೆ ಹಾಗೂ ಗುರು ಕಾಣಿಕೆ ನೀಡಿ ಕೃತಜ್ಞತೆ ಸಲ್ಲಿಸಿ ಶಾಲು ಹೊದಿಸಿ ಸನ್ಮಾನಿಸಲಾಯಿತು. ತದನಂತರ ಪ್ರಸಾದ ರೂಪದಲ್ಲಿ ಬಾಲಾಜಿ ಸೇವಾ ಸಮಿತಿಯ ಪ್ರಾಯೋಜಕತ್ವದಲ್ಲಿ ಅನ್ನ ಸಂತರ್ಪಣೆ ನಡೆಯಿತು ಹಾಗೂ ಲಡ್ಡು ವಿತರಿಸಲಾಯಿತು.

ಸಪ್ತಾಹದ ಏಳೂ ದಿನಗಳಲ್ಲಿ ಬಾಲಾಜಿ ಸೇವಾ ಸಮಿತಿಯ ಪ್ರಾಯೋಜಕತ್ವದಲ್ಲಿ ಪಾನಕ, ಶರಬತ್ತು ವಿತರಿಸಲಾಯಿತು ಹಾಗೂ ಶ್ರೀ ಗುರುರಾಜ ಮಾನವ ಜಾಗೃತಿ ಕೇಂದ್ರ ವಸ್ಸಾ ಪ್ರಾಯೋಜಕತ್ವದಲ್ಲಿ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ವಸ್ಸಾರೋಡ್ ಜಿ.ಎಸ್.ಬಿ ಬಾಲಾಜಿ ಸೇವಾ ಸಮಿತಿ ಹಾಗೂ ಶ್ರೀ ಗುರುರಾಜ ಮಾನವ ಜಾಗೃತಿ ಕೇಂದ್ರ ವಸ್ಸಾ ಆಡಳಿತ ಮಂಡಳಿಯ ಸದಸ್ಯರು ಹಾಗೂ ಇತರೆ ಸದಸ್ಯರ ಪೂರ್ಣ ಸಹಕಾರದಿಂದ ಶ್ರೀ ರಾಮಾಯಣ ಸಪ್ತಾಹ ಯಶಸ್ವಿಯಾಗಿ ನಡೆಯಿತು ಹಾಗೂ ಭಜಕರೆಲ್ಲರು ಶ್ರೀ ರಾಮನ ಕೃಪಾಕಟಾಕ್ಷಕ್ಕೆ ಪಾತ್ರರಾದ ಅನುಭವ ಪಡೆದರು.

ಇಂದಿನಿಂದ ಆಂಗ್ಲರ ನಾಡಿನಲ್ಲಿ ಅಯ್ಯರ್ ಪಡೆಗೆ ಟಿ20 ಸರಣಿ ಅಗ್ನಿ ಪರೀಕ್ಷೆ ; ಸೂರ್ಯವಂಶಿಗೆ ಪದಾರ್ಪಣೆ ಅವಕಾಶ ನೀಡುತ್ತಾ ಟೀಂ ಇಂಡಿಯಾ?



ಚೆಸ್ಟರ್-ಲೆ-ಸ್ಟ್ರೀಟ್ (ಯುಕೆ), ಜೂ. 30 - ವೈಭವ್ ಸೂರ್ಯವಂಶಿ ಅವರ ಬಹುನಿರೀಕ್ಷಿತ ಚೊಚ್ಚಲ ಪಂದ್ಯ ಮತ್ತು ಕಠಿಣ ವಿಕೆಟ್‌ಗಳಲ್ಲಿ ಅವರ ಬ್ಯಾಟಿಂಗ್ ದೌರ್ಬಲ್ಯಗಳು ನಾಳೆಯಿಂದ ಪ್ರಾರಂಭವಾಗುವ ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ 20 ಅಂತಾರಾಷ್ಟ್ರೀಯ ಸರಣಿಯಲ್ಲಿ ಭಾರತಕ್ಕೆ ಪ್ರಮುಖ ಚರ್ಚೆಯ ವಿಷಯವಾಗಲಿದೆ.

ಸೂರ್ಯವಂಶಿ, ಇತರ ಯಾವುದೇ ಕ್ರಿಕೆಟಿಗನಂತೆ, ಆಡುವ ಬಳಗದಲ್ಲಿ ಸ್ಥಾನ ಪಡೆಯಲು ಪ್ರಕ್ರಿಯೆಯ ಮೂಲಕ ಹೋಗಿ 'ಸರಿಯಾದ ಸಮಯಕ್ಕಾಗಿ ಕಾಯಬೇಕಾಗುತ್ತದೆ'. 15 ವರ್ಷದ ಆಕ್ರಮಣಕಾರಿಆಟಗಾರ ಕಷ್ಟಪಟ್ಟು ಕೆಲಸ ಮಾಡಲು ಸಿದ್ಧರಿದ್ದಾರೆ ಎಂದು ಹೇಳಲು ಅವರು ಯಾವುದೇ ಹಿಂಜರಿಕೆಯನ್ನು ತೋರಿಸಲಿಲ್ಲ ಎಂದು ಭಾರತದ ಸಹಾಯಕ ಕೋಚ್ ರಯಾನ್ ಟೆನ್ ಡೋಸ್ಚೇಟ್ ಹೇಳಿದ್ದಾರೆ.

ಆದರೆ ಸೂರ್ಯವಂಶಿ ತಂಡಕ್ಕೆ ಸೇರ್ಪಡೆಗೊಳ್ಳಬೇಕೆಂಬ ಕೂಗು ಹೆಚ್ಚುತ್ತಿರುವಾಗ, ಈ ಪ್ರಕ್ರಿಯೆಯನ್ನು ಅನುಸರಿಸಬೇಕೆಂದು ಆಡಳಿತ ಮಂಡಳಿ ದೃಢವಾಗಿ ನಿಲ್ಲುತ್ತದೆಯೇ ಎಂದು ಕಾದು ನೋಡಬೇಕಾಗಿದೆ. ಕಳೆದ ವಾರ ಐರ್ಲೆಂಡ್ ವಿರುದ್ಧ 0-2 ಅಂತರದ ಸೋಲಿನ ನಂತರ ತಂಡದಲ್ಲಿ ನಿರಾಶೆ ಕಂಡುಬಂದಿದೆ ಮತ್ತು ಇದು ಪ್ರಮುಖ ಬದಲಾವಣೆಗಳಿಗೆ ಕಾರಣವಾಗಬಹುದು ಎಂದು ಡೋಸ್ಚೇಟ್ ಒಪ್ಪಿಕೊಂಡರು.

ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಅವರ ಸತತ ವೈಫಲ್ಯ ಅವರನ್ನು ಕೈಬಿಡಲು ಮತ್ತು ಸೂರ್ಯವಂಶಿ ಅಭಿಷೇಕ್ ಶರ್ಮಾ ಅವರೊಂದಿಗೆ ಇನ್ನಿಂಗ್ಸ್ ಆರಂಭಿಸಲು ಅವಕಾಶ ನೀಡಲು ಒಂದು ಕಾರಣವಾಗಬಹುದು. ಬೆಲ್‌ಫಾಸ್ಟ್‌ನಲ್ಲಿ ನಡೆದ ಮೊದಲ ಟಿ20 ಅಂತಾರಾಷ್ಟ್ರೀಯ ಪಂದ್ಯದಲ್ಲಿ 20 ಎಸೆತಗಳಲ್ಲಿ 49 ರನ್ ಗಳಿಸಿದ ಅಭಿಷೇಕ್‌ಗೆ ಮತ್ತೊಂದು ಅವಕಾಶ ಸಿಗಬಹುದು.

ಐರ್ಲೆಂಡ್ ವಿರುದ್ಧದ ಎರಡು ಪಂದ್ಯಗಳ ಸರಣಿಯಲ್ಲಿ ಇಶಾನ್ ಕಿಶನ್ ಕೂಡ ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾದರು. ಅವರು ಒಂದು ಮತ್ತು 12 ರನ್‌ಗಳಿಗೆ ಔಟಾದರು. ಆದ್ದರಿಂದ, ಸೂರ್ಯವಂಶಿಯನ್ನು ಸೇರಿಸಿಕೊಳ್ಳಲು ಮ್ಯಾನೇಜ್‌ಮೆಂಟ್ ಕಿಶನ್ ರನ್ನು ಕೈಬಿಡಬಹುದು, ಆದರೆ ಅಂತಹ ನಡೆ ಕೈಬಿಟ್ಟ ಬ್ಯಾಟ್ಸ್‌ಮನ್‌ನ ಆತ್ಮಸ್ಥೈರ್ಯದ ಮೇಲೆ ಬೀರಬಹುದಾದ ಪರಿಣಾಮವನ್ನು ಅವರು ಪರಿಗಣಿಸುತ್ತಾರೆ.

ಈ ವರ್ಷದ ಟಿ20 ವಿಶ್ವಕಪ್‌ನ ಅಂತಿಮ ಹಂತಗಳಲ್ಲಿ ಸ್ಯಾಮ್ಸನ್ ಅದ್ಭುತ ಪ್ರದರ್ಶನ ನೀಡಿದರು ಮತ್ತು ಐಪಿಎಲ್‌ನಲ್ಲಿ ಚೆನ್ನೈ ಸೂಪರ್‌ಕಿಂಗ್ಸ್ ಪರ ಎರಡು ಶತಕಗಳನ್ನು ಗಳಿಸಿದರು. ಆದಾಗ್ಯೂ, ಆಯ್ಕೆ ಸಮಿತಿಯ ಅಧ್ಯಕ್ಷ ಅಜಿತ್ ಅಗರ್ಕರ್‌ಮತ್ತು ಮುಖ್ಯ ತರಬೇತುದಾರ ಗೌತಮ್ ಗಂಭೀರ್‌ನೇತೃತ್ವದ ತಂಡದ ಆಡಳಿತವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ಹಿಂದೆ ಸರಿಯುವುದಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಸೂರ್ಯಕುಮಾರ್ ಯಾದವ್ ಅವರ ಉದಾಹರಣೆಯನ್ನು ನೋಡಬಹುದು.

ತಂಡದ ಆಡಳಿತವು ಐರ್ಲೆಂಡ್ ವಿರುದ್ಧ ಸೂರ್ಯಾಂಶ್ ಶೆಡ್ಗೆ ಮತ್ತು ಪ್ರಿನ್ಸ್ ಯಾದವ್ ಅವರಿಗೆ ಚೊಚ್ಚಲ ಅವಕಾಶ ಮಾಡಿಕೊಟ್ಟಿತು. ಇದರಿಂದಾಗಿ ಸೂರ್ಯವಂಶಿ ತಮ್ಮ ಅಂತರರಾಷ್ಟ್ರೀಯ ಚೊಚ್ಚಲ ಪಂದ್ಯಕ್ಕಾಗಿ ಕಾಯಬೇಕಾಯಿತು. ಆದಾಗ್ಯೂ, ಸೂರ್ಯವಂಶಿಯನ್ನು ತಂಡದಲ್ಲಿ ಸೇರಿಸಿಕೊಳ್ಳುವುದರಿಂದ ಭಾರತದ ಬ್ಯಾಟಿಂಗ್ ಸಮಸ್ಯೆಗಳು ತಕ್ಷಣವೇ ಪರಿಹಾರವಾಗುವುದಿಲ್ಲ, ಏಕೆಂದರೆ ಈ ಸಮಸ್ಯೆಗಳು ಹಲವು ಅಂಶಗಳನ್ನು ಹೊಂದಿವೆ. ವೇಗದ ಬೌಲರ್‌ಗಳಿಗೆ ಅನುಕೂಲಕರವಾದ ಬೆಲ್‌ಫಾಸ್ಟ್ ಪಿಚ್‌ನಲ್ಲಿ ಭಾರತದ ಯಾವುದೇ ಬ್ಯಾಟ್ಸ್‌ಮನ್‌ಗಳು ಆರಾಮದಾಯಕವಾಗಿ ಕಾಣಲಿಲ್ಲ.

ಐರಿಶ್ ಬೌಲರ್‌ಗಳ ನಿಖರವಾದ ಬೌಲಿಂಗ್ ಮತ್ತು ಅಲ್ಲಿನ ಪರಿಸ್ಥಿತಿ ಆಕ್ರಮಣಕಾರಿ ಬ್ಯಾಟಿಂಗ್‌ಗೆ ಅಡ್ಡಿಯಾದಾಗ ಭಾರತೀಯ ಬ್ಯಾಟ್ಸ್‌ಮನ್‌ಗಳು ಸಂಕಷ್ಟಕ್ಕೆ ಸಿಲುಕಿದರು. ಎರಡನೇ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ತಿಲಕ್ ವರ್ಮಾ ಎಚ್ಚರಿಕೆಯಿಂದ ಆಡಿ ಅರ್ಧಶತಕ ಗಳಿಸಿದರು. ಆದರೆ 46 ಎಸೆತಗಳ ನಂತರ ಅವರ ತಾಳ್ಮೆಯ ಮಿತಿ ಮೀರಿತು. ಐರ್ಲೆಂಡ್‌ನ 183 ಮತ್ತು 155 ರನ್‌ಗಳ ಸಾಧಿಸಬಹುದಾದ ಗುರಿಗಳ ವಿರುದ್ಧ ಇತರ ಭಾರತೀಯ ಬ್ಯಾಟ್ಸ್‌ಮನ್‌ಗಳಲ್ಲಿನ ಅಸಹನೆ ಸ್ಪಷ್ಟವಾಗಿ ಗೋಚರಿಸಿತು.

ಇದಕ್ಕೆ ನಾವು ಫ್ಲಾಟ್ ಐಪಿಎಲ್ ಪಿಚ್‌ಗಳಲ್ಲಿ ಬ್ಯಾಟಿಂಗ್ ಮಾಡುವ ವಿಧಾನಕ್ಕಿಂತ ಭಿನ್ನವಾದ ವಿಧಾನದ ಅಗತ್ಯವಿತ್ತು, ಆದರೆ ಅದು ಹಾಗಾಗಲಿಲ್ಲ. ಇಂಗ್ಲೆಂಡ್‌ನ ಪರಿಸ್ಥಿತಿಗಳು ಒಂದೇ ರೀತಿಯಾಗಿರುವುದರಿಂದ ಮತ್ತು ಅವರು ಉತ್ತಮಮತ್ತು ಹೆಚ್ಚು ಅನುಭವಿ ಆಟಗಾರರನ್ನು ಎದುರಿಸಬೇಕಾಗಿರುವುದರಿಂದಭಾರತೀಯಬ್ಯಾಟ್ಸ್‌ಮನ್‌ಗಳುತಮ್ಮ ಚಿಂತನೆಮತ್ತುವಿಧಾನವನ್ನುಹೊಂದಿಕೊಳ್ಳಬೇಕಾಗುತ್ತದೆ.

ಇಂಗ್ಲೆಂಡ್ ತಂಡವು ಜೋಫ್ರಾ ಆರ್ಚರ್, ಜೋಶ್ ಟಂಗ್, ಸಾಕಿಬ್ ಮಹಮೂದ್ ಮತ್ತು ಸೋನಿ ಬೇಕರ್ ಅವರಂತಹ ಅತ್ಯಂತ ವೇಗದ ಬೌಲರ್‌ಗಳನ್ನು ಮತ್ತು ಆದಿಲ್ ರಶೀದ್ ಮತ್ತು ರೆಹಾನ್ ಅಹ್ಮದ್ ಅವರಂತಹಬುದ್ಧಿವಂತ ಸ್ಪಿನ್ ಬೌಲರ್‌ಗಳನ್ನು ಹೊಂದಿದೆ. ರಿವರ್‌ಸೈಡ್ ಮೈದಾನದಲ್ಲಿ ಸರಾಸರಿ ಟಿ20 ಅಂತಾರಾಷ್ಟ್ರೀಯ ಸ್ಕೋರ್138 ಮತ್ತು ಅತ್ಯಧಿಕ ಸ್ಕೋರ್195, ಇದು ಇಲ್ಲಿ ಆಡಿದ ಕಳೆದ ಎಂಟು ಪಂದ್ಯಗಳಲ್ಲಿ ಬೌಲರ್‌ಗಳ ಪ್ರಾಬಲ್ಯವನ್ನು ತೋರಿಸುತ್ತದೆ. ಆದ್ದರಿಂದ, ಬ್ಯಾಟ್ಸ್‌ಮನ್‌ಗಳು ಎದುರಾಳಿ ತಂಡದ ಬೌಲಿಂಗ್ ಮತ್ತು ಇಲ್ಲಿನ ಪಿಚ್‌ಗಳಿಗೆ ಹೊಂದಿಕೊಳ್ಳಲು ಹೆಚ್ಚಿನ ಸಮಯ ತೆಗೆದುಕೊಂಡರೆ, ಇಂಗ್ಲೆಂಡ್ ಐದು ಪಂದ್ಯಗಳ ಸರಣಿಯನ್ನು ಬಹಳ ಬೇಗನೆ ಗೆಲ್ಲಬಹುದು.

ಭಾರತದ ಹೊಸ ಟಿ20 ಅಂತಾರಾಷ್ಟ್ರೀಯ ನಾಯಕ ಶ್ರೇಯಸ್ ಅಯ್ಯರ್ ಖಂಡಿತವಾಗಿಯೂ ಸತತ ಎರಡನೇ ಸರಣಿಯನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಇಂಗ್ಲೆಂಡ್‌ನ ಬ್ಯಾಟಿಂಗ್ ಲೈನ್ ಅಪ್‌ನಲ್ಲಿ ನಾಯಕ ಹ್ಯಾರಿ ಬ್ರೂಕ್, ಜೋಸ್ ಬಟ್ಲರ್, ಜೋರ್ಡಾನ್ ಕಾಕ್ಸ್, ಜಾಕೋಬ್ ಬೆಥೆಲ್, ವಿಲ್ ಜ್ಯಾಕ್ಸ್, ಫಿಲ್ ಸಾಲ್ಟ್ ಮತ್ತು ಟಾಮ್ ಬ್ಯಾಂಟನ್‌ರಂತಹ ಬಲಿಷ್ಠ ಆಟಗಾರರಿದ್ದಾರೆ.

ಐರ್ಲೆಂಡ್ ವಿರುದ್ಧದ ಎರಡೂ ಪಂದ್ಯಗಳಲ್ಲಿ, ಭಾರತೀಯ ಬೌಲರ್‌ಗಳು ಆರಂಭಿಕ ಪ್ರಾಬಲ್ಯ ಸಾಧಿಸಿದರು, ನಂತರ ಮಧ್ಯಮ ಓವರ್‌ಗಳಲ್ಲಿ ಎದುರಾಳಿ ಬ್ಯಾಟ್ಸ್‌ಮನ್‌ಗಳಿಗೆ ಸುಲಭವಾಗಿ ರನ್ ಗಳಿಸಲು ಅವಕಾಶ ಮಾಡಿಕೊಟ್ಟರು. ಇದು ಮತ್ತೆ ಸಂಭವಿಸಿದಲ್ಲಿ, ಇಂಗ್ಲಿಷ್ ಬ್ಯಾಟ್ಸ್‌ಮನ್‌ಗಳು ಇದನ್ನು ಇನ್ನಷ್ಟು ನಿರ್ದಯವಾಗಿ ಬಳಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ, ಭಾರತಕ್ಕೆ ತಮ್ಮ ಬೌಲರ್‌ಗಳಿಂದ, ವಿಶೇಷವಾಗಿ ಸ್ಪಿನ್ನರ್‌ಗಳಾದ ಅಕ್ಷರ್‌ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರಿಂದ ಹೆಚ್ಚು ಸಂಘಟಿತ ಪ್ರಯತ್ನದ ಅಗತ್ಯವಿರುತ್ತದೆ, ಅವರು ಇಲ್ಲಿಯವರೆಗೆ ಹೆಚ್ಚಾಗಿ ನಿಷ್ಪರಿಣಾಮಕಾರಿಯಾಗಿದ್ದಾರೆ.

ತಂಡಗಳು ಈ ಕೆಳಗಿನಂತಿವೆ:

ಭಾರತ: ಶ್ರೇಯಸ್ ಅಯ್ಯರ್(ನಾಯಕ), ತಿಲಕ್ ವರ್ಮಾ, ರವಿ ಬಿಷ್ಣೋಯ್, ಅಭಿಷೇಕ್ ಶರ್ಮಾ, ಸೂರ್ಯಾಂಶ್ ಶೆಡ್ಗೆ, ಪ್ರಸಿದ್ಧ್ ಕೃಷ್ಣ, ಸಂಜು ಸ್ಯಾಮ್ಸನ್, ಅಕ್ಷರ್‌ಪಟೇಲ್, ಹರ್ಷಿತ್ ರಾಣಾ, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಶಿವಂ ದುಬೆ, ಪ್ರಿನ್ಸ್ ಯಾದವ್, ವೈಭವ್ ಸೂರ್ಯವಂಶಿ.

ಇಂಗ್ಲೆಂಡ್: ಹ್ಯಾರಿ ಬ್ರೂಕ್ (ನಾಯಕ), ರೆಹಾನ್ ಅಹ್ಮದ್, ಜೋಫ್ರಾ ಆರ್ಚರ್, ಸನ್ನಿ ಬೇಕರ್, ಟಾಮ್ ಬ್ಯಾಂಟನ್, ಜಾಕೋಬ್ ಬೆಥೆಲ್, ಜೋಸ್ ಬಟ್ಲರ್, ಜೇಮ್ಸ್ ಕೋಲ್ಸ್, ಜೋರ್ಡಾನ್ ಕಾಕ್ಸ್, ಸ್ಯಾಮ್ ಕುರಾನ್, ಲಿಯಾಮ್ ಡಾಸನ್, ವಿಲ್ ಜಾಕ್ಸ್, ಸಾಕಿಬ್ ಮಹಮೂದ್, ಆದಿಲ್ ರಶೀದ್, ಫಿಲ್ ಸಾಲ್ಟ್, ಜೋಶ್ ಟಂಗ್ ಮತ್ತು ಲ್ಯೂಕ್ ವುಡ್.

ಪಂದ್ಯಾರಂಭ: ರಾತ್ರಿ 10.00 ಕ್ಕೆ (ಭಾರತೀಯ ಕಾಲಮಾನ).

4 ಬಾರಿಯ ಚಾಂಪಿಯನ್ ಜರ್ಮನಿಯನ್ನು ಫಿಫಾ ವಿಶ್ವಕಪ್‌ನಿಂದ ಹೊರದಬ್ಬಿದ ಪರಾಗ್ವೆ



ಲಾಸ್ ಏಂಜಲೀಸ್, ಜೂ.30 - ಮಾಜಿ ಚಾಂಪಿಯನ್ ಜರ್ಮನಿ ತಂಡವು 2026ರ ವಿಶ್ವಕಪ್‌ನಿಂದ ಹೊರಬಿದ್ದಿದ್ದು, ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಇದುವರೆಗಿನ ಅತಿದೊಡ್ಡ ಸೋಲುಗಳಲ್ಲಿ ಒಂದಾಗಿದೆ. ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡವು 32ನೇ ಸುತ್ತಿನಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಕೊನೆಯ ಶ್ರೇಯಾಂಕಿತ ಪರಾಗ್ವೆ ತಂಡ ವಿರುದ್ಧ ಸೋತು ಟೂರ್ನಿಯಿಂದ ಹೊರಬಿದ್ದಿತು.

ನಿಗದಿತ ಸಮಯದಲ್ಲಿ ಮತ್ತು ಹೆಚ್ಚುವರಿ ಸಮಯದಲ್ಲಿ ಎರಡೂ ತಂಡಗಳು ತಲಾ ಒಂದು ಗೋಲು ಗಳಿಸಿದ ನಂತರ ಪಂದ್ಯವು ಶೂಟೌಟ್‌ಗೆ ತಲುಪಿತು.

ಶೂಟೌಟ್‌ನಲ್ಲಿ ಮೂರು ನಿರ್ಣಾಯಕ ಕಿಕ್‌ಗಳನ್ನು ತಪ್ಪಿಸಿಕೊಂಡಿದ್ದ ಜರ್ಮನಿಯನ್ನು 3-4 ಗೋಲುಗಳಿಂದ ಸೋಲಿಸುವ ಮೂಲಕ ಪರಾಗ್ವೆ ಸ್ಮರಣೀಯ ಗೆಲುವು ಸಾಧಿಸಿತು. ಪಂದ್ಯದ ಮೊದಲಾರ್ಧದಲ್ಲಿ ಪರಾಗ್ವೆ ಜರ್ಮನಿಗೆ ಆಘಾತ ನೀಡಿ 42ನೇ ನಿಮಿಷದಲ್ಲಿ ಮುನ್ನಡೆ ಸಾಧಿಸಿತು. ಮಟಿಯಾಸ್ ಗಲಾರ್ಜಾ ನೀಡಿದ ಅದ್ಭುತ ಕ್ರಾಸ್ ಅನ್ನು ಜೂಲಿಯೊ ಎನ್ಸಿಸೊ ಗೋಲು ಪೆಟ್ಟಿಗೆಗೆ ಹಾಕಿದರು. ಆದರೆ ಜರ್ಮನಿ ದ್ವಿತೀಯಾರ್ಧದಲ್ಲಿ ಚೇತರಿಸಿಕೊಂಡು ಬಲವಾಗಿ ಕಮ್‌ಬ್ಯಾಕ್ ಮಾಡಿ 54ನೇ ನಿಮಿಷದಲ್ಲಿ ಗೋಲು ಗಳಿಸಿ ಸಮಬಲ ಸಾಧಿಸಿತು.

ಎಡಭಾಗದಿಂದ ಫ್ಲೋರಿಯನ್ ವಿರ್ತ್ ನೀಡಿದ ಅದ್ಭುತ ಹೆಡರ್‌ಮೂಲಕ ಕೈ ಹ್ಯಾವರ್ಟ್ಜ್ ಚೆಂಡನ್ನು ನೆಟ್‌ಗೆ ಹೆಡ್ ಮಾಡಿದರು. ನಂತರ ಎರಡೂ ತಂಡಗಳು ಗೆಲುವಿನ ಗೋಲು ಗಳಿಸಲು ಶ್ರಮಿಸಿದವು, ಆದರೆ ಸಾಧ್ಯವಾಗಲಿಲ್ಲ. ವಿಶ್ವಕಪ್ ಇತಿಹಾಸದಲ್ಲಿ ಒಮ್ಮೆಯೂ ಶೂಟೌಟ್‌ನಲ್ಲಿ ಸೋಲದ ಜರ್ಮನಿ ಈ ಬಾರಿ ದೊಡ್ಡ ಹಿನ್ನಡೆ ಅನುಭವಿಸಿತು. ಮೊದಲ ಕಿಕ್ ತೆಗೆದುಕೊಂಡ ಜರ್ಮನಿಯ ಕೈ ಹ್ಯಾವರ್ಟ್ಜ್ ಮತ್ತು ನಾಲ್ಕನೇ ಕಿಕ್ ತೆಗೆದುಕೊಂಡ ನಿಕ್ ವೋಲ್ಟ್‌ಮೀಡ್ ಅವರನ್ನು ಪರಾಗ್ವೆಯ ಕೀಪರ್‌ಒರ್ಲ್ಯಾಂಡೊ ಗೋಲು ಗಳಿಸಿದಂತೆ ತಡೆದರು.

ನಂತರ ಕೊನೆಯ ಎರಡು ಕಿಕ್‌ಗಳನ್ನು ತಪ್ಪಿಸಿಕೊಂಡ ಪರಾಗ್ವೆ ಕೂಡ ಒತ್ತಡಕ್ಕೆ ಸಿಲುಕಿತು. ಇದರಿಂದಾಗಿ ಪಂದ್ಯವು ಸಡನ್ ಡೆತ್‌ಗೆ ಹೋಯಿತು. ಸಡನ್ ಡೆತ್‌ನಲ್ಲಿ ಮೊದಲ ಕಿಕ್ ತೆಗೆದುಕೊಂಡ ಜರ್ಮನ್ ಆಟಗಾರ ಜೊನಾಥನ್ ತಾಹಿನ್ ಹೊಡೆದ ಚೆಂಡು ಶಾಟ್ ಕ್ರಾಸ್‌ಬಾರ್‌ಮೇಲೆ ಹೋಯ್ತು, ಬಳಿಕ ಜೋಸ್ ಕೆನಾಲೆ ಗೋಲು ಗಳಿಸಿ ಪರಾಗ್ವೆಗೆ ಐತಿಹಾಸಿಕ ಗೆಲುವು ತಂದುಕೊಟ್ಟರು.

ವಿಶ್ವಕಪ್ ಇತಿಹಾಸದಲ್ಲಿ ಜರ್ಮನಿ ಪೆನಾಲ್ಟಿ ಶೂಟೌಟ್‌ನಲ್ಲಿ ಸೋತಿರುವುದು

ಇದೇ ಮೊದಲು. ಜರ್ಮನಿ ತನ್ನ ಹಿಂದಿನ ನಾಲ್ಕು ಶೂಟೌಟ್‌ಗಳಲ್ಲಿಯೂ ಗೆಲುವು ಸಾಧಿಸಿತ್ತು. ಪ್ರಮುಖ ಅಂತಾರಾಷ್ಟ್ರೀಯ ಪಂದ್ಯಾವಳಿಯಲ್ಲಿ ಜರ್ಮನಿ ಶೂಟೌಟ್‌ನಲ್ಲಿ ಸೋತಿರುವುದು ಇದು ಎರಡನೇ ಬಾರಿಯಾಗಿದೆ. 1976ರ ಯುರೋಪಿಯನ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಜೆಕೊಸ್ಲೊವಾಕಿಯಾ ವಿರುದ್ಧ ಹಿಂದಿನ ಸೋಲಾಗಿತ್ತು. ಆ ದಿನ ಜರ್ಮನಿ 5-3 ಅಂತರದಿಂದ ಸೋಲನ್ನು ಕಂಡಿತ್ತು. ಜರ್ಮನಿಯಂತಹ ದೊಡ್ಡ ತಂಡವನ್ನು ಟೂರ್ನಿಯಿಂದ ಹೊರದಬ್ಬಿದ ನಂತರ ಪರಾಗ್ವೆ ಹೆಚ್ಚಿನ ಆತ್ಮವಿಶ್ವಾಸ ಪಡೆದುಕೊಂಡಿದೆ. ಈ ಅವಿಸ್ಮರಣೀಯ ಗೆಲುವಿನೊಂದಿಗೆ, ಪರಾಗ್ವೆ ಅಧಿಕೃತವಾಗಿ ಟೂರ್ನಿಯ ಪ್ರಿ-ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದುಕೊಂಡಿದೆ. 32ನೇ ಸುತ್ತಿನ ಇತರ ಪಂದ್ಯಗಳ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ, ಮುಂದಿನ ನಾಕೌಟ್ ಪಂದ್ಯದಲ್ಲಿ ಪರಾಗ್ವೆ ಯಾರನ್ನು ಎದುರಿಸಲಿದೆ ಎಂಬುದು ಸ್ಪಷ್ಟವಾಗುತ್ತದೆ. ವಿಶ್ವಕಪ್ ಗೆಲ್ಲುವ ಸಾಧ್ಯತೆ ಇದೆ ಎಂದು ಪರಿಗಣಿಸಲಾದ ತಂಡಗಳಲ್ಲಿ ಒಂದಾದ ಜರ್ಮನಿಯ ಅನಿರೀಕ್ಷಿತ ಸೋಲು ಫುಟ್ಬಾಲ್ ಅಭಿಮಾನಿಗಳನ್ನು ಭಾರಿ ನಿರಾಶೆಗೊಳಿಸಿದೆ.

ಏಷ್ಯನ್ ಗೇಮ್ಸ್‌ಗೆ ಭಾರತ ಮಹಿಳಾ ತಂಡ ಪ್ರಕಟ; ನಾಯಕಿಯಾಗಿ ಹರ್ಮನ್‌ಪ್ರೀತ್ ಕೌರ್ ಮುಂದುವರಿಕೆ



ಹೊಸದಿಲ್ಲಿ, ಜೂ.30 - ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂಬರುವ 2026 ರ ಏಷ್ಯನ್ ಕ್ರೀಡಾಕೂಟಕ್ಕೆ ಭಾರತದ ಮಹಿಳಾ ತಂಡವನ್ನು ಪ್ರಕಟಿಸಿದೆ. ಟಿ20 ವಿಶ್ವಕಪ್‌ನಲ್ಲಿ ತಂಡ ಗುಂಪು ಹಂತದಲ್ಲೇ ಹೊರಬಿದ್ದ ಹೊರತಾಗಿಯೂ ಹರ್ಮನ್‌ಪ್ರೀತ್ ಕೌರ್‌ತಂಡವನ್ನು ಮುನ್ನಡೆಸಲಿದ್ದಾರೆ.

ಟಿ20 ವಿಶ್ವಕಪ್‌ನಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಕಂಡಿದ್ದ ಯಸ್ತಿಕಾ ಭಾಟಿಯಾ ಅವರನ್ನು ತಂಡದಿಂದ ಕೈಬಿಡಲಾಗಿದೆ. ಅವರ ಬದಲು ಜಿ. ಕಮಲಿನಿ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಗಾಯಾಳು ಶ್ರೇಯಾಂಕ ಪಾಟೀಲ್‌ಗೂ ತಂಡದಲ್ಲಿ ಸ್ಥಾನ ಕಲ್ಪಿಸಲಾಗಿದೆ. ಆದರೆ ಅವರ ಭಾಗವಹಿಸುವಿಕೆಯು ಫಿಟ್‌ನೆಸ್‌ಗೆ ಒಳಪಟ್ಟಿರುತ್ತದೆ. ಟಿ20 ವಿಶ್ವಕಪ್ ವೇಳೆ ಕಾಲಿನ ಗಾಯಕ್ಕೆ ತುತ್ತಾಗಿ ಟೂರ್ನಿಯಿಂದ ಅವರು ಹೊರಬಿದ್ದಿದ್ದರು.

ಜಪಾನ್‌ನಲ್ಲಿ ನಡೆಯಲಿರುವ 2026 ರ ಐಚಿ-ನಗೋಯಾ ಕ್ರೀಡಾಕೂಟದಲ್ಲಿ ಕ್ರಿಕೆಟ್ ಮತ್ತೊಮ್ಮೆ ಏಷ್ಯನ್ ಕ್ರೀಡಾಕೂಟದ ಕಾರ್ಯಕ್ರಮದ ಭಾಗವಾಗಲಿದೆ, ಸೆಪ್ಟೆಂಬರ್24 ರಿಂದ ಅಕ್ಟೋಬರ್3 ರವರೆಗೆ ಪುರುಷ ಮತ್ತು ಮಹಿಳಾ ಎರಡೂ ಸ್ಪರ್ಧೆಗಳು ಟಿ20 ಅಂತರರಾಷ್ಟ್ರೀಯ ಸ್ವರೂಪದಲ್ಲಿ ನಡೆಯಲಿವೆ. ಈ ಕ್ರೀಡಾಕೂಟದಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನ ಸೇರಿದಂತೆ ಏಷ್ಯಾದ ಪ್ರಮುಖ ಕ್ರಿಕೆಟ್ ರಾಷ್ಟ್ರಗಳು ಮತ್ತು ಖಂಡದಾದ್ಯಂತದ ಉದಯೋನ್ಮುಖ ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ.

2022 ರ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಪುರುಷ ಮತ್ತು ಮಹಿಳಾ ಎರಡೂ ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದರು. 2026 ರ ಆವೃತ್ತಿಯು ಮತ್ತೊಂದು ತೀವ್ರ ಪೈಪೋಟಿಯ ಪಂದ್ಯಾವಳಿಯ ಭರವಸೆ ನೀಡಲಿದೆ. 2028 ರ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕ್ರೀಡಾಕೂಟಕ್ಕೆ ಕ್ರಿಕೆಟ್ ಮರಳಲು ತಯಾರಿ ನಡೆಸುತ್ತಿರುವ ತಂಡಗಳಿಗೆ ಪ್ರಮುಖ ವೇದಿಕೆಯಾಗಿಯೂ ಕಾರ್ಯನಿರ್ವಹಿಸುತ್ತದೆ.

2026ರ ಏಷ್ಯನ್ ಗೇಮ್ಸ್‌ಗೆ ಭಾರತ ತಂಡ: ಹರ್ಮನ್‌ಪ್ರೀತ್ ಕೌರ್(ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್ (ವಿ.ಕೀ.), ಜಿ. ಕಮಲಿನಿ (ವಿ.ಕೀ.), ಭಾರತಿ ಫುಲ್ಮಾಲಿ, ಶ್ರೀ ಚರಣಿ, ಶ್ರೀ ಚರಣಿ, ರೇಣುಕಾ ತಾ ರೆಡ್ಡಿ, ರೇಣುಕಾ ರೆಡ್ಡಿ, ರೇಣುಕಾ ರೆಡ್ಡಿ ಶ್ರೇಯಾಂಕಾ ಪಾಟೀಲ್ಜ್, ರಾಧಾ ಯಾದವ್, ನಂದಿನಿ ಶರ್ಮಾ.

ಒಂದೇ ಸೂರಿನಡಿ ಎಲ್ಲಾ ಸೌಲಭ್ಯ ; ಮುಂಬಯಿ ತೊರೆದು ಬೆಂಗಳೂರಿಗೆ ಶಿಫ್ಟ್ ಆದ ಹಾರ್ದಿಕ್ ಪಾಂಡ್ಯ



ಮುಂಬಯಿ , ಜೂ.30 - ಹಾರ್ದಿಕ್ ಪಾಂಡ್ಯ ತಮ್ಮ ಕ್ರಿಕೆಟ್ ವೃತ್ತಿಜೀವನವನ್ನು ವಿಸ್ತರಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ, ಇದುವರೆಗೆ ಯಾವುದೇ ಪ್ರಮುಖ ಭಾರತೀಯ ಕ್ರಿಕೆಟಿಗರು ಯೋಚಿಸದ ನಿರ್ಧಾರ ತೆಗೆದುಕೊಂಡಿದ್ದಾರೆ. ಟೀಮ್ ಇಂಡಿಯಾದ ಸ್ಟಾರ್‌ಆಲ್‌ರೌಂಡರ್‌ತಮ್ಮ ತರಬೇತಿ ನೆಲೆಯನ್ನು ಶಾಶ್ವತವಾಗಿ ಬೆಂಗಳೂರಿಗೆ ಸ್ಥಳಾಂತರಿಸಿದ್ದಾರೆ. ಈಗ, ಅವರು ಭಾರತ ತಂಡ, ಐಪಿಎಲ್ ಅಥವಾ ದೇಶೀಯ ಕ್ರಿಕೆಟ್‌ನಲ್ಲಿ ಆಡದಿರುವ ಸಮಯದಲ್ಲಿ ಅವರು ಬಿಸಿಸಿಐನ ಸೆಂಟರ್‌ಆಫ್ ಎಕ್ಸಲೆನ್ಸ್ (ಸಿಒಇ) ನಲ್ಲಿ ತರಬೇತಿ ಪಡೆಯಲಿದ್ದಾರೆ.

ಇದು ಕೇವಲ ನಗರವನ್ನು ಬದಲಾಯಿಸುವ ನಿರ್ಧಾರವಲ್ಲ, ಬದಲಾಗಿ ನಿರಂತರವಾಗಿ ಗಾಯಗಳಿಂದ ಬಳಲುತ್ತಿರುವ ಹಾರ್ದಿಕ್ ಅವರ ಇಡೀ ಕ್ರಿಕೆಟ್ ತಂತ್ರವನ್ನೇ ಬದಲಾಯಿಸುವ ಒಂದು ಹೆಜ್ಜೆಯಾಗಿದೆ. ಆರಂಭಿಕ ವರ್ಷಗಳಿಂದ ಹಾರ್ದಿಕ್ ಪಾಂಡ್ಯ ತಮ್ಮ ಮ್ಯಾಚ್ ವಿನ್ನಿಂಗ್ ಬ್ಯಾಟಿಂಗ್ ಮತ್ತು ಬೌಲಿಂಗ್‌ನಿಂದ ಪ್ರಸಿದ್ಧರಾಗಿದ್ದರು. ಆದರೆ ಪ್ರಸ್ತುತ ಅವರ ಫಿಟ್ನೆಸ್ ಕೂಡ ಕಳವಳಕಾರಿಯಾಗಿದೆ. ಪಾದದ ಗಾಯ, ಬೆನ್ನು ಸಮಸ್ಯೆ, ಮತ್ತು ಈಗ ಕ್ವಾಡ್ರೈಸ್ಪ್ಸ್ ಗಾಯ ಅವರನ್ನ ತಂಡದಿಂದ ಹೊರಗುಳಿಯುವಂತೆ ಮಾಡಿದೆ. ಪದೇ ಪದೇ ಗಾಯಗೊಳ್ಳುವುದರಿಂದ ಅವರು ಹಲವಾರು ಪ್ರಮುಖ ಸರಣಿಗಳು ಮತ್ತು ಪಂದ್ಯಾವಳಿಗಳನ್ನು ಕಳೆದುಕೊಂಡಿದ್ದಾರೆ. ಈ ಕಾರಣದಿಂದಾಗಿಯೇ ಅವರು ಈಗ ತಮ್ಮ ವೃತ್ತಿಜೀವನದ ಉಳಿದ ವರ್ಷಗಳನ್ನು ಸಂಪೂರ್ಣವಾಗಿ ಫಿಟ್‌ನೆಸ್‌ಗೆ ಅನುಗುಣವಾಗಿ ಯೋಜಿಸಲು ನಿರ್ಧರಿಸಿದ್ದಾರೆ.

ಹಾರ್ದಿಕ್ ಮೂಲತಃ ಬರೋಡಾದವರಾಗಿದ್ದರೂ, ಕಳೆದ ಹಲವು ವರ್ಷಗಳಿಂದ ಮುಂಬೈನಲ್ಲಿ ವಾಸಿಸುತ್ತಿದ್ದಾರೆ, ಅಲ್ಲಿ ಅವರು ಮುಂಬೈ ಇಂಡಿಯನ್ಸ್‌ನ ಹೈ-ಪರ್ಫಾರ್ಮೆನ್ಸ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿದ್ದರು. ಆದರೆ ಬಿಸಿಸಿಐ ಮೂಲದ ಪ್ರಕಾರ, ಲೋವರ್ ಪರೇಲ್‌ನಲ್ಲಿರುವ ಅವರ ಮನೆಯಿಂದ ಪ್ರತಿದಿನ ತರಬೇತಿಗೆ ಹೋಗುವ ದೀರ್ಘ ಪ್ರಯಾಣವು ಒಂದು ಸವಾಲಾಗಿ ಪರಿಣಮಿಸುತ್ತಿತ್ತು. ಮತ್ತೊಂದೆಡೆ, ಬೆಂಗಳೂರಿನ ಸಿಒಇ ಅವರಿಗೆ ವಿಶ್ವ ದರ್ಜೆಯ ವೈದ್ಯಕೀಯ, ತರಬೇತಿ, ಫಿಟ್‌ನೆಸ್ ಮತ್ತು ಕೌಶಲ್ಯ ತರಬೇತಿ ಸೌಲಭ್ಯಗಳೆಲ್ಲವೂ ಒಂದೇ ಸೂರಿನಡಿ ಸಿಗಲಿದೆ. ಇದಕ್ಕಾಗಿಯೇ ಅವರು ಬೆಂಗಳೂರಿನ ಹೊರವಲಯದಲ್ಲಿರುವ ಸಿಒಇ ಬಳಿ ಒಂದು ಮನೆಯನ್ನು ಬಾಡಿಗೆಗೆ ಪಡೆದು ಅದನ್ನು ತಮ್ಮ ಶಾಶ್ವತ ತರಬೇತಿ ನೆಲೆಯನ್ನಾಗಿ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲು: ಇಲ್ಲಿಯವರೆಗೆ, ಭಾರತದಕೇಂದ್ರೀಯ ಒಪ್ಪಂದದ ಆಟಗಾರರು ಅಗತ್ಯವಿದ್ದಾಗ ಮಾತ್ರ ಸಿಒಇಗೆ ಭೇಟಿ ನೀಡುತ್ತಿದ್ದರು, ಗಾಯದ ಪುನರ್ವಸತಿ, ಫಿಟ್ನೆಸ್ ಪರೀಕ್ಷೆಗಳು ಅಥವಾ ರಾಷ್ಟ್ರೀಯ ತಂಡದ ಶಿಬಿರಗಳ ಸಮಯದಲ್ಲಿ ಅಲ್ಲಿ ಸಮಯ ಕಳೆಯುತ್ತಿದ್ದರು. ಈ ಸಂಪ್ರದಾಯವನ್ನು ಮುರಿದ ಮೊದಲ ಪ್ರಮುಖ ಸಕ್ರಿಯ ಭಾರತೀಯ ಕ್ರಿಕೆಟಿಗ ಹಾರ್ದಿಕ್ ಆಗಿದ್ದಾರೆ. ಈಗ, ಅವರ ನಿಯಮಿತ ಅಭ್ಯಾಸ, ಚೇತರಿಕೆ ಮತ್ತು ಫಿಟ್ನೆಸ್ ಕಾರ್ಯಕ್ರಮಗಳನ್ನು ಈ ಕೇಂದ್ರದಿಂದಲೇ ನಡೆಸಲಾಗುವುದು. ಮುಂದಿನ ಐದರಿಂದ ಆರು ವರ್ಷಗಳ ಕಾಲ ಭಾರತ ಪರ ವೈಟ್-ಬಾಲ್ ಕ್ರಿಕೆಟ್ ಆಡಲು ಹಾರ್ದಿಕ್ ಬಯಸಿದ್ದಾರೆ ಮತ್ತು ಆ ಗುರಿಯನ್ನು ಗಮನದಲ್ಲಿಟ್ಟುಕೊಂಡು ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಶ್ವಕಪ್ ಆಡುವ ಬಯಕೆ: ಹಾರ್ದಿಕ್ ಟೆಸ್ಟ್‌ನಿಂದ ಸಂಪೂರ್ಣ ದೂರವಾಗಿದ್ದಾರೆ. ಕಮ್‌ಬ್ಯಾಕ್ ಮಾಡುವ ಇರಾದೆ ಅವರಲ್ಲಿಲ್ಲ. ಹಾಗಾಗಿ ವೈಟ್ ಬಾಲ್ ಕ್ರಿಕೆಟ್ ಆಡಲು ಅವರು ಅಚಲರಾಗಿದ್ದಾರೆ. ಪ್ರಸ್ತುತ ಗಾಯದ ಕಾರಣದಿಂದ ಅವರು ಟೀಮ್ ಇಂಡಿಯಾದಿಂದ ಹೊರಗುಳಿದಿದ್ದಾರೆ. ಪ್ರಸ್ತುತ ಅವರಿಗೆ 10 ಓವರ್ ಬೌಲಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಏಕದಿನ ವಿಶ್ವಕಪ್ ಆಡಬೇಕೆಂಬ ಅವರ ಬಯಕೆ ತಂಡದಲ್ಲಿ ಅಗಾಧವಾಗಿದೆ. ಹಾಗಾಗಿ ಅವರು ಬೆಂಗಳೂರಿನಲ್ಲಿ ನೆಲೆಸಿ ಫಿಟ್‌ನೆಸ್ ಕಾಪಾಡಿಕೊಳ್ಳಲು ನಿರ್ಧರಿಸಿದ್ದಾರೆ.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ ಬೆನ್ ಸ್ಟೋಕ್ಸ್‌ಗೆ ಸಂದೇಶ ರವಾನಿಸಿದ ಸಚಿನ್ ತೆಂಡೂಲ್ಕರ್



ಹೊಸದಿಲ್ಲಿ, ಜೂ.30 - ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್ ತಂಡಗಳ ನಡುವಣ ಮೂರನೇ ಟೆಸ್ಟ್ ಪಂದ್ಯದ ವೇಳೆ ನಾಯಕ ಬೆನ್ ಸ್ಟೋಕ್ಸ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿ ಎಲ್ಲರಿಗೂ ಶಾಕ್ ನೀಡಿದ್ದರು. ಇದರ ಬೆನ್ನಲೆ ಕ್ರಿಕೆಟ್ ಜಗತ್ತು ಬೆನ್ ಸ್ಟೋಕ್ಸ್‌ಗೆ ಅಭಿನಂದನೆ ಹಾಗೂ ಅವರು ಆಟಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿಕೊಂಡು ಗೌರವ ಸಲ್ಲಿಸಿದರು. ಇದೀಗ ಭಾರತ ತಂಡದ ಮಾಜಿ ನಾಯಕ ಹಾಗೂ ಕ್ರಿಕೆಟ್ ದೇವರು ಖ್ಯಾತಿಯ ಸಚಿನ್ ತೆಂಡೂಲ್ಕರ್ ಕೂಡ, ಬೆನ್ ಸ್ಟೋಕ್ಸ್‌ಗೆ ವಿಶೇಷ ಸಂದೇಶವನ್ನು ರವಾನಿಸಿದ್ದಾರೆ.ಸಚಿನ್ ತೆಂಡೂಲ್ಕರ್ ಅವರು ತಮ್ಮ ಭಾವನಾತ್ಮಕ ವಿದಾಯ ಸಂದೇಶದಲ್ಲಿ ಸ್ಟೋಕ್ಸ್ ಅವರ ನಾಯಕತ್ವದ ಗುಣಗಳನ್ನು ಶ್ಲಾಘಿಸಿದ್ದಾರೆ ಹಾಗೂ ಅವರನ್ನು ಇಂಗ್ಲೆಂಡ್‌ನ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರೆಂದು ಬಣ್ಣಿಸಿದ್ದಾರೆ. ಇದರ ಜೊತೆಗೆ ಅವರ ಜೀವನದ ಮುಂದಿನ ಹಂತಕ್ಕೆ ಶುಭ ಹಾರೈಸಿದರು.

ನೀವು ಕ್ರಿಕೆಟ್‌ಗೆ ತಂದ ಉತ್ಸಾಹವನ್ನು ನಾನು ಯಾವಾಗಲೂ ಮೆಚ್ಚಿದ್ದೇನೆ. ನಿಮ್ಮ ಸಕಾರಾತ್ಮಕ ಮನೋಭಾವ, ನಿರ್ಭೀತಿಯ ಆಟದ ಶೈಲಿ ಮತ್ತು ಒತ್ತಡದ ಕ್ಷಣಗಳಲ್ಲಿ ಪಂದ್ಯವನ್ನು ತಿರುಗಿಸುವ ನಿಮ್ಮ ಸಾಮರ್ಥ್ಯವು ಪ್ರತಿ ಬಾರಿ ಎದ್ದು ಕಾಣುತ್ತಿತ್ತು. ಆಲ್‌ರೌಂಡರ್‌ಆಗಿ ನೀವು ಇಂಗ್ಲೆಂಡ್ ಕಂಡ ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾಗಿದ್ದೀರಿ. ನಾಯಕನಾಗಿ ನಿಮ್ಮ ದಿಟ್ಟ ತಂತ್ರಗಳು ಮತ್ತು ಪಂದ್ಯದ ಸ್ಥಿತಿಯನ್ನು ಕ್ಷಣಾರ್ಧದಲ್ಲಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವು ನಿಮ್ಮ ತಂಡಕ್ಕೆ ಹೊಸ ಶಕ್ತಿಯನ್ನು ನೀಡಿತು. ನಿಮ್ಮ ಜೀವನದ ಮುಂದಿನ ಅಧ್ಯಾಯಕ್ಕೆ ಹೃತ್ಪೂರ್ವಕ ಶುಭಾಶಯಗಳು. ನಿಮ್ಮನ್ನು ತಿಳಿದಿರುವ ನನಗೆ, ಮೈದಾನದಿಂದ ದೂರವಿರುವುದೇ ನಿಮಗೆ ಅತ್ಯಂತ ಕಠಿಣವಾಗಬಹುದು ಎಂದು ಅನಿಸುತ್ತದೆ. ನಿಮ್ಮ ಜೀವನದ ಮುಂದಿನ ಇನಿಂಗ್ಸ್‌ಗೆ ಶುಭವಾಗಲಿ ಎಂದು ಸಚಿನ್ ತೆಂಡೂಲ್ಕರ್‌ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.